ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಪಾತ್ರ-
ಒಂದು ಅಧ್ಯಯನ - ಮೂಡಬಿದಿರೆ ಕ್ಷೇತ್ರವನ್ನು ಅನುಲಕ್ಷಿಸಿ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ
(ಅಭಿವೃದ್ಧಿ ಅಧ್ಯಯನ)
ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು
ಅಕ್ಷತಾ
ನೋಂದಣಿ ಸಂಖ್ಯೆ: KTSMDS-೦೦೬೯೬

ಮಾರ್ಗದರ್ಶಕರು:
ಡಾ. ವಾಲ್ಟರ್ ಡಿ'ಸೋಜ

ಕರ್ನಾಟಕ ತಿಯೋಲೊಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು ೦೧
ಜುಲೈ - ೨೦೧೫

1232

[illegible]

ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಪಾತ್ರ – ಒಂದು ಅಧ್ಯಯನ – ಮೂಡಬಿದಿರೆ ಕ್ಷೇತ್ರವನ್ನು ಅನುಲಕ್ಷಿಸಿ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ

(ಅಭಿವೃದ್ಧಿ ಅಧ್ಯಯನ)

ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಅಕ್ಷತಾ

ನೋಂದಣಿ ಸಂಖ್ಯೆ: KTSMDS-೦೦೬೬

ಮಾರ್ಗದರ್ಶಕರು:

ಡಾ. ವಾಲ್ಟರ್ ಡಿ'ಸೋಜ

ಕರ್ನಾಟಕ ತಿಯೋಲೋಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು – ೦೧

ಜುಲೈ – ೨೦೧೫

ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಪಾತ್ರ – ಒಂದು ಅಧ್ಯಯನ – ಮೂಡಬಿದಿರೆ ಕ್ಷೇತ್ರವನ್ನು ಅನುಲಕ್ಷಿಸಿ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ

(ಅಭಿವೃದ್ಧಿ ಅಧ್ಯಯನ)

ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಅಕ್ಷತಾ

ನೋಂದಣಿ ಸಂಖ್ಯೆ: KTSMDS-೦೦೬೬

ಮಾರ್ಗದರ್ಶಕರು:

ಡಾ. ವಾಲ್ಟರ್ ಡಿ'ಸೋಜ

ಕರ್ನಾಟಕ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು – ೦೧

ಜುಲೈ – ೨೦೧೫

ಯೋಗ್ಯತಾ ಪತ್ರ

ಅಕ್ಷತಾ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **"ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಪಾತ್ರ – ಒಂದು ಅಧ್ಯಯನ – ಮೂಡಬಿದಿರೆ ಕ್ಷೇತ್ರವನ್ನು ಅನುಲಕ್ಷಿಸಿ"** ಎಂಬ ಶೀರ್ಷಿಕೆಯ ಈ ಸಂಪ್ರಂಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಂಬಂಧವು ಸಂಶೋಧಕರ ಸ್ವಂತ ಪರಿಶ್ರಮ ವಿಶ್ಲೇಷಣೆ ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಈ ಸಂಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲೀ ಬಳಸಿಕೊಂಡಿಲ್ಲ.

ಡಾ. ವಾಲ್ಟರ್ ಡಿ'ಸೋಜಾ

ಸಂಶೋಧನಾ ಮಾರ್ಗದರ್ಶಕರು

ಕರ್ನಾಡಕ ತಿಯೋಲೋಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು.

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರ ಪಡಿಸಿದ **"ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಪಾತ್ರ- ಒಂದು ಅಧ್ಯಯನ- ಮೂಡಬಿದಿರೆ ಕ್ಷೇತ್ರವನ್ನು ಅನುಲಕ್ಷಿಸಿ"** ಎಂಬ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲಶ್ರುತಿಯಾಗಿದೆ. ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ವಾಲ್ಟರ್ ಡಿ'ಸೋಜಾ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ ಡಿಪ್ಲೊಮಾ ಅಥವಾ ತತ್ಸಮಾನ ಉಪಾದಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

ಅಕ್ಷತಾ

ಸಂಶೋಧಕರು

ಕರ್ನಾಟಕ ತಿಯೋಲೋಜಿಕಲ್ ಸಂಶೋಧನಾ ಕೇಂದ್ರ,

ಬಲ್ಮಠ, ಮಂಗಳೂರು.

“ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಬ್ಯಾಂಕಿನ ಪಾತ್ರ– ಒಂದು ಅಧ್ಯಯನ– ಮೂಡಬಿದಿರೆ ಕ್ಷೇತ್ರವನ್ನು ಅನುಲಕ್ಷಿಸಿ” : ಅಧ್ಯಯನದ ವಿವರಗಳು

ಅಧ್ಯಾಯ ೧

ಪೀಠಿಕೆ, ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ –೧

ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಅಧ್ಯಾಯಗಳ ಪರಿಚಯ:

೧.೧ ಪೀಠಿಕೆ:

ಬ್ಯಾಂಕಿಂಗ್ ಎನ್ನುವುದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದ್ದು, ಪ್ರತಿಯೊಂದು ಚಟುವಟಿಕೆಯಲ್ಲೂ ಹಣಕಾಸಿನ ಪಾತ್ರ ವಿಶಿಷ್ಟವಾದುದು. ಆರ್ಥಿಕತೆಯ ಪ್ರತಿ ವಲಯದಲ್ಲೂ ದಿನನಿತ್ಯದ ಕಾರ್ಯನಿರ್ವಹಿಸಲು ಹಣಕಾಸಿನ ಅವಶ್ಯಕತೆಯಿಂದೆ. ಈ ನಿಟ್ಟಿನಲ್ಲಿ ಯಾವುದೇ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಬ್ಯಾಂಕುಗಳು ಪ್ರಧಾನ ಪಾತ್ರವನ್ನು ವಹಿಸುತ್ತವೆ. ವ್ಯವಹಾರದ ಆಗುಹೋಗುಗಳಿಗೆ, ಅದರ ಉನ್ನತೀಕರಣಕ್ಕೆ, ಉದ್ಯೋಗಾವಕಾಶ ಸೃಷ್ಟಿಸಲು ಇತ್ಯಾದಿ ಪ್ರಬಲ ಉದ್ದೇಶಗಳಿಗೆ ಹಣಕಾಸು ಬೇಕೇ ಬೇಕು.

ಏಷ್ಯಾದ ಇತರ ದೇಶಗಳಿಗೆ ಹೋಲಿಸಿದಾಗ ಭಾರತದ ಬ್ಯಾಂಕಿಂಗ್ ವ್ಯವಸ್ಥೆಯು ಭೌಗೋಳಿಕ, ಸಾಮಾಜಿಕ, ಆರ್ಥಿಕ ಗುಣಲಕ್ಷಣಗಳಲ್ಲಿ ವಿಭಿನ್ನವಾಗಿದೆ. ಉದಾಹರಣೆಗೆ ಭಾರತವು ದೊಡ್ಡ ಜನಸಂಖ್ಯೆ, ಭೂಗಾತ್ರ, ವಿಭಿನ್ನ ಸಂಸ್ಕೃತಿ, ಅಸಮಾನ ಆಧಾಯ ಇತ್ಯಾದಿ ಭಿನ್ನತೆಗಳಿಂದ ಕೂಡಿರುವುದು ಆರ್ಥಿಕವಾಗಿಯೂ ವಿಭಿನ್ನವಾಗಿರಲು ಪ್ರೇರಣೆಯೆನ್ನಬಹುದು.

ದೇಶದ ಒಟ್ಟು ಜನಸಂಖ್ಯೆಯ ೩೦% ದಿಂದ ೩೫% ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ದೇಶದ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಹಣಕಾಸಿನ ವಲಯವನ್ನು ಪ್ರಭಾವಿಗೊಳಿಸುವಂತಹ ಸಾಕಷ್ಟು ವೈವಿಧ್ಯತೆಗಳು ನಮ್ಮಲ್ಲಿವೆ. ಪಂಚವಾರ್ಷಿಕ ಯೋಜನೆಗಳಲ್ಲಿ ಘೋಷಣೆಯಾದ ಆರ್ಥಿಕ ನೀತಿಯ ಗುರಿಗಳನ್ನು ಪೂರೈಸುವಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯು ಅತೀ ಅವಶ್ಯವಾಗಿದೆ.

ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯ ಮಹತ್ವ:

ದೇಶಕ್ಕೆ ಆಹಾರ ಬೆಳೆಸಿ, ಭದ್ರತೆ ಒದಗಿಸುವ ರೈತರನ್ನು ಭಾರತದ ಬೆನ್ನೆಲುಬು ಎಂದು ಗೌರವಿಸಲಾಗುತ್ತದೆ. ಕೃಷಿ ಜನಸಮೂಹ, ಜನಪರ ಮತ್ತು ಜನಸಾಂದ್ರ ಚಟುವಟಿಕೆಯಾಗಿದ್ದು ಜನನಿಬಿಡತೆ ಇರುವ ಭಾರತದ ಕೃಷಿ ಜಾಗತೀಕರಣ ಮತ್ತು ಜಾಗತಿಕ ತಾಪಮಾನ ಏರಿಕೆ ಮೊದಲಾದ

ಕಾರಣಗಳಿಂದ ಕುಂಠಿತ ಬೆಳವಣಿಗೆ ಹೊಂದಿದೆ. ರೈತರು ಆರ್ಥಿಕವಾಗಿ, ಸಾಮಾಜಿಕವಾಗಿ ಸಂಕಷ್ಟ–ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾರೆ. ಈ ಸವಾಲುಗಳನ್ನು ಎದುರಿಸುವ ಮತ್ತು "ಒಳಗೊಳ್ಳುವ ಬೆಳವಣಿಗೆ"ಯನ್ನು ಗ್ರಾಮೀಣ ಭಾರತದಲ್ಲಿ ಮತ್ತು ವಿಶೇಷವಾಗಿ ಕೃಷಿರಂಗದಲ್ಲಿ ಸಾಕಾರಗೊಳಿಸುವ ಅಗತ್ಯ ಇದೆ (ಹನ್ಸ್ ೨೦೦೩).

ಕೃಷಿಯು ಹವಾಮಾನವನ್ನು ಆಧರಿಸಿರುವ ವೃತ್ತಿಯಾಗಿದ್ದು ಪ್ರತಿಕೂಲ ಹವಾಮಾನವು ಕೃಷಿಕರ ಬಾಳನ್ನು ಕಂಗೆಡಿಸುತ್ತದೆ. ಕೃಷಿಯು ಮಳೆಯೊಡನಾಡುವ ಜೂಜು ಎಂಬ ಹೇಳಿಕೆ ಭಾರತದಲ್ಲಿ ಪ್ರಚಲಿತವಿದೆ. ಕೃಷಿ ಚಟುವಟಿಕೆಗಳ ಅನಿಶ್ಚಿಕತೆಗಳು ಭಾರತದ ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರನ್ನು ಸಾಲದ ಸುಳಿಯಲ್ಲಿ ಸಿಲುಕಿಸುತ್ತವೆ. ಭಾರತದ ರೈತರು ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲಿ ಸತ್ತು, ಸಾಲವನ್ನು ತಮ್ಮ ಉತ್ತರಾಧಿಕಾರಿಗಳಿಗೆ ಪಿತ್ರಾರ್ಜಿತ ಆಸ್ತಿಯನ್ನಾಗಿ ನೀಡುತ್ತಾರೆ ಎನ್ನುವ ಮಾತು ಕೃಷಿಯಲ್ಲಿ ಹಣಕಾಸಿನ ಪಾತ್ರವನ್ನು ಬಿಂಬಿಸುತ್ತದೆ.

ಕೃಷಿಯನ್ನು ಭಾರತದ ಆರ್ಥಿಕತೆಯ ಬೆನ್ನೆಲುಬು ಎಂದು ಪರಿಗಣಿಸಲಾಗುತ್ತದೆ. ಸ್ವಾತಂತ್ರ ಗಳಿಸಿ ಆರು ದಶಕಗಳೇ ಕಳೆದರೂ ದೇಶ ಹತ್ತು ಯೋಜನೆಗಳನ್ನು ಕಂಡ ಬಳಿಕವೂ ನಮ್ಮದು ಕೃಷಿ ಪ್ರಧಾನ ಆರ್ಥಿಕತೆಯಾಗಿಯೇ ಉಳಿದುಕೊಂಡಿದೆ. ಆಹಾರ, ಕಚ್ಚಾಸರಕು, ನಿರ್ಯಾತ ಉತ್ಪನ್ನಗಳನ್ನು ಒದಗಿಸುವ ಮೂಲಕ ಬಹುತೇಕ ಭಾರತೀಯರಿಗೆ ಉದ್ಯೋಗ ನೀಡುವ ಕೃಷಿಯು ಆರ್ಥಿಕಾಭಿವೃದ್ಧಿಯಲ್ಲಿ ಮಹತ್ತರವಾದ ಸ್ಥಾನವನ್ನು ಪಡೆದುಕೊಂಡಿದೆ.

೧೯೫೦–೫೨ ರಿಂದ ೧೯೬೦–೬೧ ರ ವರೆಗೆ ರಾಷ್ಟ್ರೀಯ ಆದಾಯದಲ್ಲಿ ಕೃಷಿಯ ಸರಾಸರಿ ಪಾಲು ಶೇ.೫೫ ಆಗಿತ್ತು. ೧೯೭೦ ರ ದಶಕದಲ್ಲಿ ಅದು ಶೇ.೪೫ ಮತ್ತು ೧೯೯೦ ರ ದಶಕದಲ್ಲಿ ಅದು ಶೇ.೩೧ ಕ್ಕಿಳಿಯಿತು. ೨೦೦೪–೦೫ರಲ್ಲಿ ಕೃಷಿಯು ರಾಷ್ಟ್ರೀಯ ಆದಾಯಕ್ಕೆ ನೀಡಿದ ಕಾಣಿಕೆ ಶೇ.೨೨ ರಷ್ಟಿತ್ತು. ರಾಷ್ಟ್ರೀಯ ಆದಾಯದಲ್ಲಿ ಕೃಷಿಯ ಪಾಲು ಇಳಿಯುತ್ತಿದೆಯೆಂದರೆ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳ ಪಾಲು ಹೆಚ್ಚುತ್ತಿದೆಯೆಂದರ್ಥ. ಇದು ಪ್ರಗತಿಯ ಸಂಕೇತವಾಗಿದೆ, ಅಲ್ಲದೆ ಮುಂದುವರಿದ ದೇಶಗಳೊಡನೆ ಹೋಲಿಸಿದರೆ ಈಗಲೂ ಭಾರತದಲ್ಲಿ ಕೃಷಿಯ ಕೊಡುಗೆ ಗಣನೀಯವಾಗಿದೆ. ಬ್ರಿಟನ್ನಿನ ಆದಾಯದಲ್ಲಿ ಶೇ.೩, ಕೆನಡಾದ ಆದಾಯದಲ್ಲಿ ಶೇ ೪ ಮತ್ತು ಆಸ್ಟ್ರೇಲಿಯಾದ ಆದಾಯದಲ್ಲಿ ಶೇ.೫

ರಷ್ಟು ಕೃಷಿವಲಯದ ಕೊಡುಗೆಯಿದೆ. ಭಾರತದ ರಾಷ್ಟ್ರೀಯ ಆದಾಯದಲ್ಲಿ ಈಗಲೂ ಶೇ.೨೨ ರಷ್ಟು ಕೃಷಿವಲಯದಿಂದಲೇ ಬರುತ್ತಿದೆ. ಇದು ಭಾರತದ ಆರ್ಥಿಕತೆಯ ಕೃಷಿ ಪ್ರಾಧಾನ್ಯತೆಯ ಸಂಕೇತವಾಗಿದೆ.

ದೇಶದ ಜನಸಂಖ್ಯೆಯಲ್ಲಿ ಈಗಲೂ ಸುಮಾರು ಶೇ ೫೩ ರಷ್ಟು ಮಂದಿ ಕೃಷಿಯನ್ನು ಅವಲಂಬಿಸಿದ್ದಾರೆ. ೧೯೫೧ ರಲ್ಲಿ ದೇಶದ ಒಟ್ಟು ಜನಸಂಖ್ಯೆ ೩೬೧ ದಶಲಕ್ಷವಾಗಿತ್ತು. ಅವರಲ್ಲಿ ದುಡಿಯುವವರ ಸಂಖ್ಯೆ ೧೪೦ ದಶಲಕ್ಷವಾಗಿತ್ತು. ದುಡಿಯುವ ಜನಸಂಖ್ಯೆಯಲ್ಲಿ ೭೦ ದಶಲಕ್ಷ ಅಥವಾ ಶೇ.೫೦ ರಷ್ಟು ರೈತರಾದರೆ, ೨೭ ದಶಲಕ್ಷ ಅಥವಾ ಶೇ.೨೦ ಕೃಷಿ ಕಾರ್ಮಿಕರಾಗಿದ್ದರು. ೨೦೦೧ ರ ಜನಗಣತಿಯ ಪ್ರಕಾರ ದೇಶದ ಒಟ್ಟು ಜನಸಂಖ್ಯೆ ೧೦೨೭ ದಶಲಕ್ಷವಾಗಿದೆ. ಇವರಲ್ಲಿ ದುಡಿಯುವವರ ಸಂಖ್ಯೆ ೪೦೨ ದಶಲಕ್ಷ ದುಡಿಯುವ ಸಂಖ್ಯೆಯಲ್ಲಿ ೧೨೮ ದಶಲಕ್ಷ ಅಥವಾ ಶೇ.೩೨ ಮಂದಿ ರೈತರಾದರೆ ೧೦೭ ದಶಲಕ್ಷ ಅಥವಾ ಶೇ೨೭ ಮಂದಿ ಕೃಷಿಕಾರ್ಮಿಕರಾಗಿದ್ದಾರೆ. ೧೯೫೧ ರಿಂದ ೨೦೦೧ ರ ವರೆಗಿನ ೫೦ ವರ್ಷಗಳಲ್ಲಿ ರೈತರ ಪ್ರಮಾಣ ಶೇ.೫೦ ರಿಂದ ಶೇ.೩೨ ಕ್ಕೆ ಇಳಿದಿದೆ. ಆದರೆ ಇದೇ ಅವಧಿಯಲ್ಲಿ ಕೃಷಿ ಕಾರ್ಮಿಕ ಪ್ರಮಾಣ ಶೇ.೨೦ ರಿಂದ ಶೇ.೨೭ ಕ್ಕೆ ಏರಿದೆ.

ಭಾರತದಲ್ಲಿ ೭೦ ಶೇ ಮಂದಿ ಕೃಷಿಯಲ್ಲಿ ಜೀವನೋಪಾಯ ಕಂಡುಕೊಂಡಿದ್ದಾರೆ. ಭಾರತದಲ್ಲಿ ಮಾತ್ರವಲ್ಲ ಪ್ರಪಂಚದಲ್ಲಿ ಸುಮಾರು ೭೦ ಶೇ ಮಂದಿ ಕೃಷಿಯನ್ನೇ ಪ್ರಧಾನ ಉದ್ಯೋಗವಾಗಿಸಿಕೊಂಡಿದ್ದಾರೆ. ಭಾರತದ ಬೊಕ್ಕಸಕ್ಕೆ ಬಹುಪಾಲು ಆದಾಯವು ಭೂವ್ಯವಹಾರದಿಂದ ಬರುತ್ತದೆ, ಬಹುಮಂದಿ ಭಾರತೀಯರ ವರಮಾನಕ್ಕೆ ಕೃಷಿಯೇ ಮೂಲವಾಗಿರುವುದರಿಂದ ಉಳಿತಾಯಕ್ಕೂ, ಭೂ ವ್ಯವಸಾಯವೇ ಮೂಲವಾಗಿದೆ. ತೃತೀಯ ರಂಗದ ಉದ್ಯಮಗಳಾದ ವ್ಯಾಪಾರ, ಸಾರಿಗೆ–ಸಂಪರ್ಕ, ಬ್ಯಾಂಕು, ವಿಮೆ ಇತ್ಯಾದಿಗಳಿಗೆ ಭೂವ್ಯವಸಾಯವು ಆಧಾರವಾಗಿದೆ. ಕೃಷಿ ಸಂಪನ್ಮೂಲಗಳ ಸಾಗಾಟದ ನೆಪದಿಂದಾಗಿಯೇ ಇಂದು ಭಾರತದಲ್ಲಿ ರಸ್ತೆ, ರೈಲು ಮತ್ತು ಜಲಸಾರಿಗೆಗಳು ಬಹಳ ಅಭಿವೃದ್ಧಿ ಹೊಂದಿದೆ. ಕೃಷಿ ರಂಗಕ್ಕೆ ಆದ್ಯತೆ ನೀಡಲಿಕ್ಕಾಗಿ ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಗಿದೆ. ಭೂವ್ಯವಸಾಯದ ಪ್ರಗತಿಯಿಂದಾಗಿ ಸಂಪರ್ಕ ವ್ಯವಸ್ಥೆ ಬೆಳೆದಿದೆ. ವಾಣಿಜ್ಯ ಸಂಸ್ಥೆಗಳ ಅಭಿವೃದ್ಧಿಯಾಗಿದೆ. ಬಂಡವಾಳದ ಕೊರತೆ ಭಾರತದ ಅತಿ ದೊಡ್ಡ ಸಮಸ್ಯೆಗಳಲ್ಲಿ ಒಂದಾಗಿದೆ. ಕೃಷಿಗೆ ಕಡಿಮೆ ಬಂಡವಾಳ ಸಾಕು, ಕಡಿಮೆ ಬಂಡವಾಳ ಹಾಕಿದರೂ ಉತ್ಪನ್ನವು ಸಾಪೇಕ್ಷವಾಗಿ ಅಧಿಕವಾಗಿದೆ. ಭಾರತದಲ್ಲಿ ಕೃಷಿಗೆ ಹೆಚ್ಚು ಮಹತ್ವ ದೊರೆಯಲು ಕೃಷಿಯಲ್ಲಿ ಬಂಡವಾಳ ಉತ್ಪನ್ನ ಕಡಿಮೆ ಇರುವುದೇ ಕಾರಣವಾಗಿದೆ.

ಭಾರತದ ಆಂತರಿಕ ವ್ಯಾಪಾರಕ್ಕೆ ಆಹಾರ ಧಾನ್ಯ, ಎಣ್ಣೆಕಾಳು, ಹತ್ತಿ, ಸೆಣಬು, ಕಾಫಿ, ಚಹಾ, ಸಂಬಾರ ಜೀನಸು ಇತ್ಯಾದಿಗಳನ್ನು ಕೃಷಿಯು ಒದಗಿಸುತ್ತದೆ. ಭಾರತದ ದೇಶಿಯ ವ್ಯಾಪಾರದಲ್ಲಿ ಕೃಷಿ ಉತ್ಪನ್ನಗಳದ್ದೇ ಸಿಂಹಪಾಲು. ಭಾರತ ಹಿಂದಿನ ಅರ್ಥವ್ಯವಸ್ಥೆಯು ಕೃಷಿಯ ತಳಪಾಯದ ಮೇಲೆ ನಿಂತಿದೆ. ಭೂತೆರಿಗೆಯು ರಾಜ್ಯ ಸರಕಾರಗಳ ಆದಾಯದ ಮುಖ್ಯ ಮೂಲವಾಗಿದೆ ಕೃಷಿ ಉತ್ಪನ್ನಗಳ ಆಯಾತ ಮತ್ತು ನಿರ್ಯಾತ ತೆರಿಗೆಗಳು ಕೇಂದ್ರ ಸರಕಾರಕ್ಕೆ ಸಾಕಷ್ಟು ಆದಾಯ ತರುತ್ತವೆ. ಭಾರತದ ಮುಂಗಡ ಪತ್ರವನ್ನು ಕೃಷಿಯ ಏರುಪೇರುಗಳನ್ನು ಗಮನದಲ್ಲಿರಿಸಿಕೊಂಡೇ ತಯಾರಿಸಲಾಗುತ್ತದೆ. ಭಾರತದಲ್ಲಿ ಒಟ್ಟು ಅನುಭೋಗ ವೆಚ್ಚದಲ್ಲಿ ಸುಮಾರು ೮೦ ಕೃಷಿ ಉತ್ಪನ್ನಗಳಿಗಾಗಿ ವ್ಯಯವಾಗುತ್ತದೆ. ಹಾಗಾಗಿ ದೇಶದ ಬೆಲೆಯ ವ್ಯವಸ್ಥೆಯ ಮೇಲೆ ಉತ್ಪನ್ನಗಳು ಅಗಾಧ ಪ್ರಭಾವ ಬೀರುತ್ತವೆ.

ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಬೇಸಾಯವು ಭಾರತದ ಬೆನ್ನೆಲುಬು ಎನಿಸಿಕೊಂಡಿದೆ. ಆದರೆ ಭಾರತದ ಭೂವ್ಯವಸಾಯವು ತೀರಾ ಹಿಂದುಳಿದಿದೆ. ಭಾರತದಲ್ಲಿ ಪ್ರತಿ ಹೆಕ್ಟೇರಿಗೆ ದೊರೆಯುವ ಇಳುವರಿ ತುಂಬಾ ಕಡಿಮೆ ಕೃಷಿ ಉತ್ಪನ್ನವು ಬಹಳ ಕಡಿಮೆ ಇರುವುದು ಭಾರತದ ದೊಡ್ಡ ಸಮಸ್ಯೆಗಳಲ್ಲಿ ಒಂದೆನಿಸಿದೆ. ಕೃಷಿಯ ಹಿಂದುಳಿಕೆಗೆ ನೈಸರ್ಗಿಕ ಕಾರಣಗಳಾದ ಅನಿಶ್ಚಿತ ಮಳೆಯ ಮಾರುತಗಳು, ಹಿಮಪಾತ ಮತ್ತು ಆಲಿಕಲ್ಲು ಮಳೆ, ಕ್ರಿಮಿಕೀಟಗಳ ತೊಂದರೆ, ವನ್ಯಮೃಗಗಳ ಬಾಧೆ, ಅರಣ್ಯಗಳ ನಾಶ, ಯುದ್ಧಗಳು, ಭೂಕಂಪ ಮತ್ತು ಭೂ ವಿಭಜನೆ ಇತ್ಯಾದಿ ಪ್ರಮುಖ ಕಾರಣಗಳನ್ನು ನೋಡಬಹುದು. ಅಂತೆಯೇ ಆರ್ಥಿಕ ಮತ್ತು ತಾಂತ್ರಿಕ ಕಾರಣಗಳಾದ ಕೃಷಿಯ ಮೇಲೆ ಅಧಿಕ ಒತ್ತಡ, ಮಣ್ಣಿನ ಸವಕಳಿ, ಛಿದ್ರ–ವಿಛಿದ್ರ ಭೂ ಹಿಡುವಳಿಗಳು, ನೀರಾವರಿ ಸೌಲಭ್ಯದ ಕೊರತೆ, ಕಡಿಮೆ ಭೂಸಾರ, ಸುಧಾರಿತ ಬೀಜಗಳ ಅಭಾವ, ರೋಗ ಪ್ರತಿಬಂಧಕಗಳ ಕೊರತೆ ಇಲಿ ಹೆಗ್ಗಣಗಳ ಸಂಖ್ಯೆ ಅಧಿಕವಾಗಿರುವುದು, ಹಳೆಯ ಯಂತ್ರೋಪಕರಣಗಳ ಮತ್ತು ಸಾಧನಗಳ ಬಳಕೆ, ಸಾರಿಗೆ–ಸಂಪರ್ಕಗಳ ಅಭಾವ, ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸರಿಯಾದ ವ್ಯವಸ್ಥೆ ಇಲ್ಲದಿರುವುದು.

ಕೃಷಿ ಹಣಕಾಸು ವ್ಯವಸ್ಥೆಯು ಕೃಷಿಕರು ತಮ್ಮನ್ನು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಉತ್ತೇಜಕವೂ ಆಗಿದೆ. ಕೃಷಿ ಹಣಕಾಸು ಎಂಬ ಪರಿಕಲ್ಪನೆಯಲ್ಲಿ ಕೃಷಿ ಸಾಲದ ಅಗತ್ಯ, ವಿಧಗಳು ಮತ್ತು ಅದರ ಮೂಲಗಳನ್ನು ತಿಳಿಯಬಹುದು.

೧.೧ ಕೃಷಿ ಹಣಕಾಸಿನ ಅಗತ್ಯ, ವಿಧಗಳು ಮತ್ತು ಮೂಲಗಳು:

ಕೃಷಿ ಹಣಕಾಸು

ಕೃಷಿ ಸಾಲದ ಅಗತ್ಯ
* ಕುಟುಂಬ ವೆಚ್ಚ ನಿರ್ವಹಣೆ
* ಕೃಷಿಯೇತರ ವೆಚ್ಚ
* ಕೃಷಿ ವೆಚ್ಚ

ಕೃಷಿ ಸಾಲದ ವಿಧಗಳು
* ಅಲ್ಪಾವಧಿ ಸಾಲ
* ಮಧ್ಯಾವಧಿ ಸಾಲ
* ದೀರ್ಘಾವಧಿ ಸಾಲ

ಕೃಷಿ ಸಾಲದ ಮೂಲಗಳು

* ಸಾಂಸ್ಥಿಕ ಮೂಲಗಳು
* ಸಹಕಾರಿ ಸಂಸ್ಥೆಗಳು
* ವಾಣಿಜ್ಯ ಬ್ಯಾಂಕುಗಳು
* ಗ್ರಾಮೀಣ ಬ್ಯಾಂಕುಗಳು
* ನಬಾರ್ಡು

* ಸಾಂಸ್ಥಿಕೇತರ ಮೂಲಗಳು
* ಖಾಸಗಿ ಸಾಲದಾತ
* ವ್ಯಾಪಾರಿಗಳು ಮತ್ತು ದಲ್ಲಾಳಿಗಳು
* ಭೂಮಾಲಿಕರು
* ಸಂಬಂಧಿಕರು ಮತ್ತು ಸ್ನೇಹಿತರು

೨. ಸಾಹಿತ್ಯ ವಿಮರ್ಶೆ ಮತ್ತು ಸಮಸ್ಯೀಕರಣ

೨.೧ ಸಾಹಿತ್ಯ ವಿಮರ್ಶೆ:

ಅಧ್ಯಯನಕ್ಕೆ ಸಂಬಂಧಿಸಿದ ವಿಷಯದ ಮೇಲೆ ಸಾಕಷ್ಟು ಸಂಶೋಧನೆಗಳು ನಡೆದಿಲ್ಲವಾದರೂ ಭಾರತದ ಒಟ್ಟು ಬೆಳವಣಿಗೆಯಲ್ಲಿ ಕೃಷಿಕರ ಪ್ರಾಮುಖ್ಯತೆಯನ್ನು ಸಾರುವ ಕುರಿತ ಆಳವಾದ ಅಧ್ಯಯನಗಳು ನಡೆದದ್ದನ್ನು ಗಮನಿಸಬಹುದು. ೧೯೯೧ರ ನಂತರದಲ್ಲಿ ಕೃಷಿ ಕ್ಷೇತ್ರದ ಬೆಳವಣಿಗೆಯಲ್ಲಿ ಆಗುತ್ತಿರುವ ಬದಲಾವಣೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ನಡೆಯುತ್ತಿವೆ. ಇವುಗಳ ಸಹಾಯದಿಂದ ಕೈಗೆತ್ತಿಕೊಂಡ ಅಧ್ಯಯನವನ್ನು ಹೆಚ್ಚು ಗಟ್ಟಿಗೊಳಿಸುವ ಪ್ರಯತ್ನವನ್ನು ಅಧ್ಯಯನದಲ್ಲಿ ಮಾಡಲಾಗುವುದು.

ಎಂ.ಜೆ. ಪ್ರಭು (೨೦೧೨) ತಮ್ಮ ಒಂದು ಲೇಖನದಲ್ಲಿ ಸರಕಾರ ಎಷ್ಟು ಮಾತ್ರಕ್ಕೂ ಕೃಷಿಯನ್ನು ಕಡೆಗಣಿಸುವಂತಿಲ್ಲ ಮತ್ತು ಕಡೆಗಣಿಸಿದ್ದೆ ಆದರೆ ಅದು ದೇಶದ ಒಟ್ಟು ಆರ್ಥಿಕತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು ಎಂಬುದಾಗಿ ತಿಳಿಸಿದ್ದರು.

ಪ್ರಪುಲ್ಲ ಚಂದ್ರ ಮೊಹಾಂತಿ (೨೦೦೭) ತಮ್ಮ ಪ್ರಬಂಧದಲ್ಲಿ "ಭಾರತದ ಕನಿಷ್ಠ ಉತ್ಪಾದನೆಯು ದೇಶದ ಅಭಿವೃದ್ಧಿಗೆ ಮಾರಕವಾಗಿದೆ. ಆದರೆ ಜಾಗತೀಕರಣದಿಂದಾಗಿ ಉತ್ಪಾದನೆಯ ಪ್ರಮಾಣ ಏರುತ್ತಿದೆ. ಉತ್ಪಾದನೆಯು ಸುಧಾರಣೆಯಾಗಲು ಹಣಕಾಸಿನ ಅಗತ್ಯವಿದೆ. ಗ್ರಾಮೀಣ ಅಭಿವೃದ್ಧಿಗೆ ಪ್ರೇರಕವಾಗಿರುವ ಕೃಷಿಕರ ಆರ್ಥಿಕ ಸ್ಥಿತಿಯು ಸುಧಾರಣೆಯಾಗುವ ಅವಶ್ಯಕತೆಯಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದತ್ತ ಮತ್ತು ಬಸಕ್ (೨೦೦೮) ತಮ್ಮ ಒಂದು ಲೇಖನದಲ್ಲಿ ಸಹಕಾರಿ ಬ್ಯಾಂಕುಗಳು ಮರು ಪಾವತಿ ಕಾರ್ಯವನ್ನು ಸುಧಾರಿಸಬೇಕು. ಹೊಸ ರೀತಿಯ ಕಂಪ್ಯೂಟೀಕರಣವಾಗಿ ಸಾಲ ಮರುಪಾವತಿ ನೋಡಿಕೊಳ್ಳುವ ವ್ಯವಸ್ಥೆಯನ್ನು ಅಳವಡಿಸುವುದು ಉತ್ತಮ ಎಂದು ಅಭಿಪ್ರಾಯಪಟ್ಟಿದ್ದಾರೆ.

ಶಿವಪ್ಪ ಎಚ್. (೨೦೦೫) ರವರು "Agricultural credit utilisation & its repayment performance of borrowers of RRB in Karnataka – a case study of Chitradurg grameen bank" ಎಂಬ ವಿಷಯದಲ್ಲಿ ಅಧ್ಯಯನವನ್ನು ನಡೆಸಿದರು. ಈ ಅಧ್ಯಯನವು ಪ್ರಾಥಮಿಕ ಹಾಗೂ ಅನುಷಂಗಿಕ ಮೂಲಗಳೆರಡನ್ನೂ ಹೊಂದಿತ್ತು. ಸಂದರ್ಶಿಸಲ್ಪಟ್ಟ ಒಟ್ಟು ಮಾಹಿತಿದಾರರಲ್ಲಿ ಶೇಕಡಾ ೭೫ ರಷ್ಟು ಜನರು ಗ್ರಾಮೀಣ ಹಾಗೂ ಖಾಸಗಿ ಬ್ಯಾಂಕಿನಿಂದ ಸಾಲವನ್ನು ಪಡೆದವರಾಗಿದ್ದರು ಮತ್ತು ಉಳಿದ ಶೇಕಡಾ ೨೫ ರಷ್ಟು ಜನರು ಕೇವಲ ಗ್ರಾಮೀಣ ಬ್ಯಾಂಕನ್ನೇ ಅವಲಂಬಿಸಿದ್ದರು. ಮತ್ತು ಬ್ಯಾಂಕಿನ ಅಧ್ಯಯನದ ಅವಧಿಯಲ್ಲಿ ಏರಿಳಿತವನ್ನು ಕಂಡಿದೆ ಎಂದು ಅವರು ತಮ್ಮ ಅಧ್ಯಯನದಲ್ಲಿ ಕಂಡುಕೊಂಡಿದ್ದಾರೆ.

ಕರಮ್ ಪಾಲ್ ಮತ್ತು ಜಸ್ವೀರ್ ಎಸ್. ಸುರಾ (೨೦೦೬) "Efficiency of RRBs in India- A conventional analysis" ಎಂಬ ಅಧ್ಯಯನದಲ್ಲಿ ಶಾಖಾ ಜಾಲದ ಹೆಚ್ಚಳದ ಅಗತ್ಯತೆ ಹಾಗೂ ಕ್ರೆಡಿಟ್ ಡೆಪಾಸಿಟ್ ರೇಷ್ಯೋ ಕುಂಠಿತವಾಗಿರುವುದನ್ನು ಕಂಡುಕೊಂಡಿದ್ದಾರೆ. ಅವರು ಬ್ಯಾಂಕಿನ ಶಾಖೆಗಳು

ಗ್ರಾಮೀಣ ಜನರಿಗೆ ಹೆಚ್ಚಿನ ಬ್ಯಾಂಕಿಂಗ್ ಸೇವೆಯನ್ನು ನೀಡಬೇಕಾಗಿ ಮತ್ತು ಕ್ರೆಡಿಟ್ ಡೆಪಾಸಿಟ್ ರೇಷ್ಯೋವನ್ನು ಹೆಚ್ಚಿಸಲು ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಸಲಹೆಯನ್ನೂ ನೀಡಿದ್ದಾರೆ.

ನಾಯ್ಡು ಎಲ್.ಕೆ.(೧೯೯೮) ರವರು ರಾಯಲ್ ಸೀಮೆ ಬ್ಯಾಂಕಿನ ಅಧ್ಯಯನವನ್ನು ಕೈಗೊಂಡರು. ಈ ಅಧ್ಯಯನದಲ್ಲಿ ಗ್ರಾಮೀಣ ಬ್ಯಾಂಕಿನಿಂದ ಫಲಾನುಭವಿಗಳಾದ ಆಂಧ್ರದ ಕುಡ್ಡಪ್ಪ ಜಿಲ್ಲೆಯ ೪೮ ಜನ ಗ್ರಾಮೀಣ ಕುಶಲಕರ್ಮಿಗಳನ್ನು ಸಂದರ್ಶಿಸಲಾಯಿತು. ಈ ಅಧ್ಯಯನದಲ್ಲಿ ಬ್ಯಾಂಕಿನಿಂದ ಒದಗಿಸಲ್ಪಟ್ಟ ಹಣಕಾಸಿನ ಸೌಲಭ್ಯದಿಂದಾಗಿ ಫಲಾನುಭವಿಗಳ ಆದಾಯದಲ್ಲಿ ಹೆಚ್ಚಳವುಂಟಾಗಿದೆ ಎಂಬುದನ್ನು ಕಂಡುಕೊಂಡಿದ್ದಾರೆ.

ಬಿಸ್ವಾ ಸ್ವರೂಪ ಮಿಶ್ರಾ (೨೦೦೬) ಭಾರತದಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಚಟುವಟಿಕೆಯ ಬಗ್ಗೆ ಅಧ್ಯಯನವನ್ನು ನಡೆಸಿದರು. ಈ ಅಧ್ಯಯನದಲ್ಲಿ ಕಂಡು ಬಂದ ಫಲಿತಗಳು ಇಂತಿವೆ:

- ಲಾಭಸಹಿತ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹೂಡಿಕೆ ಮತ್ತು ಸಾಲ ಹಂಚಿಕೆಯ ಚಟುವಟಿಕೆಯನ್ನು ಧನಾತ್ಮಕವಾಗಿ ನಿರ್ವಹಿಸುತ್ತವೆ. ಅದೇ ರೀತಿ ಲಾಭ ರಹಿತ ಪ್ರಾದೇಶಿಕ ಬ್ಯಾಂಕುಗಳು ಋಣಾತ್ಮಕವಾದ ಚಟುವಟಿಕೆಯನ್ನು ತೋರಿಸುತ್ತಿವೆ.
- ಅದೇ ರೀತಿ ಲಾಭರಹಿತವಾದ ಬ್ಯಾಂಕುಗಳು ನಿರ್ವಾಹಕರ ಮತ್ತು ಶೇರುದಾರರಿಂದ ಪರಿಗಣಿಸಲ್ಪಡಬೇಕಾಗಿ ಸಲಹೆ ನೀಡಿದ್ದಾರೆ.

ಶಂಕರಭಾವ ವಿಠೋಬಾ ಜಾಧವ (೨೦೧೫), ತಮ್ಮ ಲೇಖನ ರೈತರ ಆತ್ಮಹತ್ಯೆಯ ಅವಲೋಕನದಲ್ಲಿ ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ. "ಕೃಷಿ ಯಾಂತ್ರೀಕರಣ ಯುಗದಲ್ಲಿ ರೈತರು ಹೊಸ ತಾಂತ್ರಿಕತೆಯನ್ನು ಅಳವಡಿಸಿ ಕುಟುಂಬದ ಆರ್ಥಿಕ ಮಟ್ಟವನ್ನು ಹೆಚ್ಚಿಸುವ ಬದಲು ಆರ್ಥಿಕ ಮಟ್ಟವನ್ನು ಹೆಚ್ಚಿಸುವ ಬದಲು ಆರ್ಥಿಕ ನಷ್ಟಕ್ಕೊಳಗಾಗಿ ಆತ್ಮಹತ್ಯೆಗೆ ಶರಣಾಗುತ್ತಿರುವುದು ವಿಷಾದನೀಯವಾದದ್ದು ಅಲ್ಲದೆ ಇದನ್ನು ತಡೆಯಲು ಕೆಲವು ಮಾರ್ಗೋಪಾಯಗಳನ್ನೂ ಸೂಚಿಸಿದ್ದಾರೆ ಅವುಗಳಲ್ಲಿ ಕೃಷಿಸಾಲವನ್ನು ಸಮಯೋಚಿತವಾಗಿ ಪಡೆದು ಮರುಪಾವತಿಗೆ ಅವಶ್ಯಕ್ಕನುಸಾರವಾಗಿ ಮರಳಿ ಸಾಲ ಪಡೆಯಲು ಅವಕಾಶ ನೀಡುವುದೂ ಒಂದಾಗಿದೆ.

ಸಮಸ್ಯೀಕರಣ:

ಹಳ್ಳಿಗಾಡು ಪ್ರದೇಶವಾಗಿರುವ ಭಾರತವು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು ಆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸುವುದರ ಮೂಲಕ ರಾಷ್ಟ್ರ ನಿರ್ಮಾಣ ಕಾರ್ಯವಾಗಬೇಕಿದೆ. ಕರ್ನಾಟಕ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರು ಬಹುತೇಕ ಕೃಷಿಕರಾಗಿದ್ದು ಅವರು ತಮ್ಮ ಆರ್ಥಿಕ ನಿರ್ವಹಣೆಗಾಗಿ ಬೇಕಾದ ಹಣವನ್ನು ಲೇವಾದೇವಿದಾರರಿಂದ ಸಾಲವಾಗಿ ಪಡೆಯಬೇಕಾಗಿದೆ. ಈ ಸಾಲವು ಅನೌಪಚಾರಿಕ, ಅನಧಿಕೃತ ರೀತಿಯಲ್ಲಿದ್ದು ಹೆಚ್ಚಿನ ಬಡ್ಡಿಯನ್ನು ತೆರಬೇಕಾಗಿದೆ. ಈ ರೀತಿ ಮಾಡುವುದರಿಂದ ಕೃಷಿಕರು ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿರುವ ಪ್ರಕರಣಗಳು ನಮ್ಮ ಮುಂದಿವೆ. ಇಂತಹ ಸಂದರ್ಭದಲ್ಲಿ ಆರ್ಥಿಕ ದುರ್ಬಲ ವ್ಯಕ್ತಿಗಳಿಗೆ ಗ್ರಾಮೀಣ ವಿಕಾಸ ಬ್ಯಾಂಕುಗಳು ಹೆಚ್ಚು ಸಹಕಾರಿಯಾಗಿವೆ. ಆದರೂ ಈ ವಿಚಾರದಲ್ಲಿ ಕೆಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ ಅವುಗಳೆಂದರೆ,

೨.೨.೧. ಸಾಂಸ್ಥಿಕ ಹಣಕಾಸು ವ್ಯವಸ್ಥೆ ಭಾರತದ ಬದಲಾಗುತ್ತಿರುವ ಕೃಷಿ ರಂಗದಲ್ಲಿ ಹೇಗೆ ಕಾರ್ಯನಿರ್ವಹಿಸುತ್ತದೆ?

೨.೨.೨. ಸಾಂಸ್ಥಿಕ ಹಣಕಾಸು ವ್ಯವಸ್ಥೆಯಿಂದ ಕೃಷಿಕರಿಗೆ ಮೂಲ ಉಪಯೋಗವೇನು?

೨.೨.೩. ಸಾಂಸ್ಥಿಕ ವ್ಯವಸ್ಥೆಗಳು ಪ್ರಬಲವಾಗಿದ್ದರೂ ಜನರು ಯಾಕೆ ಇನ್ನೂ ಸಾಂಸ್ಥಿಕವಲ್ಲದ ಮೂಲಗಳಿಂದ ಸಾಲ ಪಡೆಯುತ್ತಿದ್ದಾರೆ?

೨.೨.೪. ಕೃಷಿಕರ ಆರ್ಥಿಕ ಮತ್ತು ಸಾಮಾಜಿಕ ನಿರ್ವಹಣೆಯಲ್ಲಿ ಗ್ರಾಮೀಣ ಬ್ಯಾಂಕುಗಳು ಯಾವ ರೀತಿಯಲ್ಲಿ ಸಹಾಯಕವಾಗಿವೆ?

ಗ್ರಾಮೀಣ ವಿಕಾಸ ಬ್ಯಾಂಕುಗಳು ಕೃಷಿಕರಿಗೆ ತಮ್ಮ ಆರ್ಥಿಕ ನಿರ್ವಹಣೆಯಲ್ಲಿ ಹೇಗೆ ನೆರವಾಗುತ್ತಿವೆ ಎಂಬುದು ಎಲ್ಲ ರೈತರಿಗೂ ತಿಳಿದಿಲ್ಲ. ಎಂಬುದು ಜನರ ಅಭಿಪ್ರಾಯ. ಈ ನಿಟ್ಟಿನಲ್ಲಿ ಬ್ಯಾಂಕುಗಳ ಕಾರ್ಯ ಚಟುವಟಿಕೆಯನ್ನು ವಿಶ್ಲೇಷಿಸುತ್ತಾ ಅದರಿಂದ ಕೃಷಿಕರಿಗೆ ಆಗುವ ನೆರವಿನ ಬಗ್ಗೆ ತಿಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಲು ಈ ಅಧ್ಯಯನ ವಿಷಯವನ್ನು ಆರಿಸಲಾಗಿದೆ.

೧. ಅಧ್ಯಯನದ ಉದ್ದೇಶಗಳು:

"ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಗ್ರಾಮೀಣ ವಿಕಾಸ ಬ್ಯಾಂಕಿನ ಪಾತ್ರ" ಎಂಬ ಅಧ್ಯಯನ ವಿಷಯದ ಉದ್ದೇಶಗಳು ಈ ಕೆಳಗಿನಂತಿದೆ.

೩.೧. ಗ್ರಾಮೀಣ ವಿಕಾಸ ಬ್ಯಾಂಕಿನ ಕೃಷಿ ಸಾಲ ಯೋಜನೆಯನ್ನು ವಿಶ್ಲೇಷಿಸುವುದು.

೩.೨. ಸಹ್ಯ ಅಭಿವ್ರದ್ಧಿಯಲ್ಲಿ ಕೃಷಿ ಸಾಲದ ಪಾತ್ರವನ್ನು ಪರಿಶೀಲಿಸುವುದು.

೨.೩. ಕೃಷಿಕರ ಹಣಕಾಸು ನಿರ್ವಹಣೆಯಲ್ಲಿ ಗ್ರಾಮೀಣ ವಿಕಾಸ ಬ್ಯಾಂಕು ಹೇಗೆ ಸಹಕಾರಿಯಾಗಿದೆ ಎಂಬುದನ್ನು ವಿಶ್ಲೇಷಿಸುವುದು. .

೩.೪. ಅಧ್ಯಯನ ಕ್ಷೇತ್ರದಲ್ಲಿ ಗ್ರಾಮೀಣ ವಿಕಾಸ ಬ್ಯಾಂಕಿನಿಂದ ಆಗಿರುವ ಸಾಧನೆ ಮತ್ತು ಆಗಬೇಕಾದ ಕಾರ್ಯಕ್ರಮಗಳ ನೀತಿರೂಪಣೆ ಮತ್ತು ರೂಪು ರೇಷೆಯನ್ನು ಗುರುತಿಸುವುದು.

೧.೪ ಅಧ್ಯಯನದ ಊಹೆಗಳು

೧. ಗ್ರಾಮೀಣ ಬ್ಯಾಂಕುಗಳು ಕೃಷಿಕರ ಆರ್ಥಿಕ – ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರ ವಹಿಸುತ್ತವೆ.

೨. ಗ್ರಾಮೀಣ ಬ್ಯಾಂಕುಗಳ ಸಾಲದ ಯೋಜನೆಗಳು ಕೃಷಿಕರಿಗೆ ಬೇರೆ ಬ್ಯಾಂಕುಗಳಿಗಿಂತ ಅನುಕೂಲಕರವಾಗಿದೆ.

೧.೫ ಅಧ್ಯಯನದ ವಿಧಾನಗಳು:

ಪ್ರಸ್ತುತ ಅಧ್ಯಯನಕ್ಕಾಗಿ ಉಪಯುಕ್ತ ಮಾಹಿತಿಯನ್ನು ಪ್ರಾಥಮಿಕ ಹಾಗೂ ಅನುಷಂಗಿಕ ಮೂಲಗಳಿಂದ ಸಂಗ್ರಹಿಸಲಾಗಿದೆ.

೧. ಅಧ್ಯಯನಕ್ಕೆ ಸಂಬಂಧಿಸಿದ ಪ್ರಾಥಮಿಕ ಮಾಹಿತಿಯನ್ನು ಸಂದರ್ಶನದ ಮೂಲಕ ಈ ಕೆಳಗಿನವರಿಂದ ಸಂಗ್ರಹಿಸಲಾಗಿದೆ.

ಅ) ಬ್ಯಾಂಕಿನ ಮ್ಯಾನೇಜರ್ ಆ) ಬ್ಯಾಂಕಿನ ಮೇಲ್ವಿಚಾರಕ ಇ) ಇತರ ಸಿಬ್ಬಂದಿಗಳು

೨. ರೈತ ಖಾತೆದಾರರಿಂದ ನೇರ ಸಂದರ್ಶನದ ಮೂಲಕ ಹಾಗೂ ಪ್ರಶ್ನಾವಳಿ ಮೂಲಕ ಮಾಹಿತಿ ಸಂಗ್ರಹಣೆ.

೩. ಅಧ್ಯಯನಕ್ಕೆ ಸೈದ್ಧಾಂತಿಕ ನೆಲೆಯನ್ನು ಒದಗಿಸಲು ವಿವಿಧ ಗ್ರಂಥಗಳ, ಲೇಖನಗಳು, ಸಂಶೋಧನಾ ಪ್ರಬಂಧಗಳ ಹಾಗೂ ಸರಕಾರಿ ಮೂಲದ ದಾಖಲೆಗಳ ಪರಾಮರ್ಶೆ.

೪. ಬ್ಯಾಂಕಿನ ಮ್ಯಾನೇಜರ್ ಮತ್ತು ಸಿಬ್ಬಂದಿಗಳೊಡನೆ ಚರ್ಚೆ ಮತ್ತು ಪ್ರಶ್ನಾವಳಿ ಮೂಲಕ ದತ್ತಾಂಶಗಳ ಸಂಗ್ರಹಣೆ.

೫. ಬ್ಯಾಂಕ್ ವೆಬ್ ಸೈಟುಗಳು

೬. ವಾರ್ಷಿಕ ವರದಿಗಳು

೭. ಪುಸ್ತಕಗಳು

೮. ಸಂಶೋಧನಾ ಲೇಖನಗಳು ಇತ್ಯಾದಿ

ಹಾಗೆ ಸಂಗ್ರಹಿಸಿದ ಮಾಹಿತಿಯನ್ನು ಸೂಕ್ತ ಕೋಷ್ಟಕಗಳನ್ನಾಗಿ ವಿಂಗಡಿಸಿ, ಸರಳ ಅಂಕಿ ಅಂಶಗಳಾದ ಅನುಪಾತ, ಸರಾಸರಿ, ಎಕ್ಸೆಲ್ ಮುಂತಾದ ಸ್ಟಾಟಿಸ್ಟಿಕಲ್ ಸಾಧನಗಳನ್ನು ಬಳಸಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ವ್ಯಾಪ್ತಿ, ಅಧ್ಯಾಯಗಳು ಮತ್ತು ಇತಿಮಿತಿಗಳು

ಮೂಡಬಿದಿರೆ ಪರಿಸರದಲ್ಲಿರುವ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕನ್ನು ಅಧ್ಯಯನಕ್ಕಾಗಿ ಆರಿಸಲಾಗಿದ್ದು, ಅಧ್ಯಯನಕ್ಕೆ ಬಳಸಲಾಗುವ ಮಾಹಿತಿಯು ೪ ವರ್ಷಗಳಿಗೆ ಸೀಮಿತವಾಗಿದೆ (೨೦೧೧–೨೦೧೫) ಮಾಹಿತಿಯನ್ನು ಆಧರಿಸಿರುತ್ತದೆ. ಈ ಅಧ್ಯಯನದಲ್ಲಿ ೫೦ ಮಾದರಿ ಮಾಹಿತಿದಾತರ ಮಾಹಿತಿಯನ್ನು ಪ್ರಾಥಮಿಕ ಮಾಹಿತಿಯಾಗಿ ಪರಿಗಣಿಸಲಾಗುತ್ತದೆ.

ಕ್ಷೇತ್ರದ ಸಂಕ್ಷಿಪ್ತ ಪರಿಚಯ:

ಬ್ಯಾಂಕ್‌ನ ಹೆಸರು	:	ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್
ಸ್ಥಳ	:	ಮೂಡಬಿದಿರೆ
ತಾಲೂಕು	:	ಮಂಗಳೂರು
ಜಿಲ್ಲೆ	:	ದಕ್ಷಿಣ ಕನ್ನಡ

ಅಧ್ಯಾಯಗಳು

ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧ್ಯಯನದಲ್ಲಿ ೫ ಅಧ್ಯಾಯಗಳನ್ನು ರಚಿಸಲಾಗಿದೆ. ಅವುಗಳನ್ನು ಈ ಕೆಳಗಿನಂತೆ ಅಭಿವ್ಯಕ್ತಗೊಳಿಸಲಾಗಿದೆ.

ಅಧ್ಯಾಯ ೧ : ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ:

ಈ ಅಧ್ಯಾಯದಲ್ಲಿ ಪೀಠಿಕೆ, ಅಧ್ಯಯನದ ಸಮಸ್ಯೀಕರಣ, ಉದ್ದೇಶಗಳು, ಊಹೆಗಳು, ಅಧ್ಯಯನದ ವ್ಯಾಪ್ತಿ, ಅಧ್ಯಾಯಗಳು ಇತ್ಯಾದಿಗಳನ್ನು ಅಭಿವ್ಯಕ್ತಗೊಳಿಸಲಾಗಿದೆ.

ಅಧ್ಯಾಯ ೨ :ಭಾರತದ ಸಮಾಜೋ–ಆರ್ಥಿಕ ಅಭಿವೃದ್ಧಿಯಲ್ಲಿ ಗ್ರಾಮೀಣ ವಿಕಾಸ ಬ್ಯಾಂಕಿನ ಪಾತ್ರ:

ಈ ಅಧ್ಯಾಯದಲ್ಲಿ ಗ್ರಾಮೀಣ ಬ್ಯಾಂಕುಗಳು ಸಹ್ಯ ಅಭಿವೃದ್ಧಿಯಲ್ಲಿ ಹೇಗೆ ಪಾತ್ರವಹಿಸುತ್ತವೆ ಎಂಬುದನ್ನು ನಿರೂಪಿಸಲಾಗಿದೆ.

ಅಧ್ಯಾಯ ೩: ಅಧ್ಯಯನ ಕ್ಷೇತ್ರದ ಸ್ಥೂಲ ಪರಿಚಯ:

ಮೂರನೇ ಅಧ್ಯಾಯದಲ್ಲಿ ಪೀಠಿಕೆ, ಉಗಮ, ಪ್ರಾಮುಖ್ಯತೆ, ಗುಣಲಕ್ಷಣ, ಕೊಡುಗೆ ಸಮಸ್ಯೆಗಳು ಇತ್ಯಾದಿಗಳ ಬಗೆಗಿನ ಮಾಹಿತಿಯನ್ನು ನೀಡಲಾಗಿದೆ.

ಅಧ್ಯಾಯ ೪ : ಮಾಹಿತಿ ವಿಶ್ಲೇಷಣೆ:

ಈ ಅಧ್ಯಾಯದಲ್ಲಿ ಬ್ಯಾಂಕಿನ ಫಲಾನುಭವಿಗಳಿಂದ ಉಪಯುಕ್ತ ಮಾಹಿತಿಯನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿ ಸೂಕ್ತ ಕೋಷ್ಟಕಗಳನ್ನಾಗಿ ವಿಂಗಡಿಸಿ ಆ ಮಾಹಿತಿಯನ್ನು ಸರಳ ಅಂಕಿ ಅಂಶ ತಂತ್ರಾಂಶಗಳಾದ ಅನುಪಾತ ಸರಾಸರಿ ಪ್ರಮಾಣ ಮತ್ತು ಶೇಕಡಾವಾರು ಪ್ರಮಾಣ ಮೂಲಕ ವಿಶ್ಲೇಷಿಸಿ ಅರ್ಥೈಸಲಾಗುವುದು.

ಅಧ್ಯಾಯ ೫ : ಫಲಿತಗಳು, ಸಲಹೆ ಸೂಚನೆಗಳು ಮತ್ತು ಉಪಸಂಹಾರ:

ಈ ಅಧ್ಯಾಯದಲ್ಲಿ ಸಂಶೋಧನೆಯಲ್ಲಿ ಕಂಡು ಬಂದ ಫಲಿತಗಳನ್ನು ಕೊಡಲಾಗುವುದು ಅಂತೆಯೇ ಸಲಹೆ ಸೂಚನೆಗಳನ್ನು ನೀಡಲಾಗುವುದು.

ಅಧ್ಯಯನದ ಇತಿಮಿತಿಗಳು

ಸಂಶೋಧಕರು ಗುರುತಿಸುವಂತೆ ಪ್ರಸ್ತುತ ಅಧ್ಯಯನದ ಪ್ರಮುಖ ಮಿತಿಗಳು, ವಸ್ತು ವಿಷಯ ನಿರ್ದಿಷ್ಟತೆಯನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

೧. ನಮ್ಮ ಅಧ್ಯಯನವು ಬ್ಯಾಂಕುಗಳ ೫ ವರ್ಷಗಳ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿದ್ದು. ಬ್ಯಾಂಕಿನ ಪ್ರಾರಂಭದಿಂದ ಈ ವರೆಗಿನ ಚಟುವಟಿಕೆಗಳನ್ನು ಒಳಗೊಂಡಿರುವುದಿಲ್ಲ.

೨. ಅಧ್ಯಯನದ ಅವಧಿಯು ಕಡಿಮೆಯಾಗಿರುವುದು.

೩. ಕೆಲ ಮಾಹಿತಿದಾರರು ಅನಕ್ಷರಸ್ಥರಾಗಿರುವುದು ಮತ್ತು ಉತ್ತರಿಸಲು ಹಿಂಜರಿಯುವುದು.

೪. ಮಾಹಿತಿದಾರರು ಪೂರ್ಣವಾಗಿ ಪ್ರತಿಕ್ರಿಯೆ ನೀಡದೇ ಇರುವುದು.

ಉಪಸಂಹಾರ:

ದೇಶದ ಕೃಷಿ ಕ್ಷೇತ್ರ ಗಂಭೀರ ಬಿಕ್ಕಟ್ಟಿನಲ್ಲಿದ್ದು ರೈತರ ಆತ್ಮಹತ್ಯೆಗಳು ಲೆಕ್ಕವಿಲ್ಲದಂತೆ ಹೆಚ್ಚುತ್ತಿವೆ. ಇಂತಹ ಹೊತ್ತಿನಲ್ಲಿ ಕೃಷಿಕರ ರೈತರು ಮತ್ತು ಗ್ರಾಮೀಣ ಜನರನ್ನು ಖಾಸಗಿ ಲೇವಾದೇವಿಗಾರರ ಮತ್ತು ಬಡ್ಡಿ ಸಾಹುಕಾರರ ಕಪಿಮುಷ್ಠಿಯಿಂದ ಪಾರು ಮಾಡುವಂತಹ ಕಾರ್ಯಯೋಜನೆಗಳು ನಡೆಯಬೇಕಿದ್ದಲ್ಲಿ ಗ್ರಾಮೀಣ ವಿಕಾಸ ಬ್ಯಾಂಕುಗಳು ಹಾಸು ಹೊಕ್ಕಾಗಿರಬೇಕಾಗುವುದು ಅನಿವಾರ್ಯವಾಗುತ್ತದೆ.

ಅಧ್ಯಾಯ ೨

ಭಾರತದ ಸಮಾಜೋ-ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿ ಮತ್ತು ಗ್ರಾಮೀಣ ಬ್ಯಾಂಕುಗಳ ಪಾತ್ರ

ಅಧ್ಯಾಯ :೨

ಭಾರತದ ಸಮಾಜೋ-ಆರ್ಥಿಕ ಅಭಿವೃದ್ಧಿಯಲ್ಲಿ ಗ್ರಾಮೀಣ ಬ್ಯಾಂಕುಗಳ ಪಾತ್ರ:

ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿಯ ಪಾತ್ರ:

ಭಾರತದಲ್ಲಿ ಕೃಷಿಯು ಆರ್ಥಿಕ ಚಟುವಟಿಕೆಯ ಅತ್ಯಂತ ದೊಡ್ಡ ವಲಯವಾಗಿದೆ. ಅದು ಆಹಾರ ಮತ್ತು ಕಚ್ಚಾ ವಸ್ತುಗಳನ್ನು ಪೂರೈಸುವುದು ಮಾತ್ರವಲ್ಲದೆ ದೇಶದ ಜನಸಂಖ್ಯೆಯ ಬಹುಪಾಲು ಜನರಿಗೆ ಉದ್ಯೋಗಾವಕಾಶವನ್ನೂ ಒದಗಿಸುತ್ತದೆ. ಆರ್ಥಿಕ ವಲಯಗಳಲ್ಲೇ ಪ್ರಮುಖವಾಗಿದ್ದುಕೊಂಡು ಕೃಷಿ ವಲಯವು ರಾಷ್ಟ್ರೀಯ ಉತ್ಪನ್ನದಲ್ಲಿನ ಬದಲಾವಣೆ ಅಥವಾ ಸುಧಾರಣೆಯು ಕೃಷಿಯ ಉತ್ಪನ್ನವನ್ನು ಅವಲಂಬಿಸಿದೆ. ಅದೇ ಕಾರಣಕ್ಕಾಗಿ ಅದರ ಸ್ವಾಭಿವೃದ್ಧಿಗೆ ಬಂಡವಾಳವನ್ನು ಒದಗಿಸಬೇಕು. ಆರ್ಥಿಕಾಭಿವೃದ್ಧಿಯ ಮೊದಲ ಹಚಿತದಲ್ಲಿ ಪ್ರಾಥಮಿಕ ಉತ್ಪನ್ನಗಳ ರಫ್ತು ವಿದೇಶೀ ವಿನಿಮಯದ ಮೌಲ್ಯವನ್ನು ಪಡೆಯುತ್ತದೆ ಮತ್ತು ಅದನ್ನು ಬಂಡವಾಳ ಉತ್ಪನ್ನವನ್ನು ಆಮದು ಮಾಡಲು ಬಳಸಿಕೊಳ್ಳಲಾಗುತ್ತದೆ. ಜನಸಂಖ್ಯೆ ತೀವ್ರವಾಗಿ ಹೆಚ್ಚುತ್ತಿರುವುದು ಕೃಷಿ ಆಧಾರಿತ ಇತರ ಗ್ರಾಹಕ ವಸ್ತುಗಳ ಬೇಡಿಕೆಯ ಹೆಚ್ಚಳಕ್ಕೆ ಕಾರಣವಾಗಿದೆ. ಕೃಷಿಯು ಆರ್ಥಿಕಾಭಿವೃದ್ಧಿಯ ಕೀಲಿ ಕೈ ಆಗಿದ್ದುಕೊಂಡು ಕೃಷಿ ಮತ್ತು ಕೃಷಿಯೇತರ ವಲಯಗಳ ನಡುವಿನ ಅವಲಂಬನೆಯನ್ನು ಗುರ್ತಿಸಬಹುದಾಗಿದೆ. ಒಟ್ಟಿನಲ್ಲಿ ಆರ್ಥಿಕಾಭಿವೃದ್ಧಿಯ ಬಹುಪಾಲು ಕೃಷಿಯಿಂದ ಸಾಕಾರವಾಗಿದೆ ಎನ್ನಬಹುದು.

ಕೃಷಿರಂಗದ ಬವಣೆಗಳು:

ಕೃಷಿಕರ ಬದುಕಿನಲ್ಲಿ ಸಾಲ ಒಂದು ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿದೆ. ಇಲ್ಲಿ ಸಾಲದ ಪೂರೈಕೆಯಲ್ಲಿ ಕೊರತೆಯಾದರೂ ಕಷ್ಟ ಸಾಲ ಹೆಚ್ಚಿ ದೊಡ್ಡ ಹೊರೆಯಾದರೂ ನಷ್ಟ. ಸಾಲಕ್ಕೂ ರೈತರಿಗೂ ಇರುವ ಸಂಬಂಧವನ್ನು ಒಂದು ಫ್ರೆಂಚ್ ಗಾದೆಯು ಬಹಳ ಮಾರ್ಮಿಕವಾಗಿ ವರ್ಣಿಸುತ್ತದೆ. ಸಾಲವು ಕೃಷಿಕನಿಗೆ ಒದಗಿಸುವ ಆಧಾರವು ನೇಣುಗಂಬದಲ್ಲಿ ನೇತಾವಾಡುವಾತನಿಗೆ ನೇಣುಹಗ್ಗವು ದೊರಕಿಸುವ ಆಧಾರದಂತೆ. ಇತ್ತೀಚಿನ ದಿನಗಳಲ್ಲಿ ದೇಶದ ನಾನಾ ಭಾಗದಲ್ಲಿ ಕರ್ನಾಟಕವನ್ನು ಸೇರಿಸಿ ಋಣಭಾದೆಯನ್ನು ತಾಳಲಾರದೆ ರೈತರು ಆತ್ಮಹತ್ಯೆಗೆ ಶರಣರಾದ ದಾರುಣ ನಿದರ್ಶನಗಳು ಈ ಗಾದೆಯನ್ನು ಯಥಾವತ್ತಾಗಿ ಪ್ರತಿಬಿಂಬಿಸುತ್ತದೆ. ಶೋಷಣೆಗೆ ಒಳಗಾದ ರೈತ ಕಂಗಾಲಾಗಿರುವಾಗ

ಪ್ರಕೃತಿಯ ವಿಕೋಪವು ಆತನಿಗೆ ಅತ್ಯಂತ ಕಠಿಣ ಸಮಸ್ಯೆಯಾಗುತ್ತದೆ. ೨೦೧೧ರ ಜಾತಿಗಣತಿಯ (ಎಸ್ ಇ ಎಸ್ ಎಸ್) ಪ್ರಕಾರ ಮೂರರಲ್ಲಿ ಒಂದು ಕುಟುಂಬಕ್ಕೆ ಭೂಮಿ ಕಾಣಿ ಇಲ್ಲ. ಇವರು ಜೀವನೋಪಾಯಕ್ಕೆ ಕೂಲಿಯನ್ನೇ ನೆಚ್ಚಿಕೊಂಡಿದ್ದಾರೆ. ಎಂಟು ದಶಕಗಳ ಬಳಿಕ ಸರ್ಕಾರವು ಇದೇ ಮೊದಲ ಬಾರಿಗೆ ಈ ರೀತಿಯ ಗಣತಿ ಮಾಡಿದೆ. ದೇಶದಲ್ಲಿ ಒಟ್ಟು ಬೇಸಾಯ ಮಾಡುವವರ ಸಂಖ್ಯೆಯು ಶೇಕಡಾ ೩೦.೧೦ ಆಗಿದೆ.

ಹಿಂದೆ ಕೃಷಿಕರು ಲೇವಾದೇವಿದಾರರಿಂದ ಸಾಲವನ್ನು ಪಡೆದು ಅದರಿಂದ ಪ್ರಯೋಜನವನ್ನು ಪಡೆಯುವ ಬದಲು ಇನ್ನಷ್ಟು ಸಂಕಷ್ಟಕ್ಕೀಡಾಗಬೇಕಾಗಿತ್ತು. ಏಕೆಂದರೆ ಈ ರೀತಿಯ ಸಾಂಸ್ಥಿಕೇತರ ಮೂಲಗಳು ಸಾಮಾನ್ಯವಾಗಿ ಅವೈಜ್ಞಾನಿಕತೆಯಿಂದ ಕೂಡಿದ್ದು ಸಾಲ ಪಡೆದವರನ್ನು ಸಂಪೂರ್ಣವಾಗಿ ದೋಚುವಂತಹ ಪ್ರವೃತ್ತಿಯುಳ್ಳದ್ದಾಗಿದೆ. ಹಣದ ಲೇವಾದೇವಿದಾರರು ಹೇರುತ್ತಿದ್ದ ಅತಿಯಾದ ಬಡ್ಡಿ. ಅನಿಯಮಿತ ಮರು ಪಾವತಿ ಕಂತುಗಳು, ಸಾಲದ ಮೊತ್ತ, ಬಡ್ಡಿದರ ಹಾಗೂ ಇತರ ಪ್ರಮುಖ ವಿಷಯಗಳನ್ನು ಪಾರದರ್ಶಕವಾಗಿರಿಸದೆ ಕೃಷಿಕರಿಗೆ ಮೋಸ ಮಾಡುವುದೂ ಸರ್ವೇಸಾಮಾನ್ಯವಾಗಿದೆ. ಈ ಎಲ್ಲ ಕಂದಾಚಾರಗಳಿಂದ ಅವರನ್ನು ಹೊರತರಲು ಮೇಲಿಂದ ಮೇಲೆ ಪ್ರಯತ್ನಗಳು ನಡೆಯುತ್ತಿದ್ದರೂ ಸಾಂಸ್ಥಿಕ ನೆಲೆಗಟ್ಟಿನಲ್ಲಿ ಒಂದು ವ್ಯವಸ್ಥಿತವದ ಹಣಕಾಸಿನ ಮೂಲವು ಸ್ಥಾಪನೆಯಾದವು. ಸಾಂಸ್ಥಿಕ ಮೂಲಗಳಲ್ಲಿಯೂ ಹೆಚ್ಚಿನವು ಕೇವಲ ನಗರ ಪ್ರದೇಶದ ಜನರ ಅವಶ್ಯಕತೆಯನ್ನು ಪೂರೈಸುವ ನಿಟ್ಟಿನಲ್ಲಿ ಕಾರ್ಯವೆಸಗುತ್ತವೆ. ಹೀಗಾಗಿ ಗ್ರಾಮೀಣ ಜನರ ಆಶೋತ್ತರಗಳಿಗೆ ಪ್ರಬಲವಾಗಿ ಸ್ಪಂದಿಸುವಲ್ಲಿ ನೆರವಾಗುವ ಮೂಲ ಉದ್ದೇಶವನ್ನಿಟ್ಟುಕೊಂಡು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಪರಿಚಯಿಸಲ್ಪಟ್ಟವು.

ಕರ್ನಾಟಕದಲ್ಲಿ ಕೃಷಿ ಅಭಿವೃದ್ಧಿ

ನಮ್ಮಲ್ಲಿ ಒದಗಿರುವ ತಾಂತ್ರಿಕ ಮತ್ತು ಕಾಲ್ಪನಿಕ ಯೋಜನೆ ಮತ್ತು ಸಮರ್ಪಕವಾದ ಕೃಷಿ ಅಭಿವೃದ್ಧಿಯ ನೀತಿಯ ಕೊರತೆಯಿಂದಾಗಿ ಒಟ್ಟು ಭಾರತದಲ್ಲಿ ಪ್ರಸ್ತುತ ಕೃಷಿ ಬೆಳೆಯ ಇಳುವರಿಯ ಮೂರನೇ ಒಂದರಿಂದ ಎರಡನೇ ಒಂದರಷ್ಟಿದೆ.

ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯು ಮೊದಲ ಸ್ಥಾನವನ್ನು ಆಶ್ರಯಿಸಿದೆ. ಇದರಿಂದ ರಾಜ್ಯಗಳು ಹೊರತಾಗಿಲ್ಲ. ೧೯೬೦–೬೧ ರಲ್ಲಿ ದೇಶದ ಒಟ್ಟು ಉತ್ಪಾದನೆಯಲ್ಲಿ ಕೃಷಿ ಕ್ಷೇತ್ರದ ಕೊಡುಗೆ

ಪ್ರಚಲಿತ ಬೆಲೆ ಪ್ರಕಾರ ೫೧.೪ ಶೇಕಡಾ ಆಗಿತ್ತು. ೧೯೮೦-೮೧ ರಲ್ಲಿ ಶೇಕಡ ೪೦ಕ್ಕೆ ಇಳಿದಿತ್ತು. ಮತ್ತು ೧೯೯೦-೯೧ ರಲ್ಲಿ ೩೪.೪ ಶೇಕಡಾಕ್ಕೆ ಬಂತು. ೧೯೬೦-೬೧ ರಲ್ಲಿ ಒಟ್ಟು ೧೯೯೦-೯೧ ರಲ್ಲಿ ೩೪.೪ ಶೇಕಡಾಕ್ಕೆ ಬಂತು. ೧೯೯೦-೬೧ ನೇ ವರ್ಷದಲ್ಲಿ ರಾಜ್ಯದ ೬೦.೩ ಶೇಕಡಾ ದೇಶ ಮಟ್ಟಕ್ಕೆ ಹೋಲಿಸಿದಾಗ ಹೆಚ್ಚಾಗಿತ್ತು. ೧೯೮೦-೮೧ ರಲ್ಲಿ ಶೇ೪೫.೮ ಹಾಗೂ ೧೯೯೦-೯೧ ಶೇಕಡಾ ೬೪.೮ಕ್ಕೆ ಇಳಿದಿತ್ತು. ರಾಜ್ಯದ ಒಟ್ಟು ಉತ್ಪಾದನೆಯಲ್ಲಿ ಕೃಷಿ ಕ್ಷೇತ್ರದ ಕೊಡುಗೆಯು ೬೦.೩೭ ಶೇಕಡಾ. ಇದು ದೇಶ ಮಟ್ಟಕ್ಕೆ ೧೯೮೦-೮೧ ರಲ್ಲಿ ೪೫.೮ ಶೇ. ಮತ್ತು ೧೯೯೦-೯೧ ನೇ ಸಾಲಿನಲ್ಲಿ ಶೇಕಡಾ ೩೬.೪ ರಷ್ಟಿತ್ತು. ಕೃಷಿಯನ್ನೇ ಅವಲಂಬಿಸಿದ್ದ ಕಾರ್ಮಿಕರ ಕೊಡುಗೆ ಕಾರ್ಮಿಕ ಬಲ ೭೦.೬ ರಿಂದ ೧೯೭೦.೭೧ ಕ್ಕೆ ಶೇ.೬೫ ಕ್ಕೆ ಕಡಿತಗೊಂಡಿತ್ತು. ೧೦೯೦-೯೧ ರ ಸಾಲಿನಲ್ಲಿ ಇದರ ಮಟ್ಟ ೬೩.೧ಕ್ಕೆ ಇಳಿಯಿತು. ಈ ಶೇಕಡಾವಾರು ಬಂದಿರುವುದನ್ನು ತೋರಿಸುತ್ತವೆ. ಕೃಷಿಯನ್ನು ಅವಲಂಬಿಸಿಕೊಂಡಿದ್ದ ಕಾರ್ಮಿಕರ ಪ್ರಮಾಣವು ಸಮ ಪ್ರಮಾಣದಲ್ಲಿ ಕ್ಷೀಣಿಸಿದೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಕೃಷಿ ಕೆಲಸಗಾರರ ಆದಾಯ ಪ್ರಮಾಣವನ್ನು ಕೃಷಿಯೇತರ ಕೆಲಸಗಾರರಿಗೆ ಹೋಲಿಸಿದಾಗ ಕಡಿಮೆಯಾಗಿದೆ. ಮತ್ತು ಕೈಕೂಲಿಗಾರರ ನಡುವೆ ಆದಾಯದಲ್ಲಿ ಅಸಮಾನತೆ ಇತ್ತು. ಕೃಷಿಯೇತರರ ಸಂಖ್ಯೆ ಈ ವರ್ಷದಲ್ಲಿ ಹೆಚ್ಚುತ್ತಾ ಬಂತು. ಜೀವನ ಮಟ್ಟದ ಸುಧಾರಣೆಯಲ್ಲಿ ಶೇ ೬೦ ರಷ್ಟು ಕೆಲಸ ಕೃಷಿ ಅಭಿವೃದ್ಧಿಯನ್ನು ಅವಲಂಬಿಸಿದೆ. ಇದರೊಂದಿಗೆ ಆರ್ಥಿಕತೆಯ ಇತರ ಮುಖಗಳೊಂದಿಗೆ ಕೃಷಿ ಕ್ಷೇತ್ರವು ಸರಪಣಿ ಹೊಂದಿದೆ. ಇತರ ಕ್ಷೇತ್ರಗಳ ಉನ್ನತಿಯು ಕೂಡ ಕೃಷಿ ಕ್ಷೇತ್ರದ ಕಾರ್ಯಸಾಧನೆಯನ್ನು ಅವಲಂಬಿಸಿದೆ.

ಗ್ರಾಮೀಣ ಸಾಲಬಾಧೆ:

ಸಾಲಬಾಧೆಯು ಕೃಷಿಕರನ್ನು ಬಹು ವಿಧಗಳಲ್ಲಿ ಪ್ರಭಾವಿಸುತ್ತದೆ. ರೈತರು ಕೃಷಿಭೂಮಿಯ ಒಡೆತನವನ್ನು ಕಳೆದುಕೊಂಡು ಭೂರಹಿತರಾಗುತ್ತಾರೆ. ದಲ್ಲಾಳಿಗಳು ಕೃಷಿ ಭೂಮಿಯನ್ನು ಬಾಡಿಗೆಗೆ ಕೊಟ್ಟು ಅದರ ಗೈರು ಒಡೆಯನಾಗುತ್ತಾನೆ. ಇದು ಕೃಷಿಯ ಅದಕ್ಷತೆಗೆ ಕಾರಣವಾಗುತ್ತದೆ. ಅದೇ ರೀತಿ ಭೂಮಿಯನ್ನು ಉಳಿಸಿಕೊಂಡ ರೈತರು ಭವಿಷ್ಯದಲ್ಲಿ ಸಾಲ ತೀರಿಸುವ ಚಿಂತೆಯಲ್ಲಿ ನಿರಾಶಾವಾದಿಗಳಾಗುತ್ತಾರೆ. ಉತ್ಪಾದಕತೆಯನ್ನು ಹೆಚ್ಚಿಸಲು ಯಾವುದೇ ರೀತಿಯ ಉತ್ತೇಜಕವಿರುವುದಿಲ್ಲ. ಬೆಳೆಗಳನ್ನು ಬೆಳೆಸಿ ಹಣದ ದಲ್ಲಾಳಿಗೆ ಸಾಲದ ಒಪ್ಪಂದದಲ್ಲಿ ಮೊದಲೇ ತಿಳಿಸಿದಂತೆ ಮಾರುಕಟ್ಟೆ ಬೆಲೆಗಿಂತ ಕಡಿಮೆ ದರದಲ್ಲಿ ಮಾರಲ್ಪಡುತ್ತದೆ.

ಅಸಮಧಾನಿತ ಕೃಷಿಕರು ಮತ್ತು ಭೂರಹಿತ ಕಾರ್ಮಿಕರು ಯಾವುದೇ ಉದ್ಯೋಗಾವಕಾಶವಿಲ್ಲದೆ ಸಾಮಾಜಿಕ ಕ್ರಾಂತಿಯ ಸಮಸ್ಯೆಗೀಡಾಗುತ್ತಾರೆ.

ಋಣಬಾಧೆ ರೈತರನ್ನು ಬಹಳ ರೀತಿಯಲ್ಲಿ ಪ್ರಭಾವಿಸುತ್ತದೆ. ಮೊದಲನೆಯದಾಗಿ ಅದು ದಕ್ಷ ರೈತರ ಉತ್ಪಾದಕತೆಯನ್ನು ನಿಯಂತ್ರಿಸುತ್ತದೆ ಮಾತ್ರವಲ್ಲದೆ ಅದು ಕಡಿಮೆ ವೇತನ ಮತ್ತು ಜೀವನ ಮಟ್ಟದ ಕುಂಠಿತಕ್ಕೆ ಕಾರಣವಾಗುತ್ತದೆ. ಎರಡನೆಯದಾಗಿ ವ್ಯಾಪಾರದ ನೀತಿಯು ಅವರ ವಿರುದ್ಧ ತಿರುಗುತ್ತದೆ. ಸಾಲದ ನೀತಿನಿಯಮಾವಳಿಗೆ ಅನುಸಾರವಾಗಿ ರೈತರು ಒತ್ತಾಯಪೂರ್ವಕವಾಗಿ ಗಿರಾಕಿಗಳನ್ನೂ ಅಂತೆಯೇ ಉತ್ಪಾದನಾ ಉದ್ದೇಶಕ್ಕಾಗಿ ಬಳಸುವ ವಸ್ತುಗಳನ್ನೂ ಅತಿ ಹೆಚ್ಚಿನ ಬೆಲೆಗೆ ಹಣದ ದಲ್ಲಾಳಿಯಿಂದ ಪಡೆಯಬೇಕಾಗುತ್ತದೆ. ಇಲ್ಲಿಗೆ ಶೋಷಣೆ ನಿಲ್ಲುವುದಿಲ್ಲ. ರೈತರು ಉತ್ಪಾದಿಸಿದ ಉತ್ಪನ್ನಗಳನ್ನು ಕಡಿಮೆ ಬೆಲೆ ಪಡೆದುಕೊಂಡು ಅವರನ್ನು ಇನ್ನಷ್ಟು ಶೋಷಿಸುತ್ತಾರೆ. ರೈತರು ಕೊಂಡುಕೊಳ್ಳುವಾಗ ಹೆಚ್ಚಿನ ಬೆಲೆ ತೆತ್ತು ಮತ್ತು ತಮ್ಮ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ ಮೋಸಹೋಗುತ್ತಾರೆ.

ಮೂರನೆಯದಾಗಿ ರೈತರು ಸಾಲಭಾದೆಯಿಂದಾಗಿ ತಮ್ಮ ಆಸ್ತಿಪಾಸ್ತಿಯನ್ನು ಕಳೆದುಕೊಳ್ಳುತ್ತಾರೆ. ಅದು ಸಮಾಜವನ್ನು ಎರಡು ರೀತಿಯಾಗಿ ವಿಭಜಿಸುತ್ತದೆ. ಸಾಲ ಕೊಡುವ ವರ್ಗವನ್ನು ಶ್ರೀಮಂತ ವರ್ಗವಾಗಿಯೂ ಸಾಲ ಪಡೆಯುವಾತನನ್ನು ಬಡವನಾಗಿಯೂ ವಿಭಜಿಸುತ್ತದೆ. ಭೂರಹಿತ ಕೃಷಿ ಕಾರ್ಮಿಕರಿಗೆ ಉತ್ಪಾದನಾ ಉತ್ತೇಜಕವಿರುವುದಿಲ್ಲ. ಹೆಚ್ಚಿನ ಸಾಲಭಾದೆಯು ನೈತಿಕ ಹಾಗೂ ಸಾಮಾಜಿಕ ಸಂಬಂಧವನ್ನು ಕೆಟ್ಟ ರೀತಿಯಲ್ಲಿ ಪ್ರಭಾವಿಸುತ್ತದೆ. ಮತ್ತು ಎರಡು ವರ್ಗಗಳ ನಡುವೆ ಘರ್ಷಣೆಗೆ ಕಾರಣವಾಗುತ್ತದೆ. ಅದು ಕೃಷಿಕರ ರಾಜಕೀಯ ಸ್ಥಾನಮಾನದ ಮೇಲೂ ಪ್ರಭಾವ ಬೀರುತ್ತದೆ. ಮಾತ್ರವಲ್ಲದೆ ಕೆಲವು ಕೃಷಿಕರು ಸಾಲದಿಂದ ಹೊರಬರಲು ಶತಪ್ರಯತ್ನ ಪಡುತ್ತಿದ್ದಾರೆ, ಹಣದ ದಲ್ಲಾಳಿಗಳು ಅವರನ್ನು ಸಾಲದಲ್ಲೇ ಉಳಿಯುವಂತೆ ಮಾಡುತ್ತಾರೆ ಅದಕ್ಕಾಗಿ ಅಡ್ಡದಾರಿಗಳನ್ನೂ ಹಿಡಿಯುತ್ತಾರೆ.

೨. ಗ್ರಾಮೀಣ ಬ್ಯಾಂಕುಗಳ ಉಗಮ, ಪ್ರಾಮುಖ್ಯತೆ, ಕೊಡುಗೆ ಮತ್ತು ಸಮಸ್ಯೆಗಳು, ಗುಣಲಕ್ಷಣ:

ಈ ದೇಶದಲ್ಲಿ ಎಷ್ಟೋ ವರುಷಗಳಿಂದಲೂ ಸಹಕಾರಿ ಪತ್ತಿನ ಸಂಘಗಳು ವ್ಯವಸಾಯಕ್ಕೆ ಗ್ರಾಮೀಣ ಭಾಗದಲ್ಲಿ ಹಣಕಾಸಿನ ಸಹಾಯವನ್ನು ಮಾಡುತ್ತಲೇ ಬಂದಿದ್ದವು, ಆದರೂ ಈ ಸಹಕಾರಿ ಸಂಘಗಳು ಒಟ್ಟು ಗ್ರಾಮೀಣ ಭಾಗಗಳ ಸಾಲಗಳಲ್ಲಿ ಕೇವಲ ಶೇಕಡಾ ೩೨ ರಷ್ಟನ್ನು ಮಾತ್ರ ಕೊಡುತ್ತಿದ್ದವು ಚಳುವಳಿ ಕೇವಲ ಆದರೆ ಇಡೀ ಭಾರತದಲ್ಲಿ ಈ ಸಹಕಾರಿ ತಮಿಳುನಾಡು, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಮಾತ್ರ ಯಶಸ್ವಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿತ್ತು ಇದರಿಂದ ಗ್ರಾಮೀಣ ಪ್ರದೇಶಗಳಿಗೆ ಬ್ಯಾಂಕುಗಳು ಹೋಗಿ, ಅಲ್ಲಿನ ಜನರಿಗೆ ಬೇಕಾಗುವ ಸಾಲವನ್ನು ಈ ಹೊಸ ಗ್ರಾಮೀಣ ಬ್ಯಾಂಕುಗಳು ಕೊಡಬೇಕೆಂದು ಸರಕಾರವು ಮೊದಲು ಐದು ರಾಜ್ಯಗಳಲ್ಲಿ ಆರು ಶಾಖೆಗಳನ್ನು ತೆರೆದು ಈ ಯೋಜನೆಗೆ ಅಸ್ತು ಎಂದಿತು.

ಈ ಪ್ರಾದೇಶಿಕ ಬ್ಯಾಂಕುಗಳನ್ನು ರಚಿಸುವ ಹೊಣೆಯನ್ನು ರಾಷ್ಟ್ರೀಕೃತ ಬ್ಯಾಂಕುಗಳಿಗೆ ವಹಿಸಿಕೊಡಲಾಯಿತು. ಪ್ರಾಥಮಿಕ ಹಂತದಲ್ಲಿ ಇವುಗಳ ಅಧಿಕೃತ ಬಂಡವಾಳ ಒಂದು ಕೋಟಿ ರೂಪಾಯಿ ಇದ್ದು, ಸಂದಾಯವಾದ ಬಂಡವಾಳ ೨೫ ಲಕ್ಷ ರೂಪಾಯಿ ಎಂದು ನಿರ್ಧರಿಸಲಾಯಿತು. ನಂತರ ಅಧಿಕೃತ ಬಂಡವಾಳವನ್ನು ಐದು ಕೋಟಿ ರೂಪಾಯಿಗಳಿಗೇರಿಸಿ ಸಂದಾಯವಾದ ಹಣವನ್ನು ಒಂದು ಕೋಟಿ ರೂಪಾಯಿಗಳಿಗೆ ಏರಿಸಲಾಯಿತು. ಈ ಸಂದಾಯವಾದ ಹಣವು ಶೇಕಡಾ ಬಂಡವಾಳದಲ್ಲಿ ಸರಕಾರ, ಸಂಬಂಧಿಸಿದ ರಾಜ್ಯ ಸರ್ಕಾರಗಳು ಶೇಕಡಾ ೧೫ ಮತ್ತು ಈ ಪ್ರಾದೇಶಿಕ ಬ್ಯಾಂಕುಗಳನ್ನು ತೆರೆಯಲು ಹೊಣೆಗಾರಿಕೆ ಹೊತ್ತು ವ್ಯವಸ್ಥೆ ಮಾಡಿದ ಪ್ರಾಯೋಜಕ ಬ್ಯಾಂಕು ಉಳಿದ ಶೇಕಡಾ ೩೫ ರಷ್ಟನ್ನು ಒದಗಿಸಬೇಕೆಂದು ಕಾನೂನನ್ನೇ ರಚಿಸಲಾಯಿತು.

ರಾಷ್ಟ್ರೀಕೃತ ಬ್ಯಾಂಕುಗಳನ್ನು ಗ್ರಾಮೀಣ ಅಭಿವೃದ್ಧಿಯಲ್ಲಿ ಇನ್ನೂ ಹೆಚ್ಚಿನ ಪ್ರಭಾವಶಾಲಿ ಪಾತ್ರವನ್ನು ವಹಿಸುವಂತೆ ಮಾಡಲು ಭಾರತ ಸರಕಾರ ಹೊಸ ಅವಿಷ್ಕಾರಗಳ ಅನ್ವೇಷಣೆಯಲ್ಲಿತ್ತು ಅವುಗಳು ಗ್ರಾಮಾಂತರ ಪ್ರದೇಶಗಳಲ್ಲಿ ನೆಲೆಯೂರಿದ್ದರೂ ಅತಿ ಸಣ್ಣ ರೈತರಿಗೆ ಕೃಷಿ ಕಾರ್ಮಿಕರಿಗೆ, ಕುಶಲಕರ್ಮಿಗಳಿಗೆ ಹಾಗೂ ಉಳಿದ ವರ್ಗದ ಜನರಿಗೆ ಬ್ಯಾಂಕಿಂಗ್ ಸೇವೆ ಸುಲಭವಾಗಿ ದೊರಕುತ್ತಿರಲಿಲ್ಲ. ಹಳ್ಳಿಯ ಸಮಸ್ತ ದೊಡ್ಡ ರೈತರೇ ಬ್ಯಾಂಕುಗಳ ಗ್ರಾಹಕರಾಗಿದ್ದರು. ಸಣ್ಣರೈತರಿಗೆ ಈ ಸೌಲಭ್ಯವನ್ನು ಒದಗಿಸುವ ಸಲುವಾಗಿ ಕೇಂದ್ರ ಹಾಗು ಸರಕಾರ ರಾಜ್ಯ ಸರ್ಕಾರವು ರಾಷ್ಟ್ರೀಕೃತ ಬ್ಯಾಂಕುಗಳ ಜಂಟಿ ಸಹಭಾಗಿತ್ವದಲ್ಲಿ ಗ್ರಾಮೀಣ ಬ್ಯಾಂಕುಗಳ ಸ್ಥಾಪನೆಗೆ ಮುಂದಾಯಿತು. ಮೊದಲು ಸುಗ್ರೀವಾಜ್ಞೆಯ

ಮೂಲಕ ಇದಕ್ಕೆ ನಾಂದಿ ಹಾಡಿ ಗ್ರಾಮೀಣ ಕ್ಷೇತ್ರಕ್ಕೆ ಹರಿಕಾರರನ್ನಾಗಿ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲಾಯಿತು. ಇವುಗಳಲ್ಲಿ ಕರ್ನಾಟಕದ ಪಾಲು ೧೩ ಗ್ರಾಮೀಣ ಬ್ಯಾಂಕುಗಳು, ನಂತರದಲ್ಲಿ ಇಡೀ ರಾಜ್ಯದಲ್ಲಿ ಇವುಗಳ ಶಾಖೆಗಳು ಹರಡಿದ್ದವು. ಗ್ರಾಮೀಣ ಬ್ಯಾಂಕುಗಳು ತಮ್ಮ ಹೆಸರಿಗೆ ೬ ನದಿಗಳ ಹೆಸರನ್ನು ಆರಿಸಿದವು. ಅವು ತುಂಗಭದ್ರಾ, ಮಲಪ್ರಭಾ, ನೇತ್ರಾವತಿ, ಕೃಷ್ಣಾ, ವರದಾ ಮತ್ತು ಕಾವೇರಿ.

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಉದ್ದೇಶಗಳು:

೧. ಉತ್ಪಾದನೆಯಲ್ಲಿ ತೊಡಗಿದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಭೂರಹಿತ ಕಾರ್ಮಿಕರಿಗೆ, ಕುಶಲ ಕರ್ಮಿಗಳಿಗೆ ಹಾಗೂ ಸಣ್ಣ ಪುಟ್ಟ ವ್ಯಾಪಾರ ಮಾಡಿಕೊಂಡು ಇರುವವರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲಗಳು ದೊರೆಯಬೇಕು.

೨. ದೇಶವು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಗ್ರಾಮೀಣ ಭಾಗದಲ್ಲಿಯ ವ್ಯವಸಾಯ, ವ್ಯಾಪಾರ, ಉದ್ಯೋಗಗಳಿಗೆ ಹಣ ಸಹಾಯವನ್ನು ನೀಡುವುದು.

೩. ಗ್ರಾಮೀಣ ಭಾಗದ ಅಭಿವೃದ್ಧಿಗೊಳ್ಳುವ ವ್ಯವಸಾಯ ಮತ್ತು ವಾಣಿಜ್ಯಗಳಿಂದ ಬರುವ ಲಾಭವನ್ನು ಉಳಿತಾಯ ಮಾಡುವ ಅಭ್ಯಾಸವನ್ನು ಹಳ್ಳಿಗರಲ್ಲಿ ಬೆಳೆಸುವುದು.

೪. ಗ್ರಾಮೀಣ ಭಾಗದ ಸುರಕ್ಷಿತ ಯುವಕರಿಗೆ ಉದ್ಯೋಗಗಳನ್ನು ಸೃಷ್ಟಿಸಲು ಸಹಾಯವನ್ನು ನೀಡುವುದು.

೫. ಮುಖ್ಯವಾಗಿ, ನಗರಗಳಲ್ಲಿ ಕಾರ್ಯ ಮಾಡುತ್ತಿದ್ದ ಬ್ಯಾಂಕುಗಳಿಗಿಂತ ಕಡಿಮೆ ವೆಚ್ಚದಲ್ಲಿ ಗ್ರಾಮೀಣ ಭಾಗದಲ್ಲಿ ಬ್ಯಾಂಕುಗಳನ್ನು ತೆರೆಯುವುದು ಮತ್ತು ಕಡಿಮೆ ವೆಚ್ಚದಲ್ಲಿ ನಡೆಸುವುದು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಪ್ರಸ್ತುತ ವಾಣಿಜ್ಯ ಬ್ಯಾಂಕುಗಳಂತೆಯೇ ಆಗಿದ್ದರೂ, ಅವುಗಳ ಭೌಗೋಳಿಕ ವ್ಯಾಪ್ತಿ ಪರಿಮಿತವಾಗಿರುತ್ತದೆ. ಗ್ರಾಮೀಣ ಬ್ಯಾಂಕುಗಳು ಗ್ರಾಹಕರಿಗೆ ಸಾಲಕ್ಕಾಗಿ ವಿಧಿಸುವ ಬಡ್ಡಿಯ ದರವು ಸಹಕಾರಿ ಸಂಘಗಳು ವಿಧಿಸುವ ಬಡ್ಡಿ ದರಕ್ಕಿಂತ ಹೆಚ್ಚು ಇರಕೂಡದು.

೬. ೧೯೭೨ ರಲ್ಲಿ ಗ್ರಾಮೀಣ ಬ್ಯಾಂಕುಗಳು ಪ್ರಾರಂಭವಾದವು ೧೯೭೫ ರಿಂದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿದ್ದವು, ಅವು ದೇಶದ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಯನಿರ್ವಹಿಸುತ್ತಿವೆ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಪರಸ್ಪರ ವಿಲೀನಗೊಳಿಸಿ ಅವುಗಳ ಸಂಖ್ಯೆಯನ್ನು ಇಳಿಸುವ ಕಾರ್ಯ ನಡೆಯುತ್ತಿದೆ. ಮೊದಲು ಈ ಪ್ರಾದೇಶಿಕ ಬ್ಯಾಂಕ್ ಸಿಬ್ಬಂದಿಗೆ ವಾಣಿಜ್ಯ ಬ್ಯಾಂಕಿನ ಸಿಬ್ಬಂದಿಗಿಂತ ಕಡಿಮೆ ಸಂಬಳವನ್ನು ಕೊಡುತ್ತಿದ್ದುದರಿಂದ, ಸಿಬ್ಬಂದಿಯ ವೆಚ್ಚ ಕಡಿಮೆಯಾಗಿತ್ತು. ಆದರೆ ಈಗ ಸುಪ್ರೀಂ ಕೋರ್ಟಿನ ತೀರ್ಪಿನನ್ವಯ ವಾಣಿಜ್ಯ ಸೀಮಿತ ಬ್ಯಾಂಕುಗಳ ಸಿಬ್ಬಂದಿಗೆ ನೀಡುವಷ್ಟೇ ಸಂಬಳವನ್ನು ಇವರಿಗೂ

ನೀಡಲಾಗುತ್ತಿದೆ. ಕಾರ್ಯವ್ಯಾಪ್ತಿ ಮತ್ತು ಕಡಿಮೆ ಬಡ್ಡಿದರದಿಂದ ಈ ಬ್ಯಾಂಕುಗಳು ಮೊದಮೊದಲು ನಷ್ಟದಲ್ಲಿಯೇ ನಡೆದರೂ ಈಚೆಗೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ದಕ್ಷತೆ ಹೆಚ್ಚೇ ಬಹುತೇಕ ಪ್ರಾದೇಶಿಕ ಬ್ಯಾಂಕುಗಳು ಲಾಭ ಗಳಿಸುತ್ತಿವೆ.

ಗ್ರಾಮೀಣ ಸಾಲ:

ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಜನರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದು ಕಷ್ಟದ ಜೀವನವನ್ನು ನಡೆಸುತ್ತಾರೆ. ಕೃಷಿಗೆ ಸಂಬಂಧಿಸಿದಂತೆ ಅವರ ಚಟುವಟಿಕೆಗಳು ಹಣಕಾಸಿನ ಸ್ಥಿತಿಗತಿಗೆ ಅವಲಂಬನೆಯಾಗಿದೆ.

ಕೃಷಿಯು ಪ್ರಗತಿಯು ಬಹುಪ್ರಮಾಣದಲ್ಲಿ ಹಣಕಾಸಿನ ಪೂರೈಕೆಗೆ ಅವಲಂಬಿತವಾಗಿದೆ. ಗ್ರಾಮೀಣ ಕೃಷಿಕರು ತಮಗೆ ಬೇಕಾದ ಹಣಕಾಸನ್ನು ಪಡೆಯಲು ಸಾಂಸ್ಥಿಕೇತರ ಮೂಲಗಳನ್ನು ಅವಲಂಬನೆ ಮಾಡಬೇಕಾಗುತ್ತದೆ. ಆದರೆ ಹೆಚ್ಚಿನ ಸಾಂಸ್ಥಿಕೇತರ ಮೂಲಗಳು ಅವ್ಯವಸ್ಥಿತ ಚೌಕಟ್ಟನ್ನು ಹೊಂದಿದ್ದು ಹೆಚ್ಚಿನ ಬಡ್ಡಿ ವಸೂಲಾತಿ, ಮರುಪಾವತಿಗಾಗಿ ಬೆದರಿಕೆ, ಜಾಮೀನು ಇತ್ಯಾದಿ ಕಂದಾಚಾರಗಳ ಮುಖಾಂತರ ಸಾಲಗಾರರನ್ನು ಸಂಕಟಕ್ಕೀಡು ಮಾಡುತ್ತಿದ್ದವು. ಹೀಗಾಗಿ ಒಂದು ವ್ಯವಸ್ಥಿತ ಸಾಂಸ್ಥಿಕ ಹಣಕಾಸಿನ ಮೂಲ ಅವಶ್ಯಕತೆಯು ತಲೆದೋರಿತು.

೧.೨ ಗ್ರಾಮೀಣ ಬ್ಯಾಂಕೋದ್ಯಮ:

ಗ್ರಾಮೀಣ ಪ್ರದೇಶಗಳೇ ಭಾರತದ ಅರ್ಥವ್ಯವಸ್ಥೆಯ ಬೆನ್ನೆಲುಬು ಕೃಷಿ ಪ್ರಧಾನವಾದ ಬಡತನದಿಂದ ತತ್ತರಿಸುತ್ತಿರುವ ಹಾಗೂ ಪ್ರಾದೇಶಿಕ ಅಸಮಾನತೆ ತಾಂಡವಾಡುತ್ತಿರುವ ಭಾರತದಲ್ಲಿ ಗ್ರಾಮೀಣ ಪ್ರದೇಶಗಳ ಮತ್ತು ಗ್ರಾಮ ಆಧಾರಿತ ಚಟುವಟಿಕೆಗಳ ಅಭಿವೃದ್ಧಿಯಾಗದ ಹೊರತು ರಾಷ್ಟ್ರದ ಸರ್ವತೋಮುಖ ಪ್ರಗತಿ ಕೇವಲ ಕನಸಾಗಿ ಉಳಿಯುತ್ತದೆ. ಯಾವುದೇ ಚಟುವಟಿಕೆಯ ಅಭಿವೃದ್ಧಿಗೆ ಸಕಾಲಿಕವಾದ ಹಾಗೂ ತಕ್ಕಷ್ಟು ಪ್ರಮಾಣದ ಹಣಕಾಸಿನ ಪೂರೈಕೆಯು ಅತ್ಯುತ್ತಮ ಪೂರಕಾಂಶವಾಗಿದೆ. ಕೃಷಿಯನ್ನೊಳಗೊಂಡ ಗ್ರಾಮೀಣ ವಲಯದ ಆರ್ಥಿಕ ಚಟುವಟಿಕೆಗಳಿಗೆ ಹಣಕಾಸಿನ ಪೂರೈಕೆಯ ಬಗೆಗೆ ಮೊದಲಿನಿಂದಲೂ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ೧೯೦೪ರಲ್ಲಿ “ಉದ್ಧರಿ ಸಹಕಾರ ಸಂಘಗಳ ಕಾಯಿದೆ” ಯ ಜಾರಿಯೊಂದಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರ ಸಂಘಗಳು ಸ್ಥಾಪನೆಗೊಂಡು ಕೃಷಿಕರ ಸಾಲದ ಅವಶ್ಯಕತೆಗಳನ್ನು ಪೂರೈಸ ತೊಡಗಿದವು. ಹಣಕಾಸಿನ ಲೇವಾದೇವಿಗಾರರ

ತೀವ್ರತರವಾದ ಶೋಷಣೆಯಿಂದ ಜರ್ಜರಿತರಾಗಿದ್ದ ಭಾರತದ ರೈತರನ್ನು ಸಾಲಗಾರಿಕೆಯ ಹೊರೆಯಿಂದ ಮುಕ್ತಿಗೊಳಿಸಲು ಸಹಕಾರಿ ಸಂಸ್ಥೆಗಳು ಸಾಕಷ್ಟು ಶ್ರಮಿಸಿದವು. ಆದರೆ ಸಂಪನ್ಮೂಲಗಳ ಕೊರತೆ ಮತ್ತು ಹೆಚ್ಚುತ್ತಿರುವ ಉದ್ಧರಿ ಬೇಡಿಕೆಯ ಪರಿಣಾಮವಾಗಿ ಈ ಸಂಸ್ಥೆಗಳು ತಮ್ಮ ಕಾರ್ಯದಲ್ಲಿ ವಿಫಲಗೊಂಡವು.

ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಾಖೆಗಳನ್ನು ತೆರೆಯುವಂತೆ ಮಾಡುವ ಗ್ರಾಮೀಣ ವಲಯದ ಚಟುವಟಿಕೆಗಳಿಗೆ ಸಕಾಲಿಕ ಹಣಕಾಸಿನ ಪೂರೈಕೆಗೆ ಕ್ರಮ ಕೈಗೊಳ್ಳುವ ಮತ್ತು ಆ ಮೂಲಕ ಹಳ್ಳಿಗಳಿಗೆ ಹಾಗೂ ನಿರ್ಲಕ್ಷಿತ ಪ್ರದೇಶಗಳಿಗೆ ಬ್ಯಾಂಕೋದ್ಯಮ ಸೌಲಭ್ಯಗಳನ್ನು ವಿಸ್ತರಿಸುವ ಧ್ಯೇಯಗಳಿಂದ ೧೯೬೯ರಲ್ಲಿ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣವನ್ನು ಕೈಗೊಳ್ಳಲಾಯಿತು. ಈ ಮೂಲಕ ಗ್ರಾಮೀಣ ಉದ್ಧರಿ ಪೂರೈಕೆಯಲ್ಲಿ “ಬಹು ಸಂಸ್ಥೆಯ ವ್ಯವಸ್ಥೆ”ಯನ್ನು ಕಾರ್ಯರೂಪಕ್ಕೆ ತರಲಾಯಿತು. ಇದರ ಪ್ರಕಾರ ಗ್ರಾಮೀಣ ಸಾಲ ನೀಡಿಕೆಯಲ್ಲಿ ಸಹಕಾರಿ ಸಂಸ್ಥೆಗಳು ಮತ್ತು ವಾಣಿಜ್ಯ ಬ್ಯಾಂಕುಗಳು ಒಂದಕ್ಕೊಂದು ಪೂರಕವಾಗಿ ಕೆಲಸ ನಿರ್ವಹಿಸಬೇಕಾಯಿತು.

ಆದರೆ ತಮ್ಮದೇ ಆದ ಆಂತರಿಕ ದೌರ್ಬಲ್ಯಗಳಿಂದಾಗಿ ಸಹಕಾರ ಸಂಘಗಳ ಮತ್ತು ವಾಣಿಜ್ಯ ಬ್ಯಾಂಕುಗಳು ಯಥೋಚಿತವಾದ ಗ್ರಾಮೀಣ ಉದ್ಧರಿ ಪೂರೈಕೆಯಲ್ಲಿ ಸೋಲನ್ನಪ್ಪಿದವು. ಸಹಕಾರ ಸಂಘಗಳ ಗ್ರಾಮೀಣ ವ್ಯವಸ್ಥೆಯಲ್ಲಿ ಬೇರು ಬಿಟ್ಟಿದ್ದರೂ ಸಹ ಸಂಪನ್ಮೂಲಗಳ ತೀವ್ರ ಕೊರತೆ ಅವುಗಳನ್ನು ಬಾಧಿಸುತ್ತಿತ್ತು. ಇದಕ್ಕೆ ವಿರುದ್ಧವಾಗಿ, ವಾಣಿಜ್ಯ ಬ್ಯಾಂಕುಗಳ ಬಳಿ ಸಾಕಷ್ಟು ಸಂಪನ್ಮೂಲಗಳಿದ್ದರೂ ಸಹ ಅವು ಗ್ರಾಮಾಂತರ ಪ್ರದೇಶಗಳಲ್ಲಿ ಹಾಸುಹೊಕ್ಕಾಗಿ ಬೆಳೆಯಲಿಲ್ಲ.

ಈ ವೈಫಲ್ಯದಿಂದಾಗಿ ಗ್ರಾಮೀಣ ಉದ್ಧರಿ ಪೂರೈಕೆಯಲ್ಲಿ ಹೊಸದೊಂದು ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವ ಅವಶ್ಯಕತೆ ತಲೆದೋರಿತು. ೧೯೭೫ರಲ್ಲಿ ಘೋಷಿಸಿದ ಇಪ್ಪತ್ತು ಅಂಶಗಳ ಕಾರ್ಯಕ್ರಮವು ಈ ದಿಸೆಯಲ್ಲಿ ಒಂದು ಆಯಾಮವನ್ನು ಒದಗಿಸಿತು. ಗ್ರಾಮೀಣ ಸಾಲಗಾರಿಕೆಯ ನಿರ್ಮೂಲನವು ಈ ಕಾರ್ಯಕ್ರಮದಲ್ಲಿ ಒಂದು ಪ್ರಮುಖ ಅಂಶವಾಗಿದ್ದಿತು. ಸಣ್ಣ ಮತ್ತು ಅತೀ ಸಣ್ಣ ರೈತರು, ಭೂರಹಿತ ಕಾರ್ಮಿಕರು, ಕುಶಲ ಕರ್ಮಿಗಳು ಮತ್ತಿತರ ದುರ್ಬಲ ವರ್ಗಗಳ ಜನರನ್ನು ಸಾಲಗಾರಿಕೆಯಿಂದ ವಿಮುಕ್ತಿಗೊಳಿಸಲು ಹಾಗೂ ಅವರಿಗೆ ಯಥೋಚಿತವಾದ ಸಾಲ ಸೌಲಭ್ಯಗಳನ್ನು ಕಲ್ಪಿಸಲು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲಾಯಿತು.

ಕೃಷಿ ಸಾಲವನ್ನು ಒದಗಿಸುವ ಸಾಂಸ್ಥಿಕ ಮೂಲಗಳಲ್ಲಿ ಒಂದಾದ “ಗ್ರಾಮೀಣ ವಿಕಾಸ ಬ್ಯಾಂಕ್” ಇಪ್ಪತ್ತು ಅಂಶಗಳ ಆರ್ಥಿಕ ಕಾರ್ಯಗಳ ಅನ್ವಯ ಸ್ಥಾಪಿಸಲ್ಪಟ್ಟಿವೆ. ಅವುಗಳ ಮೂಲ ಹೆಸರು ಪ್ರಾದೇಶಿಕ

ಗ್ರಾಮೀಣ ಬ್ಯಾಂಕುಗಳು ಅವು ರಾಷ್ಟ್ರೀಕೃತ ಬ್ಯಾಂಕೊಂದರ ಪ್ರಾಯೋಜಕತ್ವದಲ್ಲಿ ಕಾರ್ಯವೆಸಗುತ್ತವೆ. ಅವುಗಳ ಮೂಲ ಬಂಡವಾಳದಲ್ಲಿ ಶೇ.೫೦ರಷ್ಟು ಕೇಂದ್ರ ಸರಕಾರ ಮತ್ತು ಶೇ.೩೫ರಷ್ಟನ್ನು ಗ್ರಾಮೀಣ ಆಶ್ರಯದಾತ ವಾಣಿಜ್ಯ ಬ್ಯಾಂಕುಗಳು ಒದಗಿಸುತ್ತವೆ.


ಗ್ರಾಮೀಣ ವಿಕಾಸ ಬ್ಯಾಂಕಿನ ಲಕ್ಷಣಗಳು:

- ಗ್ರಾಮೀಣ ಬ್ಯಾಂಕಿನ ಕಾರ್ಯವ್ಯಾಪ್ತಿ ಒಂದು ಅಥವಾ ಎರಡು ಜಿಲ್ಲೆಗಳಲ್ಲಿ ಸೀಮಿತವಾಗಿರುತ್ತದೆ.
- ಗ್ರಾಮೀಣ ಬ್ಯಾಂಕುಗಳು ಕಡಿಮೆ ಆದಾಯವುಳ್ಳ ಪ್ರಾಥಮಿಕ ಕ್ಷೇತ್ರದ ಸಣ್ಣ ಮತ್ತು ಅಂಚಿನ ರೈತರಿಗೆ ಗ್ರಾಮೀಣ ಕಸುಬುದಾರರಿಗೆ ಉತ್ಪಾದಕ ಉದ್ದೇಶಗಳಿಗೆ ಸಾಲ ಒದಗಿಸುತ್ತವೆ.
- ಗ್ರಾಮೀಣ ಬ್ಯಾಂಕುಗಳ ಬಡ್ಡಿದರವು ಸಹಕಾರಿ ಬ್ಯಾಂಕುಗಳ ಬಡ್ಡಿ ದರಕ್ಕಿಂತ ಹೆಚ್ಚು ಇರಕೂಡದು.
- ಗ್ರಾಮೀಣ ಬ್ಯಾಂಕುಗಳು 'ನಬಾರ್ಡ್' ನ ನಿಯಂತ್ರಣದಲ್ಲಿರುತ್ತವೆ.

ಗ್ರಾಮೀಣ ಬ್ಯಾಂಕುಗಳ ಸುಧಾರಣೆಯು ಕೃಷಿ ಸಾಲ ಸುಧಾರಣಾ ಕ್ರಮಗಳಲ್ಲಿ ಒಂದಾಗಿದೆ. ಕೃಷಿಯು ಭಾರತದ ಅರ್ಥ ವ್ಯವಸ್ಥೆಯಲ್ಲಿ ಪ್ರಧಾನ ಅಂಶವಾಗಿದ್ದು ಅದರ ಬೆಳವಣಿಗೆಯು ಮಂದಗತಿಯಿಂದ ಕೂಡಿದೆ. ಹೀಗಿರುವಾಗ ಕೃಷಿ ಅವಲಂಬಿತ ಜನರ ಆರ್ಥಿಕ ನಿರ್ವಹಣೆಯಲ್ಲಿ ಗ್ರಾಮೀಣ ವಿಕಾಸ ಬ್ಯಾಂಕಿನ ಪಾತ್ರದ ಅಧ್ಯಯನ ಅವಶ್ಯವೆನಿಸುತ್ತದೆ.

ಬ್ಯಾಂಕುಗಳ ವರ್ಗೀಕರಣ :

ಬ್ಯಾಂಕುಗಳನ್ನು ಈ ರೀತಿಯಾಗಿ ವರ್ಗೀಕರಿಸಬಹುದು.



ಈಗ ಬ್ಯಾಂಕಿಂಗ್ ಕ್ಷೇತ್ರಗಳ ಪ್ರಮುಖ ವಿಭಾಗಗಳು ಈ ಕೆಳಗಿನಂತಿದೆ:

ಭಾರತದ ಸಾರ್ವಜನಿಕ ಬ್ಯಾಂಕುಗಳು – ಎಲ್ಲಾ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಈ ವರ್ಗದಲ್ಲಿ ಬರುತ್ತವೆ. ಬ್ಯಾಂಕು ಭಾರತೀಯ ರಿಸರ್ವ್ ಜೊತೆಗೆ, ಎಸ್ಬಿಐ ಅದರ ಸಹವರ್ತಿಗಳು ಮತ್ತು ಬಗ್ಗೆ ೨೦ ರಾಷ್ಟ್ರೀಕೃತ ಬ್ಯಾಂಕುಗಳು ಈ ವರ್ಗದಲ್ಲಿ ಹೊಂದಿದೆ ಸರ್ಕಾರದ ಬ್ಯಾಂಕ್‌ಗಳು ಬಂಡವಾಳ ಎಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸಹ ಈ ವರ್ಗದಲ್ಲಿ ಬರುತ್ತವೆ.

ಭಾರತದ ಖಾಸಗಿ ಬ್ಯಾಂಕುಗಳು – ಉದಾರೀಕರಣದ ಪಾಲಿಸಿಯನ್ನು ಆಪ್ ಕರೆದುಕೊಂಡು, ಖಾಸಗಿ ವಲಯದ ಬ್ಯಾಂಕ್‌ಗಳು ವಿವಿಧ ಗ್ರಾಹಕರಿಗೆ ವಿವಿಧ ಸೇವೆಗಳು ಮತ್ತು ಆರ್ಥಿಕ ಬೆಳವಣಿಗೆ ಮೇಲೆ ಅಗಾಧವಾದ ಕೊಡುಗೆಯನ್ನು ನೀಡಿತು.

ಭಾರತದ ಅಂತರಾಷ್ಟ್ರೀಯ ಬ್ಯಾಂಕುಗಳು – ಈ ಬ್ಯಾಂಕುಗಳು ಭಾರತ ಹೊರಗೆ ನೆಲೆಗೊಂಡಿದೆ ಮತ್ತು ಭಾರತದಲ್ಲಿ ತಮ್ಮ ಶಾಖೆಗಳನ್ನು ಹೊಂದಿವೆ. ಈಗ ಸ್ಪರ್ಧೆಯಲ್ಲಿ ಬ್ಯಾಂಕಿಂಗ್ ವಲಯದ ಜೊತೆ ತಮ್ಮ ಅಸ್ತಿತ್ವವನ್ನು ಹೆಚ್ಚಿಸಲಾಗಿದೆ. ಈ ಬ್ಯಾಂಕುಗಳು ಸ್ಥಳೀಯವಾಗಿ ಶಾಖೆಗಳನ್ನು ತೆರೆಯಲು ಸಾಧ್ಯವಾಗುವುದಿಲ್ಲ.

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು – ಎಸ್ಬಿಐ ಹೊಂದಿದೆ ೩೦ ಆರ್‌ಆರ್‌ಬಿ ಎಂದು ಭಾರತದಲ್ಲಿನ ಪ್ರಾದೇಶಿಕ ಬ್ಯಾಂಕುಗಳು, ಹೊರತಾಗಿ ಎಸ್ಬಿಐನಿಂದ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಗೊಂಡಿವೆ ಹಲವು ಗ್ರಾಮೀಣ ಬ್ಯಾಂಕುಗಳಿವೆ. ೧೪೪೭೫ ದೂರದ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಗೊಂಡಿವೆ, ಇದು ಗ್ರಾಮೀಣ ಬ್ಯಾಂಕುಗಳು.

ಕೃಷಿ ಸಾಲದ ವ್ಯವಸ್ಥೆಯ ಸಮಸ್ಯೆಗಳು:

ಕೃಷಿ ಸಾಲ ವ್ಯವಸ್ಥೆಯು ಈಗಲೂ ಸಮಸ್ಯಾಪೂರಿತವಾಗಿದೆ. ಕೃಷಿ ಸಾಲ ವ್ಯವಸ್ಥೆಯ ಪ್ರಮುಖ ಸಮಸ್ಯೆಗಳು ಇವು:

೧. **ಮಿತವಾದ ವ್ಯಾಪ್ತಿ:** ಕೃಷಿ ಸಾಲ ವ್ಯವಸ್ಥೆಯ ವ್ಯಾಪ್ತಿಯು ತುಂಬಾ ಮಿತಿಗೊಳಪಟ್ಟಿದೆ. ಕೃಷಿ ಸಾಲ ನೀಡಿಕೆಯಲ್ಲಿ ಸಹಕಾರಿ ಸಂಘಗಳು ಪ್ರಧಾನ ಪಾತ್ರ ವಹಿಸುತ್ತವೆ. ಆದರೆ ಸಹಕಾರಿ ಸಂಘಗಳ ಆಡಳಿತ ವ್ಯವಸ್ಥೆಯಲ್ಲಿ ತುಂಬಾ ದೋಷಗಳಿವೆ. ಸ್ಥಾಪಿತ ಹಿತಾಸಕ್ತಿಗಳು ನಿಜವಾದ ಬಡ ರೈತರಿಗೆ ಸಾಲ ಸಿಗದಂತೆ ನೋಡಿಕೊಳ್ಳುತ್ತವೆ. ಸಂಘದ ಸದಸ್ಯರಲ್ಲಿ ದುರ್ಬಲ ವರ್ಗಕ್ಕೆ ಸೇರಿದವರನ್ನು ಕಡೆಗಣಿಸಲಾಗುತ್ತದೆ. ಕೃಷಿ ಸಾಲ ವ್ಯವಸ್ಥೆಯು ಕೆಲವರಿಗಷ್ಟೇ ಪ್ರಯೋಜನದಾಯಕವಾಗಿದೆ.

೨. **ಕಠಿಣ ನಿಬಂಧನೆಗಳು:** ರೈತರು ಸಾಂಸ್ಥಿಕ ಸಾಲಗಳನ್ನು ಪಡಕೊಳ್ಳುವುದು ಅತ್ಯಂತ ದುರ್ಗಮವಾದ ಸಾಹಸವೆನಿಸಿದೆ. ಕೃಷಿ ಸಾಲ ಪಡೆಯಲು ಅನೇಕ ನಿಬಂಧನೆಗಳಿವೆ. ಬಹುತೇಕ ಕೃಷಿಕರು ಅವಿದ್ಯಾವಂತರಾಗಿರುವುದರಿಂದ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳು ಕೇಳುವ

ಮಾಹಿತಿಗಳನ್ನು ಒದಗಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಸಾಲದ ಅರ್ಜಿ ನೀಡಿದ ತಕ್ಷಣ ಸಾಲ ಮಂಜೂರಾಗುವುದಿಲ್ಲ. ಆದುದರಿಂದ ರೈತರು ವ್ಯಾಪಾರಿಗಳ ಮತ್ತು ದಲ್ಲಾಳಿಗಳ ಬೆಲೆಯಲ್ಲಿ ಸುಲಭವಾಗಿ ಸಿಲುಕಿಕೊಳ್ಳುತ್ತಾರೆ.

೩. **ಸಮಯ ಮತ್ತು ಸಾಮರ್ಥ್ಯದ ಅಪವ್ಯಯ:** ಕೃಷಿಗೆ ಸಾಲ ನೀಡುವ ಬಹುತೇಕ ಸಂಸ್ಥೆಗಳು ನಗರ ಪ್ರದೇಶಗಳಲ್ಲಿ ಬೀಡು ಬಿಟ್ಟಿರುತ್ತವೆ. ರೈತರು ಸಾಲ ಮಂಜೂರಾತಿ ಮಾಡಿಸಿಕೊಳ್ಳಲು ತಮ್ಮ ಎರಡು ತೊಡರುಗಳನ್ನು ಬದಿಗೊತ್ತಿ ನಗರ ಪ್ರದೇಶಕ್ಕೆ ಧಾವಿಸಬೇಕಾಗುತ್ತದೆ. ಇದರಿಂದಾಗಿ ಅವರ ಸಮಯ ಮತ್ತು ಸಾಮರ್ಥ್ಯ ಪೋಲಾಗುತ್ತದೆ.

೪. **ಸಮನ್ವಯದ ಕೊರತೆ:** ಕೃಷಿ ಸಾಲ ಆಯೋಜನೆಯಲ್ಲಿ ಸಮನ್ವಯದ ಕೊರತೆಯಿರುವುದು ಮತ್ತೊಂದು ಸಮಸ್ಯೆಯಾಗಿದೆ. ಸಹಕಾರಿ ಸಂಘಗಳಿಂದ ಸುಲಭವಾಗಿ ಸಾಲ ಪಡೆಯುವ ಬಲಿಷ್ಠ ರೈತರು ವಾಣಿಜ್ಯ ಬ್ಯಾಂಕುಗಳಿಂದಲೂ ಸಾಲ ಪಡಕೊಳ್ಳುತ್ತಾರೆ. ಆದರೆ ದುರ್ಬಲ ರೈತರಿಗೆ ಎರಡೂ ಕಡೆಗಳಲ್ಲಿ ನಿರಾಶೆ, ತೊಂದರೆ, ಸಮಸ್ಯೆ ಕಾದಿರುತ್ತವೆ.

೫. **ಸಾಲಗಳ ದುರ್ಬಲಕೆ:** ಸಂಸ್ಥೆಗಳಿಂದ ಪಡೆದ ಸಾಲವನ್ನು ಉತ್ಪಾದಕ ಉದ್ದೇಶಗಳಿಗೆ ಬಳಸದಿರುವ ರೈತರು ಅನೇಕ ಸಮಸ್ಯೆಗಳಿಗೆ ಕಾರಣರಾಗುತ್ತಾರೆ. ಕೃಷಿಯ ಅಭಿವೃದ್ಧಿಗೆಂದು ಪಡೆಯುವ ಸಾಲಗಳು ಮದುವೆ, ಮುಂಜಿ, ವರದಕ್ಷಿಣೆ, ವರೋಪಚಾರ, ಬೀಗರೂಟ, ಪ್ರಜೆ, ಹೋಮ– ಎಂದು ಅನುತ್ಪಾದಕ ಉದ್ದೇಶಗಳಿಗೆ ದುರ್ಬಳಕೆಯಾಗುತ್ತದೆ. ಪರಿಣಾಮವಾಗಿ ರೈತರ ಮರುಪಾವತಿ ಸಾಮರ್ಥ್ಯ ಕುಂಠಿತವಾಗುತ್ತದೆ.

೬. **ಅದಕ್ಷ ಆಡಳಿತ :** ಸಹಕಾರಿ ಸಂಘಗಳ ಮತ್ತು ವಾಣಿಜ್ಯ ಬ್ಯಾಂಕುಗಳ ಆಡಳಿತವು ಅದಕ್ಷರ ಕೈಯಲ್ಲಿರುವುದು ಇನ್ನಷ್ಟು ಸಮಸ್ಯೆಗೆ ಕಾರಣವಾಗಿದೆ. ಈ ಸಂಸ್ಥೆಗಳ ಆಡಳಿತ ವರ್ಗಗಳು ಉದ್ಯಮಿಗಳನ್ನು, ವಾಣಿಜ್ಯ ಪತಿಗಳನ್ನು ಅಪಾರವಾಗಿ ಪ್ರೀತಿಸುತ್ತವೆ. ರೈತರ ಬಗ್ಗೆ ಆಡಳಿತ ವರ್ಗ ಬಹುತೇಕವಾಗಿ ಅನಾದರವನ್ನು ಹೊಂದಿರುತ್ತದೆ. ಹಾಗಾಗಿ ಕೃಷಿಕರು ಸಾಲ ಪಡೆಯಲು ಒದ್ದಾಡಬೇಕಾಗುತ್ತದೆ.

೭. **ಪ್ರಾಂತೀಯ ಅಸಮತೋಲನ:** ಕೃಷಿ ಸಾಲ ವಿತರಣೆಯಲ್ಲಿ ಪ್ರಾಂತೀಯ ಅಸಮತೋಲನದ ಸಮಸ್ಯೆಯಿದೆ. ಕೆಲವು ರಾಜ್ಯಗಳು ತುಂಬಾ ಪ್ರಯೋಜನ ಪಡೆದುಕೊಂಡರೆ ಕೆಲವು ರಾಜ್ಯಗಳು ಪ್ರಯೋಜನದಿಂದ ವಂಚಿತವಾಗಿವೆ. ದೇಶದಲ್ಲಿ ವಿತರಣೆಯಾಗುವ ಕೃಷಿ ಸಾಲದಲ್ಲಿ ಅರ್ಧಾಂಶಕ್ಕಿಂತಲೂ ಅಧಿಕ ಸಾಲವನ್ನು ಗುಜರಾತ್, ಆಂಧ್ರಪ್ರದೇಶ, ಪಂಜಾಬು, ತಮಿಳುನಾಡು ಮತ್ತು ಮಹಾರಾಷ್ಟ್ರಗಳು ಮಾತ್ರ ಕಬಳಿಸುತ್ತಿವೆ. ಸಹಜವಾಗಿ ಈ ಐದು ರಾಜ್ಯಗಳು ಕೃಷಿಯಲ್ಲಿ ಅದ್ಬುತ ಪ್ರಗತಿ ಸಾಧಿಸಿವೆ. ಉಳಿದ ರಾಜ್ಯಗಳು ಹಣಕಾಸಿನ ಕೊರತೆಯಿಂದಾಗಿ ಸಂಕಷ್ಟಕ್ಕೀಡಾಗಿವೆ.

೮. **ಹೆಚ್ಚುತ್ತಿರುವ ಅವಧಿ ಮೀರಿದ ಸಾಲ:** ಬಹುತೇಕ ರೈತರು ಸಹಕಾರಿ ಸಂಸ್ಥೆಗಳಿಂದ ಪಡೆದ ಸಾಲಗಳನ್ನು ಹಿಂದಿರುಗಿಸದೆ ಸಮಸ್ಯೆಗೆ ಕಾರಣರಾಗಿದ್ದಾರೆ. ಅವಧಿ ಮೀರಿದ ಸಾಲಗಳಿಂದಾಗಿ ಅನೇಕ ಸಹಕಾರಿ ಸಂಸ್ಥೆಗಳು ಸಾಲ ನೀಡಲು ಹಣವಿಲ್ಲದೆ ಒದ್ದಾಡುತ್ತಿವೆ. ಬಹಳ ಹಿಂದೊಮ್ಮೆ ಸಾಲ ಮನ್ನಾ ಯೋಜನೆ ಸಾರಿಗೆ ಬಂದಿತ್ತು. ಸಾಲ ಮನ್ನಾ ಯೋಜನೆಯು ಸಂಸ್ಥೆಗಳ ಹಣಕಾಸಿನ ಮೂಲವನ್ನೇ ಬತ್ತಿಸಿ ಬಿಡುತ್ತದೆ.

೯. **ಅನುಭೋಗ ಸಾಲಗಳಿಲ್ಲ:** ಕೃಷಿಯು ಒಂದು ಋತು ಸಂಬಂಧಿ ವೃತ್ತಿಯಾಗಿದೆ. ಆದುದರಿಂದ ರೈತರಿಗೆ ಅನುಭೋಗ ಸಾಲಗಳ ಅಗತ್ಯವಿರುತ್ತವೆ. ಆದರೆ ಸಂಸ್ಥೆಗಳು ಅನುಭೋಗ ಸಾಲಗಳನ್ನು ಕೃಷಿಕರಿಗೆ ನೀಡುತ್ತಿಲ್ಲ. ಹಾಗಾಗಿ ರೈತರು ಖಾಸಗಿ ಸಾಲದತ್ತ ಆಕರ್ಷಿತರಾಗುತ್ತಿದ್ದಾರೆ.

೧೦. **ಗ್ರಾಮೀಣ ಉಳಿತಾಯದ ಕೊರತೆ:** ಗ್ರಾಮೀಣ ಪ್ರದೇಶಗಳಲ್ಲಿ ಉಳಿತಾಯದ ಕೊರತಿಯಿದೆ. ಹಾಗೆಯೇ ಸಂಚಯಿತರಾದ ಉಳಿತಾಯವನ್ನು ಸಂಗ್ರಹಿಸುವವರ ಕೊರತೆಯೂ ಇದೆ. ರೈತರ ಆದಾಯವು ಕಡಿಮೆಯಿರುವುದರಿಂದ ಅವರ ಉಳಿತಾಯ ಸಾಮರ್ಥ್ಯ ಕುಂಠಿತವಾಗಿದೆ. ಪ್ರತಿ ದಿನ ಠೇವಣಿ ಸಂಗ್ರಹಿಸುವ ಪಿಗ್ಮಿ ಏಜೆಂಟರುಗಳು ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯ ಪ್ರವೃತ್ತರಾಗಿರುವುದಿಲ್ಲ. ಗ್ರಾಮೀಣ ಉಳಿತಾಯ ವೃದ್ಧಿಯ ಪ್ರಯತ್ನಗಳು ಕೃಷಿ ಸಾಲ ವ್ಯವಸ್ಥೆಯ ಸಮಸ್ಯೆಗಳಿಗೆ ಪರಿಹಾರಗಳಾಗಿವೆ.

೧೧. **ಅನುತ್ಪಾದಕತೆ:** ಇತರ ವೃತ್ತಿಗಳಿಗೆ ಹೋಲಿಸಿದರೆ ಕೃಷಿಯು ಈಗಲೂ ಅನುತ್ಪಾದಕ ವಾಗಿದೆ. ಆದುದರಿಂದ ವ್ಯಾಪಾರಿಗಳಿಗೆ ಮತ್ತು ಕೈಗಾರಿಕೋದ್ಯಮಿಗಳಿಗೆ ಸಿಗುವ ಮನ್ನಣೆ ರೈತರಿಗೆ ಸಿಗುತ್ತಿಲ್ಲ. ಕೃಷಿಯ ಅನುತ್ಪಾದಕತೆಯಿಂದಾಗಿ ಬ್ಯಾಂಕುಗಳು ಕೃಷಿಸಾಲ ನೀಡಲು ಹಿಂದೇಟು ಹಾಕುತ್ತವೆ.

೧೨. **ಖಾಸಗಿಯವರ ಅಧಿಪತ್ಯ:** ಕೃಷಿಸಾಲ ನೀಡಿಕೆಯಲ್ಲಿ ಸಹಕಾರಿ ಸಂಘ ಮತ್ತು ವಾಣಿಜ್ಯ ಬ್ಯಾಂಕುಗಳಿಗಿಂತ ಹೆಚ್ಚಿನ ಪಾತ್ರವನ್ನು ಖಾಸಗಿ ವ್ಯಕ್ತಿಗಳು ಮತ್ತು ದಲ್ಲಾಳಿಗಳು ವಹಿಸುತ್ತಾರೆ. ಖಾಸಗಿ ಸಾಲದಾತರು ರೈತರನ್ನು ಹಲವು ವಿಧಗಳಲ್ಲಿ ಶೋಷಿಸುತ್ತಾರೆ.

ಕೃಷಿ ಸಾಲ ಸುಧಾರಣಾ ಕ್ರಮಗಳು:

ಕೃಷಿ ಸಾಲ ಸುಧಾರಣೆಗಾಗಿ ಇತ್ತೀಚೆಗೆ ಸರಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಪ್ರಮುಖವಾದವುಗಳು ಇವು:

೧. **ಗ್ರಾಮೀಣ ಬ್ಯಾಂಕುಗಳ ಸುಧಾರಣೆ:** ಗ್ರಾಮೀಣ ಬ್ಯಾಂಕುಗಳ ಹಣಕಾಸು ಪರಿಸ್ಥಿತಿ ಶೋಚನೀಯವಾಗಿದೆ. ಆದುದರಿಂದ ಅವುಗಳನ್ನು ವಾಣಿಜ್ಯ ಬ್ಯಾಂಕುಗಳೊಡನೆ ವಿಲೀನಗೊಳಿಸುವ ಪ್ರಸ್ತಾವನೆಗಳಾಗುತ್ತಿವೆ.

೨. **ಕಡಿಮೆ ದರದ ಸಾಲ:** ಕೃಷಿ ವಲಯಕ್ಕೆ ಶೇ ೬ರ ಬಡ್ಡಿಯ ದರದಲ್ಲಿ ಸಾಲ ನೀಡಬೇಕೆಂಬ ಬೇಡಿಕೆಗೆ ಸರಕಾರಗಳು ಸ್ಪಂಧಿಸುತ್ತವೆ. ಆದರೆ ಬ್ಯಾಂಕು ಠೇವಣಿ ದರಕ್ಕಿಂತ ಕನಿಷ್ಠ ಶೇ ೧.೫ ರಷ್ಟಾದರೂ ಸಾಲದರ ಹೆಚ್ಚಿರಬೇಕೆಂದು ತಜ್ಞರು ಭಾವಿಸುತ್ತಾರೆ.

೩. **ಉನ್ನತ ಉಸ್ತುವಾರಿ ಸಂಸ್ಥೆಯ ರಚನೆ:** ಕೃಷಿ ಸಾಲ ವ್ಯವಸ್ಥೆಯ ಸಮನ್ವಯಕ್ಕೆ ಉನ್ನತ ಉಸ್ತುವಾರಿ ಸಂಸ್ಥೆಯೊಂದರ ಕೊರತೆಯಿದೆ. ಅದಕ್ಕಾಗಿ ನ್ಯಾಶನಲ್ ಕೋ ಓಪರೇಟಿವ್ ಬ್ಯಾಂಕ್ ಆಫ್ ಇಂಡಿಯಾ ಎಂಬ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಖುಸ್ರೋ ಸಮಿತಿ ಹೇಳಿದೆ. ಪೂರ್ವ ಭಾರತದಲ್ಲಿ ಕೃಷಿ ಚಟುವಟಿಕೆ ತೀರಾ ಮಂದಗತಿಯಲ್ಲಿರುವುದರಿಂದ ಬಿಹಾರ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳಗಳ ಪರಿಸ್ಥಿತಿ ಸುಧಾರಿಸಲು ಕೃಷಿ ಮತ್ತು ಗ್ರಾಮೀಣ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ಸ್ಥಾಪಿಸಬೇಕೆಂಬ ಪ್ರಸ್ತಾಪ ಸರಕಾರದ ಮುಂದಿದೆ. ಗ್ರಾಮೀಣ ಮೂಲ ಸವಲತ್ತು ಅಭಿವೃದ್ಧಿ ನಿಧಿಯೊಂದನ್ನು ಈಗಾಗಲೇ ಸ್ಥಾಪಿಸಲಾಗಿದೆ.

೪. **ಸೇವಾ ಕ್ಷೇತ್ರ ಯೋಜನೆ:** ಸೇವಾ ಕ್ಷೇತ್ರ ಯೋಜನೆಯನ್ವಯ ಪ್ರತಿಯೊಂದು ಗ್ರಾಮವನ್ನು ಒಂದು ವಾಣಿಜ್ಯ ಬ್ಯಾಂಕಿಗೆ ವಹಿಸಿಕೊಡಲಾಗಿದೆ. ಇದು ಉಸ್ತುವಾರಿ ಮತ್ತು ನಿರ್ವಹಣೆಯನ್ನು ಸುಲಭಗೊಳಿಸಿದೆ.

೫. **ಪ್ರಬಂಧಕರಿಗೆ ಹೆಚ್ಚಿನ ಅಧಿಕಾರ:** ರೈತರಿಗೆ ಸುಲಭವಾಗಿ ಸಲ ದೊರಕುವಂತಾಗಲು ಬ್ಯಾಂಕು ಪ್ರಬಂಧಕರಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಕೃಷಿಗೆ ಹೆಚ್ಚು ಸಾಲ ನೀಡುವ ಮತ್ತು ಶೀಘ್ರ ಸಾಲ

ಒದಗಿಸುವ ಅಧಿಕಾರ ಬ್ಯಾಂಕು ಪ್ರಬಂಧಕರಿಗಿದೆ. ರೈತರಿಗೆ ನಗದು ಸಾಲ ಸೌಲಭ್ಯ, ಕಿಸಾನ್ ಕ್ರೆಡಿಟ್ಟು ಕಾರ್ಡು ಸೌಲಭ್ಯ ನೀಡಲಾಗಿದೆ.

ಕೃಷಿ ಹಣಕಾಸು ಸೌಲಭ್ಯ:

ಕೃಷಿ ಅಭಿವೃದ್ಧಿಗೆ ಹಣಕಾಸು ಅತ್ಯಂತ ಅಗತ್ಯ. ಸರಕಾರ ಅದಕ್ಕಾಗಿ ಅನೇಕ ಸಂಸ್ಥೆಗಳನ್ನು ಹುಟ್ಟು ಹಾಕಿದೆ. ಖಾಸಗಿ ಮೂಲಗಳಿಂದಲೂ ರೈತರು ಸಾಲವನ್ನು ವಿವಿಧ ಕಾರಣಗಳಿಗಾಗಿ ಪಡೆಯುತ್ತಿದ್ದಾರೆ. "ಭಾರತದ ರೈತ ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲಿ ಸತ್ತು, ಸಾಲವನ್ನೇ ತನ್ನ ಉತ್ತರಾಧಿಕಾರಿಗಳಿಗೆ ಪಿತ್ರಾರ್ಜಿತ ಆಸ್ತಿಯಾಗಿ ನೀಡುತ್ತಾನೆ" ಎಂಬ ಹೇಳಿಕೆಯೊಂದಿದೆ. ಇದು ಗ್ರಾಮೀಣ ಋಣಭಾರವನ್ನೂ, ರೈತರ ವಸ್ತುಸ್ಥಿತಿಯನ್ನು ತಿಳಿಸುತ್ತದೆ. ಕೃಷಿಗೆ ಹಣಕಾಸು ಏಕೆ ಬೇಕು? ಮುಖ್ಯವಾಗಿ ಮೂರು ಉದ್ದೇಶಗಳಿಗಾಗಿ, (ಅ) ಬೇಸಾಯದ ಸರಂಜಾಮುಗಳನ್ನು ಕೊಳ್ಳಲು (ಆ) ನೀರಾವರಿ ಸೌಲಭ್ಯ ನಿರ್ಮಿಸಲು (ಇ) ಕೃಷಿ ಭೂಮಿಯಲ್ಲಿ ಶಾಶ್ವತವಾದ ಬದಲಾವಣೆಗಳನ್ನು ಮಾಡಲು, ಕೃಷಿಯ ಹಿಂದುಳಿಕೆ, ಕೃಷಿ ಉತ್ಪನ್ನಗಳ ಅನಿಶ್ಚಿತತೆ, ಬಡತನ, ಅಜ್ಞಾನ, ಅನಾರೋಗ್ಯ, ಸಾಮಾಜಿಕ ಮತ್ತು ಧಾರ್ಮಿಕ ಮೂಢನಂಬಿಕೆಗಳಿಂದಾಗುವ ದುಂದುವೆಚ್ಚ, ಸಾಲಿಗರ ಮೋಸದ ದುಷ್ಕೃತ್ಯಗಳು, ಮಧ್ಯವರ್ತಿಗಳಿಂದ ಶೋಷಣೆ ಇವುಗಳಿಂದಾಗಿ ರೈತರು ಋಣಭಾರದಲ್ಲಿ ಬೀಳುತ್ತಾರೆ. "ನೇಣು ಹಾಕಿಕೊಳ್ಳುವವರನ್ನು ಹಗ್ಗ ಆಧರಿಸುವಂತೆ, ಸಾಲವು ಭಾರತೀಯ ಕೃಷಿಕರನ್ನು ಆಧರಿಸುತ್ತದೆ" ಎನ್ನುವ ಮಾತು ಪರಿಸ್ಥಿತಿಯ ಗಂಭೀರತೆಯನ್ನು ತಿಳಿಯಪಡಿಸುತ್ತದೆ.

ಕೃಷಿಗೆ ಮೂರು ವಿಧದ ಸಾಲದ ಅಗತ್ಯವಿದೆ.

(೧) ಅಲ್ಪಾವಧಿ ಸಾಲ: ಅವಧಿ ಹನ್ನೆರಡರಿಂದ ಹದಿನೈದು ತಿಂಗಳುಗಳು, ಸಾಗುವಳಿ ವೆಚ್ಚ, ಬಿತ್ತನೆ ಬೀಜ, ಗೊಬ್ಬರ, ಪಶು ಆಹಾರ ಖರೀದಿ, ಆಹಾರ ಖರೀದಿ – ಮುಂತಾದವುಗಳಿಗೆ ಅಲ್ಪಾವಧಿ ಸಾಲ ಅಗತ್ಯ ಬೆಳೆ ಕುಯ್ಲು ಆದ ಕೂಡಲೇ ಸಾಲ ಮರು ಪಾವತಿಸಲಾಗುತ್ತದೆ.

(೨) ದೀರ್ಘಾವಧಿ ಸಾಲ: ಇದರೆ ಹದಿನೈದು ತಿಂಗಳುಗಳಿಂದ ಐದು ವರ್ಷಗಳವರೆಗೆ, ಸಣ್ಣ ಪುಟ್ಟ ಅಭಿವೃದ್ಧಿ ಕಾರ್ಯಗಳಿಗೆ ಈ ಸಾಲ ಬಳಕೆಯಾಗುತ್ತದೆ. ಜಾನುವಾರು, ಖರೀದಿ ಕೃಷಿ ಸಾಮಾಗ್ರಿ, ಖರೀದಿ, ಕೆರೆ–ಬಾವಿ ದುರಸ್ತಿ ಮುಂತಾದವುಗಳಿಗೆ ಮಧ್ಯಾವಧಿ ಸಾಲ ಅಗತ್ಯ.

(೩) ದೀರ್ಘಾವಧಿ ಸಾಲ : ಅವಧಿ ಐದು ವರ್ಷಗಳಿಂದ ಇಪ್ಪತ್ತು ವರ್ಷಗಳು. ಕೃಷಿ ಜಮೀನಿನಲ್ಲಿ ಶಾಶ್ವತ ಸುಧಾರಣೆಗಳನ್ನು ಮಾಡುವುದು ಉದ್ದೇಶ. ಕೆರೆ–ಬಾವಿ ತೋಡುವುದು, ಪಂಪುಸೆಟ್ಟು, ಸ್ಪ್ರಿಂಕ್ಲರ್,

ಟಿಲ್ಲರ್, ಟ್ರ್ಯಾಕ್ಟರ್, ಹಾರ್ವೆಸ್ಟರ್, ಹೊಸ ಜಮೀನು ಖರೀದಿ, ಹಳೆ ಸಾಲ ಸಂದಾಯಕ್ಕೆ ದೀರ್ಘಾವಧಿ ಸಾಲ ಅಗತ್ಯ.

ಗ್ರಾಮೀಣ ಬ್ಯಾಂಕುಗಳ ಸಂಘಟನೆ:

೧೯೭೫ ರಲ್ಲಿ ಏಕಕಾಲದಲ್ಲಿ ಒಟ್ಟು ಐದು ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲಾಯಿತು. ಜೂನ್ ೧೯೮೫ ರಲ್ಲಿ ದೇಶದ ಒಟ್ಟು ಗ್ರಾಮೀಣ ಬ್ಯಾಂಕುಗಳ ಸಂಖ್ಯೆ ೧೯೮೩ ಕ್ಕೇರಿದ್ದು, ಒಟ್ಟು ೧೧,೬೫೨ ಶಾಖೆಗಳಿದ್ದವು, ೧೯೮೮೦೮೯ ರಲ್ಲಿ ೧೯೧ ಗ್ರಾಮೀಣ ಬ್ಯಾಂಕುಗಳಿವೆ.

ಗ್ರಾಮೀಣ ಬ್ಯಾಂಕು ಸಹಕಾರಿ ಬ್ಯಾಂಕುಗಳಿಗೆ ಮತ್ತು ವಾಣಿಜ್ಯ ಬ್ಯಾಂಕುಗಳಿಗೆ ಪೂರಕ ಸಂಸ್ಥೆಯಾಗಿ ಕೆಲಸ ಮಾಡುತ್ತವೆ. ಹಿಂದುಳಿದ ಆದರೆ ಆರ್ಥಿಕಾಭಿವೃದ್ಧಿಯ ಸಾಮರ್ಥ್ಯ ಹೊಂದಿದ ಸ್ಥಳಗಳಲ್ಲಿ ಅವುಗಳನ್ನು ಸ್ಥಾಪಿಸಲಾಗುತ್ತದೆ. ಸರಕಾರ ನಿಗದಿಗೊಳಿಸಿದ ವ್ಯಾಪ್ತಿಯಲ್ಲಿ ಅವು ಕಾರ್ಯವೆಸಗುತ್ತವೆ. ಸಾಮಾನ್ಯವಾಗಿ ಒಂದು ಗ್ರಾಮೀಣ ಬ್ಯಾಂಕಿನ ವ್ಯಾಪ್ತಿಯಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಜಿಲ್ಲೆಗಳು ಬರುತ್ತವೆ. ಸಾಧಾರಣವಾಗಿ ಜಿಲ್ಲಾ ಕೇಂದ್ರಗಳಲ್ಲಿ ಗ್ರಾಮೀಣ ಬ್ಯಾಂಕಿನ ಮುಖ್ಯ ಕಛೇರಿಯಿರುತ್ತದೆ. ಶಾಖೆಗಳು ತಾಲ್ಲೂಕು ಕೇಂದ್ರಗಳಲ್ಲಿ ಅಥವಾ ಬ್ಯಾಂಕುಗಳಿಲ್ಲದ ಹಳ್ಳಿಗಳಲ್ಲಿ ಸ್ಥಾಪಿಸಲ್ಪಡುತ್ತವೆ.

ಗ್ರಾಮೀಣ ಬ್ಯಾಂಕಿನ ಆಡಳಿತವು ಒಂಭತ್ತು ಮಂದಿ ಸದಸ್ಯರುಳ್ಳ ಒಂದು ನಿರ್ದೇಶಕ ಮಂಡಳಿಯ ಕೈಯಲ್ಲಿರುತ್ತದೆ. ಇವರಲ್ಲಿ ಒಬ್ಬ ಅಧ್ಯಕ್ಷನಾದರೆ, ಉಳಿದ ಎಂಟು ಮಂದಿ ಸದಸ್ಯರುಗಳಾಗಿರುತ್ತಾರೆ. ಅಧ್ಯಕ್ಷರನ್ನು ಭಾರತ ಸರಕಾರ ಆಯ್ಕೆ ಮಾಡುತ್ತದೆ. ನಿರ್ದೇಶಕರನ್ನು ಭಾರತ ಸರ್ಕಾರ, ಆಯಾ ರಾಜ್ಯ ಸರಕರ, ಮತ್ತು ಆಶ್ರಯ ನೀಡುವ ವಾಣಿಜ್ಯ ಬ್ಯಾಂಕು, ಆಯ್ಕೆ ಮಾಡುತ್ತವೆ.

ಹಣಕಾಸು ವ್ಯವಸ್ಥೆ: ಗ್ರಾಮೀಣ ಬ್ಯಾಂಕುಗಳು ಯಾವುದಾದರೊಂದು ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕಿನ ಆಶ್ರಯದಲ್ಲಿ ಸ್ಥಾಪಿಸಲ್ಪಡುತ್ತವೆ. ಆದರೆ ಅವುಗಳ ಪಾಲು ಬಂಡವಾಳದಲ್ಲಿ ಶೇಕಡಾ ೫೦ ಕೇಂದ್ರ ಸರಕಾರ, ಶೇಕಡಾ ೧೫ ರಾಜ್ಯ ಸರ್ಕಾರ ಮತ್ತು ಶೇಕಡ ೩೫ ಆಶ್ರಯ ನೀಡುವ ವಾಣಿಜ್ಯ ಬ್ಯಾಂಕು ನೀಡುತ್ತವೆ. ಪ್ರತಿಯೊಂದು ಗ್ರಾಮೀಣ ಬ್ಯಾಂಕಿನ ಅಧಿಕೃತ ಬಂಡವಾಳ ರೂ. ಒಂದು ಕೋಟಿ ಆದರೆ ಸಂದಾಯವಾದ ಬಂಡವಾಳ ರೂ.೨೫ ಲಕ್ಷಗಳಾಗಿತ್ತದೆ.

ಆಶ್ರಯ ನೀಡುವ ವಾಣಿಜ್ಯ ಬ್ಯಾಂಕು ತನ್ನ ಗ್ರಾಮೀಣ ಬ್ಯಾಂಕಿಗೆ ಅನೇಕ ರಿಯಾಯಿತಿಗಳನ್ನು ನೀಡುತ್ತದೆ. ಅದು (೧) ಆಡಳಿತಾತ್ಮಕ ಮತ್ತು ಹಣಕಾಸಿನ ಸಹಾಯ ನೀಡುತ್ತದೆ. (೨) ಸಿಬ್ಬಂದಿ ತರಬೇತಿಯ ವೆಚ್ಚವನ್ನು ಭರಿಸುತ್ತದೆ, (೩) ೮.೫% ಬಡ್ಡಿಯ ದರದಲ್ಲಿ ಸಾಲ ಮತ್ತು ಮುಂಗಡ ನೀಡುತ್ತದೆ (೪) ಪ್ರತಿ ಶಾಖೆಗೆ ರೂ.೧.೭ ಲಕ್ಷ ಸಬ್ಸಿಡಿ ನೀಡುತ್ತದೆ. ಜೊತೆಗೆ ರಿಸರ್ವ್ ಬ್ಯಾಂಕು ನಬಾರ್ಡ್ ಮೂಲಕ ಮರು ಹಣಕಾಸು ಸೌಲಭ್ಯವನ್ನು ಗ್ರಾಮೀಣ ಬ್ಯಾಂಕುಗಳಿಗೆ ನೀಡುತ್ತದೆ.

ಗ್ರಾಮೀಣ ಬ್ಯಾಕುಗಳು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳುತ್ತವೆ. ಸಾಲ ಪಡೆಯುವವನು ಸಾಮಾನ್ಯವಗಿ ತನ್ನ ಸಮಸ್ತ ಆಸ್ತಿಯನ್ನು ಅಡವು ಇಡಬೇಕಾಗುತ್ತದೆ. ಬೇರೆ ಕಡೆಯಿಂದ ಅಧಿಕ ಬಡ್ಡಿಯ ದರದಲ್ಲಿ ಸಾಲ ಪಡೆಯುವುದನ್ನು ತಪ್ಪಿಸಲು ಈ ಕ್ರಮ. ಸಾಲಗಾರರ ಎಲ್ಲಾ ಹಾದ ಅವಶ್ಯಕತೆಗಳನ್ನು ಪೂರೈಸಲು ಬ್ಯಾಂಕು ಪ್ರಯತ್ನಿಸುತ್ತದೆ. ಗ್ರಾಮೀಣ ಬ್ಯಾಂಕುಗಳು ಸಹಕಾರಿ ಬ್ಯಾಂಕುಗಳಷ್ಟೇ ಬಡ್ಡಿಯ ದರ ವಿಧಿಸುತ್ತದೆ. ಸಾಲ ಕೊಡುವ ವಿಧಿ ವಿಧಾನಗಳನ್ನು ಸರಳಗೊಳಿಸಲಾಗಿದೆ. ಸಾಲದ ಅರ್ಜಿಗಳನ್ನೂ ಬ್ಯಾಂಕು ಸಿಬ್ಬಂದಿಗಳೇ ತುಂಬಿ ಕೊಡುತ್ತಾರೆ. ಅಲ್ಲದೆ ಸ್ಥಳೀಯ ಭಾಷೆಯಲ್ಲಿ ಬ್ಯಾಂಕಿನ ವ್ಯವಹಾರದ ನಿರ್ವಹಣೆಯಾಗುತ್ತದೆ. ನಾಬಾರ್ಡ್ ಮತ್ತು ಸರಕಾರ ಗ್ರಾಮೀಣ ಬ್ಯಾಂಕುಗಳ ಅಭಿವೃದ್ಧಿಯಲ್ಲಿ ತೀವ್ರ ಆಸಕ್ತಿ ತಾಳಿವೆ.

ಅಧ್ಯಾಯ–೩

ಅಧ್ಯಯನದ ಕ್ಷೇತ್ರ ಪರಿಚಯ ಮತ್ತು ಕರ್ನಾಟಕ ವಿಕಾಸ ಬ್ಯಾಂಕಿನ ಸ್ಥೂಲ ಪರಿಚಯ:

ಅಧ್ಯಾಯ–೩

ಅಧ್ಯಯನದ ಕ್ಷೇತ್ರ ಪರಿಚಯ ಮತ್ತು ಕರ್ನಾಟಕ ವಿಕಾಸ ಬ್ಯಾಂಕಿನ ಸ್ಥೂಲ ಪರಿಚಯ:

ಕರ್ನಾಟಕ:

ಕರ್ನಾಟಕವು ಭಾರತದ ದಕ್ಷಿಣ ರಾಜ್ಯಗಳಲ್ಲಿ ಒಂದಾಗಿದೆ, ನವೆಂಬರ್ ೧, ೧೯೫೬ ರಂದು ಈಗಿನ ಕರ್ನಾಟಕ ರಾಜ್ಯವನ್ನು ಮೈಸೂರು ರಾಜ್ಯ ಎಂದು ಕರೆಯಲಾಗಿತ್ತು. ಕರ್ನಾಟಕ ಎಂಬ ಪದದ ಬಳಕೆ ಮೊದಲು ಮಹಾಭಾರತದಲ್ಲಿ ಕಂಡು ಬರುತ್ತದೆ. ಕರ್ನಾಟಕ ಎಂಬ ಹೆಸರಿಗೆ ಅನೇಕ ವ್ಯುತ್ಪತ್ತಿಗಳು ಪ್ರತಿಪಾದಿಸಲ್ಪಟ್ಟಿವೆ. ಎರಡಕ್ಕಿಂತ ಹೆಚ್ಚಾಗಿ ಒಪ್ಪಲ್ಪಟ್ಟಿರುವ ವ್ಯುತ್ಪತ್ತಿ ಎಂದರೆ ಕರ್ನಾಟಕ ಕರು + ನಾಡು ಎಂಬುದರಿಂದ ವ್ಯುತ್ಪತ್ತಿಯನ್ನು ಪಡೆದಿದೆ. ಕರುನಾಡು ಎಂದರೆ ಎತ್ತರದ ಪ್ರದೇಶವೆಂದು ಅರ್ಥ ಕೊಡುತ್ತದೆ. ಕರ್ನಾಟಕಂ ಪದದ ಬಳಕೆಯನ್ನು ಮಹಾಭಾರತದಲ್ಲಿ ಕಾಣುತ್ತೇವೆ. ಅದೇ ರೀತಿಯಲ್ಲಿ ಕರ್ನಾಡು, ಕನ್ನಾಟ, ಕರುನಾಡರ್, ಹೀಗೆ ಪದ ಬಳಕೆ ಮಾಡಿರುವುದನ್ನು ಕಾಣುತ್ತೇವೆ. ಕರ್ + ನಾಟ + ಅಗಂ = ಕರ್ನಾಟಕಂ ಅಂದರೆ ಕಪ್ಪು ಮಣ್ಣಿನ ನಾಡು ಎಂದು ಸಂಸ್ಕೃತದಲ್ಲಿ ಅರ್ಥೈಸಲಾಗಿದೆ. ಸುಮಾರು ೨೦೦೦ ವರ್ಷಗಳ ಹಿಂದಿನಿಂದಲೂ ಕರ್ನಾಟಕ ಎಂಬ ಪದ ಬಳಕೆಯಲ್ಲಿರುವುದು ತಿಳಿದುಬರುತ್ತದೆ. ಕನ್ನಡ ಭಾಷೆಯನ್ನು ಮಾತನಾಡುವ ಪ್ರದೇಶವನ್ನು ಒಟ್ಟುಗೂಡಿಸಿ ಕರ್ನಾಟಕ ರಾಜ್ಯವನ್ನಾಗಿ ಗುರುತಿಸಲಾಗುತ್ತದೆ. ಭಾರತದ ದಕ್ಷಿಣ ಕನ್ನಡ ಪ್ರಸ್ಥಭೂಮಿ ಎನಿಸಿರುವ ಕರ್ನಾಟಕ ಅನೇಕ ಶತಮಾನಗಳ ಇತಿಹಾಸವನ್ನು ಹೊಂದಿದೆ. ಕರ್ನಾಟಕವು ತನ್ನದೇ ಆದ ವಿಶಿಷ್ಟ ಸನ್ನಿವೇಶ, ಭೂಸ್ವರೂಪ ವಿವಿಧ ಪ್ರಾಣಿಸಂಕುಲ ಉತ್ಕೃಷ್ಟವಾದ ಮಣ್ಣು ಜಲಸಂಪನ್ಮೂಲ, ಖನಿಜಸಂಪತ್ತು, ಸಾರಿಗೆ ಸಂಪರ್ಕ, ಮಾಧ್ಯಮಗಳು, ರಾಜಕೀಯ, ಸಾಮಾಜಿಕ, ಆರ್ಥಿಕ, ಕೈಗಾರಿಕೆ ಮತ್ತು ಸಾಂಸ್ಕೃತಿಕ ಬೆಳವಣಿಗೆ ಹಾಗೂ ವೃತ್ತಿಪರ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಕರ್ನಾಟಕವು ಪಶ್ಚಿಮದಲ್ಲಿ ಅರಬ್ಬಿ ಸಮುದ್ರದಿಂದ ವಾಯವ್ಯದಲ್ಲಿ ಗೋವಾದಿಂದ, ಉತ್ತರದಲ್ಲಿ ಮಹಾರಾಷ್ಟ್ರದಿಂದ, ಪೂರ್ವದಲ್ಲಿ ಆಂಧ್ರಪ್ರದೇಶದಿಂದ, ಆಗ್ನೇಯದಲ್ಲಿ ತಮಿಳುನಾಡಿನಿಂದ, ನೈರುತ್ಯದಲ್ಲಿ ಕೇರಳದಿಂದ ಸುತ್ತುವರಿಯಲ್ಪಟ್ಟಿದೆ. ಕರ್ನಾಟಕವು ೩೦ ಜಿಲ್ಲೆಗಳಿಂದ ೧೭೫ ತಾಲೂಕುಗಳನ್ನೂ, ೨೨೮ ಪಟ್ಟಣಗಳನ್ನು, ೨೫೪೮೦ ಕ್ಕೂ ಹೆಚ್ಚು ಹಳ್ಳಿಗಳನ್ನು ಒಳಗೊಂಡಿದೆ. ಇದು ಭಾರತದ ಪರ್ಯಾಯ ದ್ವೀಪದ ಪಶ್ಚಿಮದ ಮಧ್ಯ ಭಾಗದಲ್ಲಿದೆ. ಉತ್ತರ ದಕ್ಷಿಣವಾಗಿ ೭೦೦ ಕಿ.ಮೀ.ಗಳನ್ನು ಉದ್ದವಾಗಿಯೂ, ಪೂರ್ವ ಪಶ್ಚಿಮವಾಗಿ ೪೦೦ ಕಿ.ಮೀ. ಅಗಲವಾಗಿದೆ. ೧೯೧೭೯೧ ಚ.ಕಿಮೀ. ಭೂ ವಿಸ್ತೀರ್ಣವನ್ನು ಹೊಂದಿದ್ದು

ದೇಶದಲ್ಲಿ ೮ನೇ ಸ್ಥಾನವನ್ನು ಪಡೆದಿದೆ. ಕರ್ನಾಟಕವು ಸುಮಾರು ೨೫೦ ರಿಂದ ೩೦೦ ಕಿ.ಮೀ. ಉದ್ದದ ಸಮುದ್ರ ತೀರವನ್ನು ಹೊಂದಿದೆ. ಸಮುದ್ರ ಮಟ್ಟಕ್ಕಿಂತ ೨೦೦೦ ಅಡಿಗಳಿಗೂ ಹೆಚ್ಚು ಎತ್ತರವಿದ್ದು, ಬೇರಾವ ರಾಜ್ಯವೂ ಸಮುದ್ರ ಮಟ್ಟದಿಂದ ಇಷ್ಟೊಂದು ಎತ್ತರದಲ್ಲಿಲ್ಲವೆಂಬುದು ವಿಶೇಷವಾಗಿದೆ.

ದೇಶದಲ್ಲಿಯೇ ಕರ್ನಾಟಕವು ಜನಸಂಖ್ಯೆಯಲ್ಲಿ ೯ನೇ ಸ್ಥಾನದಲ್ಲಿದ್ದು ೨೦೧೧ನೇ ಜನಗಣತಿಯ ಪ್ರಕಾರ ೯೧೧೩೦೦೨೦೪ ಜನಸಂಖ್ಯೆಯನ್ನು ಹೊಂದಿದೆ. ಜನಸಾಂದ್ರತೆಯ ಪ್ರತಿ ಚದರ ಕಿ.ಮೀ.ಗೆ ೩೧೯ ಜನರನ್ನು ಒಳಗೊಂಡಿದೆ. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಲಿಂಗಾನುಪಾತ ಪ್ರತಿ ಸಾವಿರ ಪುರುಷರಿಗೆ ೯೭೮ ಸ್ತ್ರೀಯರಿದ್ದಾರೆ. ಕರ್ನಾಟಕದ ಸಾಕ್ಷರತಾ ಪ್ರಮಾಣವು ಶೇಕಡಾ ೭೫.೬೦ ಆಗಿದ್ದು, ಇದರಲ್ಲಿ ಶೇಕಡಾ ೭೫.೬೦, ೮೨.೮೫ ರಷ್ಟು ಪುರುಷರು ಹಾಗೂ ೬೮.೧೩ ರಷ್ಟು ಮಹಿಳೆಯರಾಗಿದ್ದಾರೆ.

ಕರ್ನಾಟಕದ ವ್ಯವಸಾಯವು ಆರ್ಥಿಕತೆಯ ಪ್ರಮುಖ ಬೆನ್ನೆಲುಬಾಗಿದ್ದು, ರಾಜ್ಯದ ಆದಾಯಕ್ಕೆ ಅಮೋಘ ಕೊಡುಗೆಯನ್ನು ನೀಡುತ್ತಿದೆ. ರಾಜ್ಯದ ಒಟ್ಟು ಜನಸಂಖ್ಯೆಯ ಶೇ. ೯೦ ಕ್ಕಿಂತಲೂ ಅಧಿಕ ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಕರ್ನಾಟಕದಲ್ಲಿ ಭತ್ತೆ, ಜೋಳ, ಗೋಧಿ, ರಾಗಿ, ಕಡ್ಲೆ, ತೊಗರಿ, ಕಬ್ಬು, ತೆಂಗು, ಅಡಿಕೆ, ಹತ್ತಿ, ಕಾಫಿ, ಚಹಾ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ.

ದಕ್ಷಿಣಕನ್ನಡ ಜಿಲ್ಲೆ:

ಜಿಲ್ಲೆಯ ಹೆಸರಾದ 'ಕೆನರಾ' ಕನ್ನಡ ಅಥವಾ ಕರ್ನಾಟಕವು ದ್ರಾವಿಡ ಶಬ್ದ ಕೆರ್ (ಕಪ್ಪು) ಮತ್ತು ನಾಡು (ದೇಶ) ದಿಂದ ಉತ್ಪತ್ತಿಯಾಗಿರುವುದಾಗಿದೆ. ಕರ್ನಾಟ ಎಂಬುದು ಕ್ರಮೇಣ ಅಪಭ್ರಂಶವಾಗಿ 'ಕನ್ನಡ' ವಾಯಿತು. ಕೆನರಾ ಎಂಬ ಆಂಗ್ಲ ಹೆಸರು ಪಶ್ಚಿಮ ಕರಾವಳಿಗೆ ಸೀಮಿತವಾಗಿದೆ. ೧೮೯೦ ಕ್ಕಿಂತ ಹಿಂದೆ ದಕ್ಷಿಣ ಕನ್ನಡವು ಮದ್ರಾಸ್ ಪ್ರಾಂತ್ಯದ ಪ್ರೆಸಿಡೆನ್ಸಿ ಆಡಳಿತ ವ್ಯಾಪ್ತಿಯಲ್ಲಿದ್ದ ಕೆನರಾ ಹೆಸರಿನ ದೊಡ್ಡ ಜಿಲ್ಲೆಯ ಒಂದು ಭಾಗವಾಗಿತ್ತು. ೧೮೯೦ ರಲ್ಲಿ ಬ್ರಿಟಿಷರು ಈ ಪ್ರದೇಶವನ್ನು ಸೌತ್ ಕೆನರಾ ಮತ್ತು ನಾರ್ತ್ ಕೆನರಾ ಎಂದು ವಿಂಗಡಿಸಿದರು. ಸೌತ್ ಕೆನರಾವನ್ನು ಮದ್ರಾಸ ಪ್ರಾಂತ್ಯಕ್ಕೆ ಉಳಿಸಿಕೊಂಡು ೧೮೬೨ ರಲ್ಲಿ ನಾರ್ತ್ ಕೆನರಾವನ್ನು ಬಾಂಬೆ ಪ್ರಾಂತ್ಯಕ್ಕೆ ಸೇರಿಸಲಾಯಿತು. (ಸ್ವರೂಪ್, ೧೮೬೪).

೧೯೭೭ ರಲ್ಲಿ 'ಸೌತ್ ಕೆನರಾ' ಹೆಸರನ್ನು ದಕ್ಷಿಣ ಕನ್ನಡವಾಗಿ ಬದಲಾಯಿಸಲಾಯಿತು. ಪ್ರಾರಂಭದಲ್ಲಿ ದ.ಕ. ಜಿಲ್ಲೆಯು ೮ ತಾಲೂಕುಗಳನ್ನು ಉಪವರ್ಗಗಳಾಗಿ ವಿಂಗಡಿಸಲಾಗಿತ್ತು. ಅವುಗಳೆಂದರೆ ಕುಂದಾಪುರ, ಮಂಗಳೂರು ಮತ್ತು ಪುತ್ತೂರು ಜಿಲ್ಲೆಯ ೮ ತಾಲೂಕುಗಳು ಬಂಟ್ವಾಳ, ಬೆಳ್ತಂಗಡಿ, ಕಾರ್ಕಳ, ಕುಂದಾಪುರ, ಮಂಗಳೂರು, ಪುತ್ತೂರು, ಸುಳ್ಯ ಮತ್ತು ಉಡುಪಿ ನಂತರ ೧೯೯೭ ರಲ್ಲಿ ಆಡಳಿತವನ್ನು ಸುಗಮಗೊಳಿಸುವುದಕ್ಕಾಗಿ ಕರ್ನಾಟಕ ಸರಕಾರವು ಅಗಾಧವಾಗಿದ್ದ ದ.ಕ. ಜಿಲ್ಲೆಯನ್ನು ಉಡುಪಿ ಮತ್ತು ಈಗಿನ ದ.ಕ. ಜಿಲ್ಲೆಯಾಗಿ ವಿಭಜಿಸಿತ್ತು (ಮುಕುಂದ ೨೦೦೨) ಜಿಲ್ಲೆಯ ಉತ್ತರ ಭಾಗದಲ್ಲಿರುವ ೩ ತಾಲೂಕುಗಳಾದ ಕುಂದಾಪುರ, ಉಡುಪಿ ಮತ್ತು ಕಾರ್ಕಳ ಈಗ ಉಡುಪಿ ಜಿಲ್ಲೆಯಾಗಿ ಉಳಿದ ೫ ತಾಲೂಕುಗಳು ದ.ಕ. ಜಿಲ್ಲೆಯಾದವು.

ದ.ಕ. ಜಿಲ್ಲೆಯು ಭಾರತದ ಪಶ್ಚಿಮ ಕರಾವಳಿಯಲ್ಲಿ ಮುಂಬೈ ಮತ್ತು ಕನ್ಯಾಕುಮಾರಿಯ ನಡುವೆ ಇರುವಂತಹ ಕರ್ನಾಟಕದ ದಕ್ಷಿಣ ಕರಾವಳಿ ಜಿಲ್ಲೆಯಾಗಿದೆ. ಈ ಜಿಲ್ಲೆಯು ಕರ್ನಾಟಕದ ಕಡಲಕಿನಾರೆಯನ್ನು ಹೊಂದಿದ ಜಿಲ್ಲೆಯಾಗಿದ್ದು ಸುಮಾರು ೬೦ ಕಿ.ಮೀ. ಉದ್ದದ ಅರಬ್ಬೀ ಸುಮುದ್ರದ ಕಡಲ ತೀರವನ್ನು ಹೊಂದಿದೆ. ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶದಲ್ಲಿರುವ ದ.ಕ. ಜಿಲ್ಲೆಯು ಉತ್ತರದಲ್ಲಿ ಉಡುಪಿ ಜಿಲ್ಲೆಯನ್ನು, ಈಶಾನ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಯನ್ನು, ಪೂರ್ವದಲ್ಲಿ ಹಾಸನ, ಆಗ್ನೇಯದಲ್ಲಿ ಕೊಡಗು ಹಾಗೂ ದಕ್ಷಿಣಕ್ಕೆ ಕೇರಳದ ಕಾಸರಗೋಡು ಜಿಲ್ಲೆಗಳಿಂದ ಸುತ್ತುವರಿದಿದೆ. ಅರಬ್ಬೀ ಸಮುದ್ರವು ಪಶ್ಚಿಮದಲ್ಲಿದ್ದು ಇಲ್ಲಿಯ ಮುಖ್ಯ ಪಟ್ಟಣ ಮಂಗಳೂರಾಗಿದೆ. ದ.ಕ. ಜಿಲ್ಲೆಯು ೪೭೭೦ ವ್ಯಾಪ್ತಿಯ ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ಪ್ರತೀ ಚ.ಕಿ.ಮೀ.ಗೆ ೩೯೦ ಜನರನ್ನು ಒಳಗೊಂಡಿದೆ. ದ.ಕ. ಜಿಲ್ಲೆಯಲ್ಲಿ ಒಟ್ಟು ೩೫೪ (ರಶ್ಮಿಕುಮಾರಿ ೨೦೧೦) ದ.ಕ. ಜಿಲ್ಲೆಯು ಸುಮಾರು ೧೭೭ ಕಿ.ಮೀ. ಗಳಷ್ಟು ಉದ್ದವಿದೆ ಮತ್ತು ಇದರ ಅಗಲವು ಅತ್ಯಂತ ಕಿರಿದಾದ ಭಾಗದಲ್ಲಿ ೪೦ ಕಿ.ಮೀ. ಹಾಗೂ ಅತ್ಯಂತ ಹಿರಿದಾದ ಭಾಗದಲ್ಲಿ ೮೦ ಕಿ.ಮೀ ಗಳಷ್ಟು ಇದೆ.

ಕೆಲವು ವರ್ಷಗಳ ಹಿಂದೆ ಇನ್ನೂ ದ.ಕ. ಮತ್ತು ಉಡುಪಿ ಜಿಲ್ಲೆಯನ್ನು ತುಳುನಾಡು ಎಂದೂ ಕರೆಯಲಾಗುತ್ತದೆ. ತುಳು ಭಾಷೆ ಇಲ್ಲಿನ ಪ್ರಮುಖ ಭಾಷೆಯಾಗಿದೆ. ದ.ಕ. ಜಿಲ್ಲೆಯ ಮುಖ್ಯ ಕಸುಬು ಮತ್ತು ಬೆಳೆಗಳು: ಮೀನುಗಾರಿಕೆ, ಭತ್ತ, ತೆಂಗು.

ದಕ್ಷಿಣ ಕನ್ನಡ ರಾಜ್ಯದ ಒಂದು ಕರಾವಳಿ ಜಿಲ್ಲೆಯಾಗಿದೆ. ಈ ಜಿಲ್ಲೆಯ ಕೇಂದ್ರ ಸ್ಥಳ ಹಾಗೂ ಮುಖ್ಯ ನಗರ ಮಂಗಳೂರು ೨೦೧೧ರ ಜನಗಣತಿಯಂತೆ ೨೦೮೩೬೨೫. ೨೦೧೧ರ ಜನಗಣತಿಯು ೨೦೦೧ ರ ಜನಗಣತಿಗಿಂತ ಶೇಕಡಾ ೮೦ ರಷ್ಟು ಹೆಚ್ಚಾಗಿದೆ. ದಕ್ಷಿಣ ಕನ್ನ ಜಿಲ್ಲೆಯಲ್ಲಿ ೫ ತಾಲೂಕುಗಳಿವೆ ಅವು ಮಂಗಳೂರು, ಪುತ್ತೂರು, ಸುಳ್ಯ, ಬಂಟ್ವಾಳ ಹಾಗೂ ಬೆಳ್ತಂಗಡಿ.

<u>ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆ:</u>

ಕೋಷ್ಟಕ ೩.೧ : ಜನಸಂಖ್ಯಾ ವಿವರ ೨೦೦೧ರ ಜನಗಣತಿಯಂತೆ:

ಜಿಲ್ಲೆ	ಪ್ರದೇಶ	ಒಟ್ಟು	ಪುರುಷರು	ಮಹಿಳೆಯರು	ಶೇ. ಪ್ರಮಾಣ
ದ.ಕ.	ಗ್ರಾಮೀಣ	೧೧೬೪೮೨೮	೫೭೪೬೫೭	೫೯೩೭೭೧	೬೧೫೨
	ನಗರ	೭೨೯೩೦೨	೩೬೩೭೭೭	೩೬೫೫೨೫	೩೮೪೩
	ಒಟ್ಟು	೧೮೯೭೭೩೦	೯೩೮೪೩೪	೯೫೯೨೯೬	

ಕೋಷ್ಟಕ ೩.೧ : ಜನಸಂಖ್ಯಾ ವಿವರ ೨೦೧೧ರ ಜನಗಣತಿಯಂತೆ:

ಜಿಲ್ಲೆ	ಪ್ರದೇಶ	ಒಟ್ಟು	ಪುರುಷರು	ಮಹಿಳೆಯರು	ಶೇ. ಪ್ರಮಾಣ
ದ.ಕ.	ಗ್ರಾಮೀಣ	೧೦೯೧೮೮೮	೫೪೧೦೬೫	೫೫೦೮೨೩	೫೨೪೦
	ನಗರ	೯೯೧೭೩೭	೪೯೧೫೧೨	೫೦೦೨೨೫	೪೭೬
	ಒಟ್ಟು	೨೦೮೩೬೨೫	೧೦೩೨೫೭೭	೧೦೫೧೦೪೮	

೨೦೧೧ರ ಜನಗಣತಿಯ ಪ್ರಕಾರ ದ.ಕ. ಜಿಲ್ಲೆಯ ಒಟ್ಟು ಜನಸಂಖ್ಯೆ ೨೦,೮೩,೬೨೪ ಆಗಿದೆ ಅದರಲ್ಲಿ ೧೧೬೮೪೨೮ ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವವರು, ಮತ್ತು ೯೯೧೭೩೭ ರಷ್ಟು ಜನರು ನಗರ ಪ್ರದೇಶದಲ್ಲಿ ವಾಸಿಸುವವರು. ೨೦೦೧ ರ ಜನಗಣತಿ ಪ್ರಕಾರ ದ.ಕ. ಜಿಲ್ಲೆಯ ಗ್ರಾಮೀಣ ಪ್ರದೇಶದ ಜನಸಂಖ್ಯೆಯು ಶೇ.೯೧.೫೩ ಆಗಿದ್ದು ೨೦೧೧ ರಲ್ಲಿ ಶೇ ೫೨.೪೦ ಆಗಿದೆ. ಇದರಿಂದ ನಮಗೆ ತಿಳಿಯುವುದೇನೆಂದರೆ ದ.ಕ. ಜಿಲ್ಲೆಯ ಗ್ರಾಮೀಣ ಪ್ರದೇಶದ ಜನಸಂಖ್ಯೆಯು ದ.ಕ. ಜಿಲ್ಲೆಯ

ಗ್ರಾಮೀಣ ಪ್ರದೇಶದ ಜನಸಂಖ್ಯೆಯು ಶೇಕಡಾ ೯.೧೭ ರಷ್ಟು ಇಳಿಕೆಯಾಗಿದೆ. ಅದೇ ನಗರ ಪ್ರದೇಶದ ಜನಸಂಖ್ಯೆಯು ೯.೧೭ ರಷ್ಟು ಹೆಚ್ಚಳವನ್ನು ಕಂಡಿದೆ. ೨೦೦೧ ಮತ್ತು ೨೦೧೧ ರ ಶೇಕಡಾವಾರು ಜನಗಣತಿಯನ್ನು ಹೋಲಿಕೆ ಮಾಡಿ ನೋಡಿದರೆ ಶೇ ೯.೮೦ ರಷ್ಟು ಜನಸಂಖ್ಯಾ ಹೆಚ್ಚಳವನ್ನು ದ.ಕ. ಜಿಲ್ಲೆಯಲ್ಲಿ ಕಾಣಬಹುದು.

ಮೂಡಬಿದಿರೆ:

ಮೂಡಬಿದಿರೆಯು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಸಣ್ಣ ನಗರವಾಗಿದೆ. ಮೂಡಬಿದಿರೆಯನ್ನು ಮುಡ್‌ಬಿದ್ರಿ, ಮೂಡ್ಬಿದ್ರಿ ಮತ್ತು ಬೆದ್ರ ಎಂಬ ಹೆಸರುಗಳಿಂದಲೂ ಕರೆಯಲಾಗುತ್ತದೆ. ಮೂಡಬಿದಿರೆಯಿಂದ ಮಂಗಳೂರಿಗೆ ಇರುವ ದೂರ ೩೪ ಕಿಲೋಮೀಟರ್‌ಗಳು. ಅಲ್ಲಿ ಹೆಚ್ಚು ಬಿದಿರಿನ ಮರಗಳು ಬೆಳೆದಿದ್ದರಿಂದ ಆ ಪ್ರದೇಶಕ್ಕೆ ಮೂಡಬಿದಿರೆ ಎಂಬ ಹೆಸರು ಬಂತು. ಮೂಡಬಿದಿರೆಯು ಎರಡು ಶಬ್ದಗಳಿಂದ ರಚಿತವಾಗಿದೆ, ಅವು ಮೂಡು+ಬಿದಿರು ಮೂಡು ಎಂದರೆ ಪೂರ್ವ ಮತ್ತು ಬಿದಿರು ಎಂದರೆ ಬಿದಿರಿನ ಮರ. ಈ ಪ್ರದೇಶವನ್ನು ಮೂಡುವೇಣುಪುರ ಎಂದೂ ಕರೆಯಲಾಗುತ್ತಿತ್ತು. ಈ ಪ್ರದೇಶದ ಒಟ್ಟು ವಿಸ್ತೀರ್ಣ ೧೪೪೮ ಮೀಟರುಗಳು.

೨೦೦೧ರ ಜನಗಣತಿಯ ಪ್ರಕಾರ ಮೂಡಬಿದಿರೆಯ ಒಟ್ಟು ಜನಸಂಖ್ಯೆ ೨೫೭೧೦ ಅದರಲ್ಲಿ ಪುರುಷರ ಪ್ರಮಾಣ ಶೇಕಡಾ ೪೮ ಮತ್ತು ಮಹಿಳೆಯರ ಪ್ರಮಾಣ ಶೇಕಡಾ ೫೨. ಈ ಪ್ರದೇಶದ ಸಾಕ್ಷರತಾ ಪ್ರಮಾಣ ೮೮.೫೭ ಅದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ಶೇಕಡಾ ೯೩.೧೩ ಆಗಿದ್ದು ಮಹಿಳೆಯರ ಸಾಕ್ಷರತಾ ಪ್ರಮಾಣ ಶೇಕಡಾ ೮೪.೧೩.

ಮೂಡಬಿದಿರೆಯು ಮೂಲತ: ಎರಡು ಹಳ್ಳಿಗಳನ್ನು ಒಳಗೊಂಡಿದೆ ಅವುಗಳು ಪ್ರಾಂತ್ಯ ಮತ್ತು ಮರ್ನಾಡ್. ಮೂಡಬಿದಿರೆಯನ್ನು ದಕ್ಷಿಣದ ಜೈನಕಾಶಿ ಎಂದೂ ಕರೆಯುತ್ತದೆ.

ಈ ಪ್ರದೇಶದ ಜನರು ತುಳು, ಕೊಂಕಣಿ, ಉರ್ದು ಮತ್ತು ಬ್ಯಾರಿ ಭಾಷೆಯನ್ನು ಮಾತನಾಡುತ್ತಾರೆ. ಪುರಾಣ ಪ್ರಸಿದ್ಧ ದೇವಸ್ಥಾನ ಮಠ ಮಸೀದಿ, ಚರ್ಚ್, ದೇವಸ್ಥಾನಗಳನ್ನು ಹೊಂದಿದೆ.

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು:

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು ೧೨–೦೯–೨೦೦೫ ರಲ್ಲಿ ಸಿಂಡಿಕೇಟ್ ಬ್ಯಾಂಕಿನ ಸಾರಥ್ಯದಲ್ಲಿ ಇತರ ೪ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳೊಂದಿಗೆ ಅಮಾಲ್ಗಮೇಟ್ ಆಗಿ ಸ್ಥಾಪನೆಗೊಂಡ ಬ್ಯಾಂಕು. ಉಳಿದ ೪ ಬ್ಯಾಂಕುಗಳು – ಮಲಪ್ರಭಾ ಗ್ರಾಮೀಣ ಬ್ಯಾಂಕ್, ವರದಾ ಗ್ರಾಮೀಣ ಬ್ಯಾಂಕು, ನೇತ್ರಾವತಿ ಗ್ರಾಮೀಣ ಬ್ಯಾಂಕ್ ಮತ್ತು ಬಿಜಾಪುರ ಗ್ರಾಮೀಣ ಬ್ಯಾಂಕ್. ಗ್ರಾಮೀಣ ಬ್ಯಾಂಕುಗಳ ಮೂಲ ಉದ್ದೇಶವೇ ಕೃಷಿ ವಲಯ ಮತ್ತು ಕೃಷಿಯೇತರ ವಲಯದ ವ್ಯಾಪ್ತಿಯಲ್ಲಿ ಬರುವ ಗುರಿಯಿರಿಸಲ್ಪಟ್ಟ (ಖಿಚಿಡಿರಜಣ) ಗುಂಪಿನ ಅವಶ್ಯಕತೆಗಳನ್ನು ಪೂರೈಸುವುದು.

ಬ್ಯಾಂಕಿನ ಚಟುವಟಿಕೆಯು ೯ ಜಿಲ್ಲೆಗಳಿಗೆ ವಿಸ್ತರಿಸಲ್ಪಟ್ಟಿದೆ. ಅವುಗಳೆಂದರೆ ಬಾಗಲ್‌ಕೋಟೆ, ಬೆಳಗಾಂ, ಬಿಜಾಪುರ, ಧಾರವಾಡ, ಗದಗ್, ಹಾವೇರಿ, ಉಡುಪಿ, ಉತ್ತರಕನ್ನಡ, ದಕ್ಷಿಣ ಕನ್ನಡ. ಬ್ಯಾಂಕು ೫೪೫ ಬ್ರಾಂಚುಗಳನ್ನು ಹೊಂದಿದ್ದು ೪ ಮಿಲಿಯನ್‌ಗಿಂತಲೂ ಹೆಚ್ಚಿನ ಗ್ರಾಹಕರನ್ನು ಹೊಂದಿದೆ.

ಕೃಷಿಕರಿಗೆ, ವ್ಯಾಪಾರಿಗಳಿಗೆ, ಕುಶಲಕರ್ಮಿಗಳು, ವೃತ್ತಿಪರರು, ಸ್ವಉದ್ಯೋಗಿಗಳಿಗೆ, ಕಾಂಟ್ರಾಕ್ಟರ್‌ಗಳಿಗೆ ಮತ್ತು ಸಮಾಜದ ಇತರ ವಲಯಗಳ ಅವಶ್ಯಕತೆಗಳನ್ನು ಪೂರೈಸುವಲ್ಲಿ ಮೊದಲಿಗ ಬ್ಯಾಂಕು ಇದಾಗಿದೆ ಮತ್ತು ಕರ್ನಾಟಕದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲೇ ಅತೀ ದೊಡ್ಡ ಬ್ಯಾಂಕಾಗಿದೆ.

ಬ್ಯಾಂಕು ಶೇಕಡಾ ೧೦೦ ರಷ್ಟು ವ್ಯವಹಾರವನ್ನು ಕಂಪ್ಯೂಟರೀಕರಿಸಿದ್ದು ತನ್ನ ಗ್ರಾಹಕರನ್ನು ದಕ್ಷವಾಗಿ ಮತ್ತು ಪರಿಪೂರ್ಣವಾಗಿ ತೃಪ್ತಿಪಡಿಸಲು ಸುಮಾರು ೨೨೩೮ ಉದ್ಯೋಗಿಗಳನ್ನು ಹೊಂದಿದೆ. ಬ್ಯಾಂಕು ಬಹಳ ಯೋಜನೆಗಳನ್ನು ಮತ್ತು ಸೇವೆಯನ್ನು ಗ್ರಾಹಕರ ನಿರೀಕ್ಷೆಗನುಗುಣವಾಗಿ ಒದಗಿಸುತ್ತಿದೆ.

ಕಸ್ಟಮರ್ಸ್ ಡಿಲೈಟ್ – ಬ್ಯಾಂಕಿನ ಧ್ಯೇಯವಾಕ್ಯ.

ಅಧ್ಯಯನ ಕ್ಷೇತ್ರವಾದ ಮೂಡಬಿದಿರೆಯಲ್ಲಿರುವ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಸ್ಥೂಲ ಪರಿಚಯ.

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು ಮೂಡಬಿದಿರೆಯಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಸಾರಥ್ಯದಲ್ಲಿ ಸ್ಥಾಪಿಸಲ್ಪಟ್ಟಿತು. ಅದರ ಮೂಲ ಉದ್ದೇಶ ಕೃಷಿಕರಿಗೆ, ವ್ಯಾಪಾರಿಗಳಿಗೆ, ಕುಶಲಕರ್ಮಿಗಳು, ವೃತ್ತಿಪರರು, ಸ್ವಉದ್ಯೋಗಿಗಳಿಗೆ, ಕಾಂಟ್ರಾಕ್ಟರ್‌ಗಳು ಮತ್ತು ಸಮಾಜದ ಇತರ ವಲಯಗಳ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುವುದು. ಬ್ಯಾಂಕಿನಲ್ಲಿ ಪ್ರಸ್ತುತ ೧೨ ಜನ ಸಿಬ್ಬಂದಿಗಳಿದ್ದು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದಾರೆ ಮತ್ತು ಗ್ರಾಹಕರಿಗೆ ಹೆಚ್ಚಿನ ಸೇವೆಯನ್ನು ಒದಗಿಸುವಲ್ಲಿ ಸತತ ಪ್ರಯತ್ನವನ್ನು ಪಡುತ್ತಿದ್ದಾರೆ.

ಗ್ರಾಮೀಣ ಸಾಲಕ್ಕಾಗಿ ಭಾರತವು ಬಹು ಸಂಸ್ಥೆಯ ನೀತಿಯನ್ನು ಪಾಲಿಸುತ್ತದೆ. ಇದರ ಪ್ರಕಾರ ೧೯೮೨ ರಿಂದ ಮೂರು ರೀತಿಯ ಸಂಸ್ಥೆಗಳು ಅಂದರೆ ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ಆರ್.ಬಿ.ಐ ಮತ್ತು ನಬಾರ್ಡ್‌ಗಳಿಂದ ಹಣಕಾಸಿನ ಮತ್ತು ಹಣಕಾಸೇತರ ಪ್ರೋತ್ಸಾಹವನ್ನು ನೀಡುತ್ತವೆ.

೨. ಹೂಡಿಕೆಗಳು:

ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ನಬಾರ್ಡ್ ಕಾಲಕಾಲಕ್ಕೆ ನೀಡುವ ನಿರ್ದೇಶನ ಮಾರ್ಗದರ್ಶನಕ್ಕನುಸಾರ ತಮ್ಮ ಹೆಚ್ಚಿನ ನಿಧಿಗಳನ್ನು ಭದ್ರತಾ ಬಾಂಡುಗಳು ಮತ್ತು ಸಾಲಪತ್ರಗಳಲ್ಲಿ ಹೂಡಲು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಪರವಾನಿಗೆ ದೊರೆತಿರುವುದರಿಂದ ಬ್ಯಾಂಕಿನ ಇನ್ನಿತರ ಪ್ರಮುಖ ಸಾಧನಾ ಹೊಣೆಗಾರಿಕೆಗಳಲ್ಲಿನ ನಿಧಿ ಹೂಡಿಕೆಯ ವಿಷಯವೂ ಅತ್ಯಂತ ಮಹತ್ವದ್ದಾಗಿದೆ. ದಿನನಿತ್ಯ ಬರುವ ಮತ್ತು ಹೊರ ಹೋಗುವ ನಿಧಿಯ ಕುರಿತು ಬ್ಯಾಂಕು ಪರಿಪೂರ್ಣವಾಗಿ ಅಭಿವೃದ್ಧಿಪಡಿಸಿದ ಯೋಜನೆಯಿಂದಾಗಿ ಸಮಗ್ರ ಮಾಹಿತಿ ದೊರಕುತ್ತಿದ್ದು ಇದರಿಂದ ಬ್ಯಾಂಕು ಹೂಡಿಕೆಗೆ ಬರಬಹುದಾದ ನಗದು ಹೆಚ್ಚಳವನ್ನು ಸಮಗ್ರವಾಗಿ ವಿವೇಚಿಸಿ ಅಲ್ಪಾವಧಿ ಮತ್ತು ದೀರ್ಘಾವಧಿಯಲ್ಲಿ ಹಣ ಹೂಡಲು ಅಥವಾ ಪುನರ್‌ಧನವನ್ನು ಅವಧಿ ಮುಂಚೆಯೇ ಪಾವತಿಸಲು ಕೂಡ ಅನುಕೂಲವಾಗಿದೆ. ಹೆಚ್ಚುವರಿ ನಿಧಿಯನ್ನು ಹೆಚ್ಚಿನ ಪ್ರತಿಫಲವನ್ನು ನಿರೀಕ್ಷಿಸಿ ಲಾಭದಾಯಕ, ಭದ್ರ

ಹಾಗೂ ಸುರಕ್ಷಿತ ಹೂಡಿಕೆ ಆವರ್ತಗಳಲ್ಲಿ ವಿವೇಕಪೂರ್ಣವಾಗಿ ಹೂಡಲು ಅವಕಾಶವಿರುವಂತೆ ಬ್ಯಾಂಕಿನ ಹೂಡಿಕೆಯನ್ನು ರೂಪಿಸಲಾಗಿದೆ. ವರದಿಯ ವರ್ಷ ಬ್ಯಾಂಕು ಹೂಡಿಕೆಯ ಮೂಲಕ ರೂ.೨೬೪.೮೬ ಕೋಟಿ ರೂ. ಗಳಿಸಲು ಶಕ್ತವಾಗಿದೆ.

ಬ್ಯಾಂಕಿನ ಒಟ್ಟಾರೆ ಹೂಡಿಕೆಯ ಹೂಡಿಕೆ ಠೇವಣಿ ಅನುಪಾತ ೨೭.೧೯% ದರದಲ್ಲಿ ೩೧-೦೩-೨೦೧೩ ರ ಪ್ರಮಾಣ ೧೮೦೬.೨೮ ಕೋಟಿ ರೂ.ಗಳಿಂದ ೨೩೪೬.೩೦ ಕೋಟಿ ರೂ.ಗಳಿಗೆ ವೃದ್ಧಿಸಿತು.

ಹೂಡಿಕೆಗೆ ಸಂಬಂಧಿಸಿದಂತೆ ಉಪಬಂಧವಾಗಿ ಬ್ಯಾಂಕು ೩೧-೦೩-೨೦೧೨ ಕ್ಕೆ ರೂ.೪೮.೦೯ ಕೋಟಿ ಹೊಂದಿತ್ತು. ಅದೇ ೩೧-೦೩-೨೦೧೩ಕ್ಕೆ ರೂ.೧೭.೩೭ ಕೋಟಿ ಹೊಂದಿತ್ತು ಮತ್ತು ೩೧-೦೩-೨೦೧೪ಕ್ಕೆ ರೂ.೨.೭೭ ಕೋಟಿ ಉಪಬಂಧದ ಅಗತ್ಯವಿದೆ. ರೂ.೧೪.೬೦ ಕೋಟಿ ಹೆಚ್ಚುವರಿ ಉಪಬಂಧವನ್ನು ಪ್ರಸಕ್ತ ವರ್ಷದಲ್ಲಿ ವ್ಯತಿರಿಕ್ತಪಡಿಸಿ ಇತರೆ ಆದಾಯ ಎಂದು ಪರಿಗಣಿಸಲಾಯಿತು. ಒಟ್ಟು ಉಪಬಂಧದಲ್ಲಿ ರೂ.೨ ಕೋಟಿಗಳನ್ನು ಉತ್ತರಪ್ರದೇಶದ ಸಹಕಾರಿ ನೂಲುವ ಗಿರಣಿಗಳ ಒಕ್ಕೂಟದ ಬಾಂಡ್‌ಗಳಲ್ಲಿ ಹೂಡಿಕೆ ಮಾಡಲಾಗಿದೆ. ಉಳಿದೆಲ್ಲಾ ಹೂಡಿಕೆಗಳು ಶಿಷ್ಟ ಆಸ್ತಿಗಳಾಗಿದ್ದು ಯಾವುದೇ ಅಪಮೌಲ್ಯಕ್ಕೆ ಉಪಬಂಧ ಕಲ್ಪಿಸುವುದು ಅವಶ್ಯವಿರುವುದಿಲ್ಲ. ಹೆಚ್ಚಿನ ಉಪಬಂಧವನ್ನು ಇತರೆ ಆದಾಯವೆಂದು ಪರಿಗಣಿಸಲಾಗಿದ್ದು ಅದನ್ನು ಹೂಡಿ ಏರಿಳಿತದ ಉಪಬಂಧಕ್ಕೆ ತೆಗೆದುಕೊಳ್ಳುವ ಮೊದಲು ಕಾನೂನು ಸಮ್ಮತ ಉಪಬಂಧಕ್ಕೆ ೨೦% ಖರ್ಚು ಹಾಕಲಾಗಿದೆ (೨.೯೨ ಕೋಟಿ).

- ❖ ೩೧-೦೩-೨೦೧೪ಕ್ಕೆ ಹೂಡಿಕೆ ಏರಿಳಿತಕ್ಕೆ ಸಂಬಂಧಿಸಿ ಬ್ಯಾಂಕು ಹೊಂದಿದ ಮೀಸಲು ನಿಧಿ ೧೧.೬೮ ಕೋಟಿಗಳಾಗಿವೆ.
- ❖ ಭಾರತೀಯ ರಿಸರ್ವ್ ಬ್ಯಾಂಕು ನೀಡಿದ ಮಾರ್ಗದರ್ಶನಗನುಸಾರ ಬ್ಯಾಂಕು ಸರ್ಕಾರಿ ಭದ್ರತೆಗಳ ಮೇಲೆ ನೀಡಿದ ಕಂತನ್ನು ವಿಮೋಚಿಸಿದೆ ಮತ್ತು ಅದನ್ನು "ಪರಿಪಕ್ವತೆಗಾಗಿ ಹೊಂದಲಾಗಿದೆ" ವರ್ಗದಲ್ಲಿ ವರ್ಗೀಕರಿಸಲಾಗಿದೆ. ಭದ್ರತೆಗಳ ಉಳಿದ ಪರಿಪಕ್ವತಾ ಅವಧಿಯನ್ನು ಅನುಸರಿಸಿ ೭೫೩ ಕೋಟಿ ರೂ.ಗಳನ್ನು ಲಾಭ ಹಾನಿ ಖಾತೆಗೆ ಋಣ ವಿಮೋಚನೆಯೆಂದು ಲೆಕ್ಕಿಸಲಾಗಿದೆ.

೩. ಠೇವಣಿಗಳು:

ಗ್ರಾಮೀಣ ಬ್ಯಾಂಕುಗಳು ಕೃಷಿ ಖಾತೆದಾರರೂ ಸೇರಿದಂತೆ ಇನ್ನಿತರ ಮೂಲದಿಂದಲೂ ಠೇವಣಿಗಳನ್ನು ಸಂಗ್ರಹಿಸುತ್ತದೆ. ತನ್ನ ಕಾರ್ಯಚಟುವಟಿಕೆಗಳನ್ನು ಸುಲಲಿತವಾಗಿ ನಡೆಸಲು ಹಾಗೂ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲು ಹಾಗೂ ಆರ್ಥಿಕ ಭದ್ರತೆಗಾಗಿ ಠೇವಣಿಯ ಅಗತ್ಯವಾಗಿರುತ್ತದೆ.

ಬ್ಯಾಂಕಿನ ಒಟ್ಟಾರೆ ಠೇವಣಿಯಲ್ಲಿ ೩೧-೦೩-೨೦೧೪ರ ಸಾಧನೆಯ ಮೇಲೆ ೧೬.೭೨ ಪ್ರತಿಶತ ಪ್ರಗತಿ ದರದಲ್ಲಿ ನಿವ್ವಳ ೧೨೩೬.೧೧ ಕೋಟಿ ರೂ. ಹೆಚ್ಚಳವಾಗಿದ್ದು, ೩೧-೦೩-೨೦೧೪ ಕ್ಕೆ ಬ್ಯಾಂಕು ೮೬೨೮.೯೬ ಕೋಟಿ ರೂ. ಮಟ್ಟವನ್ನು ತಲುಪಿದೆ.

ಅ) ಚಾಖಾ ಉಖಾ ವಿಭಾಗ (ಕಾಸಾ)

ಸಿಬ್ಬಂದಿ ವರ್ಗದ ನಿರಂತರ ಯತ್ನದ ಫಲವಾಗಿ ವರದಿಯ ವರ್ಷ ಕಡಿಮೆ ವೆಚ್ಚದ ಠೇವಣಿಯ ಪ್ರಮಾಣ ೫೧.೭೧ ಪ್ರತಿ ಶತಕ್ಕೆ ಏರಿತು. ಸಾವಧಿ ಠೇವಣಿಗಳ ಹೆಚ್ಚಳ ಹಾಗೆಯೇ ಉಳಿತಾಯ ಖಾತೆಗೆ ನೀಡಬೇಕಾದ ದೈನಂದಿನ ಬಡ್ಡಿ ನಿಯಮದನ್ವಯ ಠೇವಣಿ ಮೇಲಣ ವೆಚ್ಚ ಕಳೆದ ವರ್ಷ ದಾಖಲುಗೊಂಡ ಸಾಧನೆ ೬.೯೭% ನಿಂದ ೭.೧೭% ಗೆ ಏರಿತು. ವರದಿಯ ಸಾಲಿನಲ್ಲಿ ಪ್ರತಿ ಶಾಖೆ ಮತ್ತು ಪ್ರತಿ ಸಿಬ್ಬಂದಿ ಸರಾಸರಿ ಠೇವಣಿಯೂ ಕ್ರಮವಾಗಿ ಕಳೆದ ಸಾಲಿನ ಸಾಧನೆ ೧೪.೧೧ ಕೋಟಿ ರೂ. ಮತ್ತು ೨.೭೯ ಕೋಟಿ ರೂ.ಗಳಿಂದ ೧೫.೮೩ ಕೋಟಿ ರೂ. ಹಾಗೂ ೩.೩೦ ಕೋಟಿಗಳಿಗೆ ಏರಿತು.

ವಿಕಾಸ ಗ್ರಾಮ ಚೇತನ:

ಬ್ಯಾಂಕಿನ ಸ್ಮಾರ್ಟ್ ಕಾರ್ಡಿಗೆ ಈ ಹೆಸರನ್ನು ನೀಡಲಾಗಿದೆ. ಜೈವಿಕ ತಂತ್ರಜ್ಞಾನವನ್ನು ಒಳಗೊಂಡ ಈ ಸ್ಮಾರ್ಟ್ ಕಾರ್ಡ್ ಮೂಲಕ ಗ್ರಾಮಸ್ಥರು ವ್ಯವಹಾರಿಕ ಪ್ರತಿನಿಧಿಗಳೊಂದಿಗೆ ವ್ಯವಹರಿಸುತ್ತಾರೆ. ದಿನಕ್ಕೆ ಮೂರರಂತೆ, ಒಂದು ದಿನದಲ್ಲಿ ೩೦೦೦.೦೦ ರೂ.ಗಳವರೆಗೂ ಜಮಾ ಮಾಡುವ ಅಥವಾ ಖರ್ಚು ಹಾಕುವ ಸೌಲಭ್ಯವಿರುತ್ತದೆ. ಸಮಯದ ನಿರ್ಬಂಧವಿಲ್ಲದಿರುವ ಕಾರಣ ಗ್ರಾಮಸ್ಥರು ಯಾವುದೇ ಸಂದರ್ಭದಲ್ಲಿ ಸಮಯ ಅಥವ ಹಣವನ್ನು ವ್ಯಯಿಸದೆ ಬ್ಯಾಂಕಿಂಗ್ ಸೌಲಭ್ಯ ಪಡೆಯಬಹುದಾಗಿದೆ. ಬ್ಯಾಂಕ್ ಮನೆ ಬಾಗಿಲಿಗೆ ಬಂದಂತಾಗಿರುವುದರಿಂದ, ಉಳಿತಾಯವೂ ಹೆಚ್ಚಿದೆ, ವ್ಯವಹಾರ ಪ್ರತಿನಿಧಿ ನಿತ್ಯದ ವ್ಯವಹಾರವನ್ನು ಮುಗಿಸಿದ ನಂತರ ಆ ಕಡತವನ್ನು ಟಿ.ಎಸ್.ಪಿ. ಯಿಂದ ಸ್ವೀಕರಿಸಿ ಪ್ರಧಾನ ಕಛೇರಿಯಲ್ಲಿ ಅಧಿಕೃತಗೊಳಿಸಿದ ನಂತರವೇ ಹಸ್ತಮುಖೇನ ನಿರ್ವಹಿಸುವ ಯಂತ್ರದಿಂದ ಮಾಡಲ್ಪಟ್ಟ ವ್ಯವಹಾರಗಳು ಗ್ರಾಹಕರ ವೈಯಕ್ತಿಕ ಖಾತೆಯಲ್ಲಿ ಪ್ರತಿಫಲಿಸುತ್ತವೆ. ಸದ್ಯ ವ್ಯವಹಾರವನ್ನು ಆಫ್ ಲೈನ್‌ನಲ್ಲಿ ಮಾಡಲಾಗುತ್ತಿದ್ದು, ಅದನ್ನು ಆನ್‌ಲೈನ್ ಮುಖೇನ ಮಾಡಲು ಎಫ್.ಐ. ಇಂಟರ್‌ಫೇಸ್‌ನ್ನು ಅಳವಡಿಸಲಾಗುತ್ತಿದೆ.

ಮೂಲ ಶಾಖೆಗಳು ಆರ್ಥಿಕ ಸೇರ್ಪಡೆಯಲ್ಲಿ ಬರುವ ಹಳ್ಳಿಗಳನ್ನು ನಿಯಮಿತವಾಗಿ ಭೇಟಿ ಮಾಡಿ ಪ್ರಗತಿಯನ್ನು ಪರಿಶೀಲಿಸಲು ಸಲಹೆ ನೀಡಲಾಗಿದೆ. ಒಂದೇ ದಿನದಲ್ಲಿ ಅಂದರೆ ದಿನಾಂಕ: ೧೬-೦೯-೨೦೧೩ ರಂದು ೩೭೬ ಗ್ರಾಮ ಸಭೆಗಳ ಎಲ್ಲಾ ವಿತ್ತೀಯ ಸೇರ್ಪಡೆ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ವ್ಯವಹಾರ ಪ್ರತಿನಿಧಿಗಳನ್ನು ಆಯಾ ಹಳ್ಳಿಗಳಲ್ಲಿ ಬ್ಯಾಂಕು ಪರಿಚಯಿಸುತ್ತಿದೆ.

ಬೆಳೆ ಸಾಲಗಳು: ಬಡ್ಡಿ ಸಹಾಯಧನದ ಯೋಜನೆಯ ಅನುಷ್ಠಾನ:

ಕೇಂದ್ರ ಸರಕಾರದ ಬಡ್ಡಿ ಸಹಾಯಧನ ಯೋಜನೆಗನುಗುಣವಾಗಿ ಅಲ್ಪಾವಧಿ ಉತ್ಪಾದನಾ ಸಾಲದ ಅಡಿಯಲ್ಲಿ ಸಾಲ ಸೌಲಭ್ಯ ವಿತರಿಸಿದ ಬ್ಯಾಂಕು ಎಲ್ಲಾ ಅರ್ಹ ರೈತರಿಗೆ ಬಡ್ಡಿ ಸಹಾಯಧನದ ಲಾಭವನ್ನು ನೀಡಿದೆ. ೨೦೧೨-೧೩ ಮತ್ತು ೨೦೧೩-೧೪ ನೇ ಸಾಲಿನ ರೂ.೧,೦೦,೦೦೦ ವರೆಗಿನ ಬೆಳೆ ಸಾಲಗಳಿಗೆ ಸಂಬಂಧಿಸಿ ಕರ್ನಾಟಕ ಸರ್ಕಾರದ ೧% ಬಡ್ಡಿ ಸಹಾಯಧನದ ಲಾಭವನ್ನು ಬ್ಯಾಂಕು ಸಕಾಲದಲ್ಲಿ ಸಾಲ ಮರುಪಾವತಿಸಿದ ಅರ್ಹ ರೈತರಿಗೆ ನೀಡಿದೆ. ಇದರೊಂದಿಗೆ ಬ್ಯಾಂಕು ೩ ಲಕ್ಷ ರೂ.ಗಳವರೆಗಿನ ಅಲ್ಪಾವಧಿ ಸಾಲವನ್ನು ಅವಧಿಯೊಳಗಡೆ ತೀರಿಸಿದ ಅರ್ಹ ರೈತರಿಗೆ ಭಾರತ ಸರಕಾರ ಕೊಡಮಾಡುವ ಬಡ್ಡಿ ಸಹಾಯಧನ ೩% ಸೌಲಭ್ಯವನ್ನು ವಿಸ್ತರಿಸಿದೆ. ೨೦೧೨-೧೩ನೇ ಸಾಲಿನಲ್ಲಿ ೧೫೪೦.೯೬ ಕೋಟಿ ರೂ. ಬೆಳೆ ಸಾಲ ವಿತರಿಸಿದ್ದ ಬ್ಯಾಂಕು ೨೦೧೩-೧೪ರ ಅವಧಿಯಲ್ಲಿ ೧೯೫೧.೭೨ ಕೋಟಿ ರೂ. ಸಾಲ ವಿತರಿಸಿದೆ.

ಕೃಷಿ ಸಾಲ:

ಕೃಷಿ ಸಾಲದ ವಿತರಣೆಯನ್ನು ಹೆಚ್ಚಿಸುವ ದಿಶೆಯಲ್ಲಿ ಬ್ಯಾಂಕು ರೈತರಿಗೆ ನಡುವೆ ಹೂಡಿಕೆ ಹಾಗೂ ಉತ್ಪಾದನಾ ಸಾಲವನ್ನು ಇನ್ನಷ್ಟು ಹೆಚ್ಚಿಸಲು ತನ್ನ ಕಾರ್ಯಕ್ಷೇತ್ರದಲ್ಲಿ ವಿಶೇಷ ಅಭಿಯಾನ ಮತ್ತು ಸಾಲ ಶಿಬಿರಗಳನ್ನು ಸಂಘಟಿಸಿತು.

ಸಂತ್ರಸ್ಥರಾಗಿರುವ ರೈತರಿಗೆ ಹೊಸ ಸಾಲವನ್ನು ನೀಡುವ ಬ್ಯಾಂಕು ತನ್ನ ಸಹಾಯ ಹಸ್ತವನ್ನು ಚಾಚಿದೆ. ಕಳೆದ ಸಾಲಿನಲ್ಲಿ ಕೃಷಿ ಚಟುವಟಿಕೆಗೆ ೧೮೧೦.೫೫ ಕೋಟಿ ರೂ. ಸಾಲ ವಿತರಿಸಿದ್ದ ಬ್ಯಾಂಕು ವರದಿಯು ವರ್ಷದಲ್ಲಿ ೨೨೦೮.೮೫ ಕೋಟಿ ಸಾಲ ವಿತರಿಸಿದೆ.

[illegible]

ಕೃಷಿ ಸಾಲ ವಿತರಣೆಯಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಕಾರ್ಯಚಟುವಟಿಕೆಯನ್ನು ಇನ್ನಷ್ಟು ಆಳವಾಗಿ ತಿಳಿಯುವ ಉದ್ದೇಶದಿಂದ ಬ್ಯಾಂಕಿನ ಸಿಬ್ಬಂದಿ ವರ್ಗವನ್ನು ಸಂದರ್ಶನ ಮಾಡಲಾಯಿತು. ಅವರು ನೀಡಿದ ಮಾಹಿತಿಗಳು ಈ ಕೆಳಗಿನಂತಿವೆ.

- ಸಾಲಕ್ಕಾಗಿ ಮನವಿ ಸಲ್ಲಿಸುವ ಪ್ರತಿ ರೈತನಿಗೆ ಅವರ ದಾಖಲೆಗಳನ್ನು ಪರಿಶೀಲಿಸಿ ಕ್ಲಪ್ತ ಸಮಯದಲ್ಲಿ ಸಾಲ ಸೌಲಭ್ಯವನ್ನು ಒದಗಿಸುವುದು.
- ಕೃಷಿಕರಿಗೆ ಹೆಚ್ಚಿನ ವೈಜ್ಞಾನಿಕ ಕ್ರಮವನ್ನು ತಿಳಿಸುವುದು.
- ಕೃಷಿಕರಿಗೆ ಅವಶ್ಯಕವಾದ ಮಾಹಿತಿ ನೀಡುವುದು.
- ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಕೃಷಿ ಸಾಲ ಜತೆಗೆ ಚಿನ್ನದ ಮೇಲೆ ಬಡ್ಡಿ ರಹಿತ ಸಾಲವನ್ನು ನೀಡುವುದು.
- ಬ್ಯಾಂಕು ತನ್ನ ವ್ಯವಹಾರದ ವ್ಯಾಪ್ತಿಯನ್ನು ಹೆಚ್ಚಿಸುವ ಸಲುವಾಗಿ ಶಾಖೆಗಳನ್ನು ಹೆಚ್ಚಿಸುತ್ತಿರುವುದು ಮತ್ತು ಗ್ರಾಹಕರಿಗೆ ಅನುಕೂಲಕರವಾದ ಯೋಜನೆಗಳನ್ನು ತರುತ್ತಿರುವುದು ಗ್ರಾಮೀಣ ಬ್ಯಾಂಕಿನ ಆರೋಗ್ಯಕರವಾದ ಬೆಳವಣಿಗೆಯ ಸಂಕೇತವಾಗಿದೆ.
- ರೈತರಿಗೆ ಹೆಚ್ಚಿನ ವೈಜ್ಞಾನಿಕ ಕ್ರಮವನ್ನು ತಿಳಿದುಕೊಳ್ಳುವಂತೆ ಪ್ರೇರೇಪಣೆಯನ್ನು ನೀಡುವುದು.
- ಪಡೆದ ಸಾಲವನ್ನು ಸದ್ಬಳಕೆ ಮಾಡಲು ಸಲಹೆ ಸೂಚನೆಯನ್ನು ನೀಡುವುದು.
- ವಿವಿಧ ಕೃಷಿ ಚಟುವಟಿಕೆಗಳಿಗೆ ಸುಲಭ ಕಂತಿನೊಡನೆ ಕಡಿಮೆ ಬಡ್ಡಿಯ ಸಾಲ ಸೌಲಭ್ಯ.
- ನೇತ್ರಾವತಿ ಕೃಷಿ ಕಾರ್ಡ್ – ರೈತರಿಗಾಗಿ ಸಾಲ.
- ಸಣ್ಣ ಕೈಗಾರಿಕೆ ಮತ್ತು ಗುಡಿಕೈಗಾರಿಕೆಗಳಿಗೆ ಸಾಲ ಸೌಲಭ್ಯ.
- ವ್ಯಾಪಾರ ಮತ್ತು ಇತರ ಉದ್ಯಮಗಳಿಗೆ ಸಾಲ.
- ವಾಹನ ಖರೀದಿಗೆ ಸಾಲ.
- ಸ್ವಸಹಾಯ ಸಂಘಗಳಿಗೆ ಸಾಲ ಸೌಲಭ್ಯ.
- ಗೃಹ ನಿರ್ಮಾಣ, ನವೀಕರಣಕ್ಕೆ ಸಾಲ.
- ಚಿನ್ನಾಭರಣಗಳ ಮೇಲೆ ಸಾಲ.
- ವೇತನದಾರರಿಗೆ ವಿಶೇಷ ಸಾಲ ಸೌಲಭ್ಯ.
- ಜಮೀನು ಅಡಮಾನ ಸಾಲ.

- ಸಣ್ಣ ಮತ್ತು ಅತೀ ಸಣ್ಣ ರೈತರು ಹಾಗೂ ಕೂಲಿ ಕಾರ್ಮಿಕರಿಗೆ ಆದ್ಯತೆಯ ಮೇಲೆ ಸಾಲ.
- ಸ್ವಂತ ಉದ್ಯೋಗಕ್ಕಾಗಿ ವಿವಿಧ ಸಾಲ ಯೋಜನೆಗಳು.
- ಕೃಷಿಕರಿಗೆ ೪% ಬಡ್ಡಿಯಲ್ಲಿ ಚಿನ್ನದ ಮೇಲೆ ಸಾಲ ನೀಡಲಾಗುವುದು (ಎಕರೆಗೆ ರೂ.೫೦,೦೦೦ ದಂತೆ)

ಬ್ಯಾಂಕಿನ ನಿರ್ವಾಹಕರ ಜತೆ ನಡೆಸಿದ ಸಂದರ್ಶನದಲ್ಲಿ ಈ ಕೆಳಗಿನ ಉಪಯುಕ್ತ ಮಾಹಿತಿ ಲಭ್ಯವಾಗಿದೆ.

- ೩೧-೦೩-೨೦೧೫ ರವರೆಗಿನ ಲೆಕ್ಕಾಚಾರದ ಪ್ರಕಾರ ಬ್ಯಾಂಕು ೧೭೫೦೦ ಕೋಟಿ ವ್ಯವಹಾರವನ್ನು ದಾಟಿದೆ. ಒಟ್ಟು ೯೯೦೦ ಜಮಾ ಖಾತೆಯನ್ನು ಹೊಂದಿದ್ದು ೭೬೦೦ ಕೋಟಿ ಸಾಲ ಸೌಲಭ್ಯವನ್ನು ಒದಗಿಸಿದೆ. ಪ್ರಸ್ತುತ ೧೮೦ ಕೋಟಿ ಲಾಭ ಗಳಿಕೆಯನ್ನು ಹೊಂದಿದ್ದು ಬಾಕಿ ಇರುವ ಸಾಲದ ಮೊತ್ತ ೧೨೦ ಕೋಟಿ ಎಂದು ತಿಳಿದು ಬಂದಿದೆ.
- ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು ಸರಕಾರಿ ಸ್ವಾಮ್ಯದಲ್ಲಿದ್ದು ಸುಮಾರು ಶೇಕಡಾ ೫೦ ರಷ್ಟು ಕೇಂದ್ರ ಸರಕಾರದ ಪಾಲು ಬಂಡವಾಳ, ಶೇಕಡಾ ೩೫ ರಷ್ಟು ಸಿಂಡಿಕೇಟ್ ಬ್ಯಾಂಕಿನ ಪಾಲು ಬಂಡವಾಳ ಮತ್ತು ಶೇಕಡಾ ೧೫ ರಷ್ಟು ರಾಜ್ಯ ಸರಕಾರದ ಪಾಲನ್ನು ಹೊಂದಿದೆ.
- ವ್ಯವಹಾರದ ವ್ಯಾಪ್ತಿಯು ೧೦ ಜಿಲ್ಲೆಗಳಲ್ಲಿ ಹರಡಿದ್ದು ದಕ್ಷಿಣ ಕನ್ನಡ, ಉಡುಪಿ, ಉತ್ತರಕನ್ನಡ, ಧಾರವಾಡ, ಬೆಳಗಾಂ, ಹಾವೇರಿ, ಬಿಜಾಪುರ, ಬಾಗಲಕೋಟೆ ಮುಂತಾದ ಜಿಲ್ಲೆಗಳಲ್ಲಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದೆ.
- ಸುಮಾರು ಶೇಕಡಾ ೯೦ ರಷ್ಟು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕುಗಳು ಹಳ್ಳಿಗಳಲ್ಲೆ ಕಾರ್ಯ ನಿರ್ವಹಿಸುತ್ತಿದ್ದು ಸಣ್ಣ ರೈತರು, ಅತಿಸಣ್ಣ ರೈತರು, ಕುಶಲಕರ್ಮಿಗಳು ಮತ್ತು ವ್ಯಾಪಾರಿಗಳಿಗೆ ಉತ್ಕೃಷ್ಟ ಸೇವೆಯನ್ನು ಒದಗಿಸುತ್ತಿದೆ.
- ಓಇಈಖಿ ಮುಂತಾದ ರಾಷ್ಟ್ರೀಕೃತ ಸೌಲಭ್ಯವನ್ನು ಒದಗಿಸುತ್ತಾ ಗ್ರಾಮೀಣ ಸಾಲಭಾದೆಯನ್ನು ನಿವಾರಿಸುವಲ್ಲಿ ಬ್ಯಾಂಕು ಮುಂಚೂಣಿಯಲ್ಲಿದೆ.
- ಬ್ಯಾಂಕು ರೈತರಿಗಾಗಿ ಬೇರೆ ಬೇರೆ ಯೋಜನೆಗಳನ್ನು ಹಮ್ಮಿಕೊಂಡಿವೆ, ಮುಖ್ಯವಾಗಿ ಹೈನುಗಾರಿಕೆ, ಕೃಷಿ, ಕೃಷಿ ಅಭಿವೃದ್ಧಿ, ಸಣ್ಣ ವ್ಯಾಪಾರ ಇತ್ಯಾದಿಗಳಿಗೆ ಸಾಲ ಸೌಲಭ್ಯವನ್ನು ಒದಗಿಸುತ್ತದೆ.

- ಅನುಷ್ಠಾನಕ್ಕೆ ತರಲ್ಪಟ್ಟ ಯೋಜನೆಗಳು ಇಂತಿವೆ
    - ಪ್ರಧಾನ ಮಂತ್ರಿ ಜನ್‌ಧನ್ ಯೋಜನೆ
    - ವಿಕಾಸ್ ಜನ್‌ಶಕ್ತಿ ಯೋಜನೆ ಪ್ರ.ಮ. ಜೀವನ ಜ್ಯೋತಿ ವಿಮಾ ಯೋಜನೆ, ಪಿಗ್ಮಿ ಹೋಲ್ಡರ್ಸ್‌ಗಾಗಿ ವಿಶೇಷ ಸಾಲ ಯೋಜನೆ ಇತ್ಯಾದಿ.
- ಗ್ರಾಹಕರಿಗೆ ಸಾಲ ಸೌಲಭ್ಯ ಮಾತ್ರವಲ್ಲದೆ ವಿಮಾ ಯೋಜನೆ ನೆಫ್ಟ್, ಆರ್.ಟಿ.ಜಿ. ಸೌಲಭ್ಯ ಆರ್ಥಿಕ ಜ್ಞಾನವನ್ನೂ ಒದಗಿಸುತ್ತದೆ.
- ಬ್ಯಾಂಕು ನೀಡುವ ಗರಿಷ್ಠ ಸಾಲದ ಮೊತ್ತ ೨ ಕೋಟಿ ರೂ.
- ಸಬ್ಸಿಡಿ ಸಾಲವನ್ನು ದೊರಕಿಸಿಕೊಡಲಾಗುತ್ತದೆ.
- ಸಾಲ ಮರುಪಾವತಿಯಾಗದ ಯಾವುದೇ ಪ್ರಕರಣಗಳಿಲ್ಲ.
- ರೈತರು ಈ ಕೆಳಗಿನ ಉದ್ದೇಶಗಳಿಗಾಗಿ ಸಾಲವನ್ನು ಪಡೆಯುತ್ತಾರೆ ಎಂಬುದು ತಿಳಿದು ಬಂದಿದೆ.
- ಬೆಳೆಸಾಲ, ಟಿಲ್ಲರ್ ಖರೀದಿ, ಮನೆ ನಿರ್ಮಾಣ, ತೋಟ, ಭೂ ಅಭಿವೃದ್ಧಿ, ಕೋಳಿ ಸಾಕಣೆ, ಕೃಷಿಯೇತರ, ಹೈನುಗಾರಿಕೆ, ಸಣ್ಣ ವ್ಯಾಪಾರ ಇತ್ಯಾದಿ.
- ಗ್ರಾಹಕರಿಗೆ / ಬ್ಯಾಂಕಿನ ಫಲಾನುಭವಿಗಳಿಗೆ ಬ್ಯಾಂಕಿನ ಸೇವೆಯಿಂದ ತೃಪ್ತಿಯಿದೆ.
- ಕೃಷಿ ಉತ್ಪನ್ನಗಳ ಮಾರುಕಟ್ಟೆಗಾಗಿ ಗ್ರಾಮೀಣ ಗೋದಾಮಿನ ವ್ಯವಸ್ಥೆ ಇದೆ.
- ಸರಿಯಾಗಿ ಸಾಲ ಮರುಪಾವತಿಯಾದಲ್ಲಿ ಅವರನ್ನು ಉತ್ತೇಜಿಸುವ ಸಲುವಾಗಿ ಬಡ್ಡಿ ರಿಯಾಯಿತಿ ಮಾಡಲಾಗುವುದು.
- ಸರಕಾರದಿಂದ ಸಿಗಬೇಕಾದ ಸವಲತ್ತುಗಳಾದ, ಐ.ಆರ್.ಡಿ.ಪಿ, ಪ್ರಧಾನಮಂತ್ರಿ ಉದ್ಯೋಗ ಯೋಜನೆ, ರಾಷ್ಟ್ರೀಯ ಜೀವನೋಪಾಯ ಅಭಿಯಾನ ಇತ್ಯಾದಿಗಳನ್ನು ಬ್ಯಾಂಕಿನ ಮೂಲಕ ಸಾಕಾರಗೊಳಿಸಲಾಗುವುದು.
- ಬ್ಯಾಂಕಿನ ಸಿಬ್ಬಂದಿ ವರ್ಗ ಮತ್ತು ಗ್ರಾಹಕರ ಜತೆಗಿನ ಬಾಂಧವ್ಯವು ಅತ್ಯುತ್ತಮವಾಗಿದೆ ಎಂಬುದೂ ತಿಳಿದು ಬಂದಿದೆ.
- ಸರಿಯಾಗಿ ಸಾಲ ಮರುಪಾವತಿಯಾದಲ್ಲಿ ಅವರನ್ನು ಉತ್ತೇಜಿಸುವ ಸಲುವಾಗಿ ಬಡ್ಡಿ ರಿಯಾಯಿತಿ ಮಾಡಲಾಗುವುದು.

ಕಿಸಾನ್ ಕ್ರೆಡಿಟ್:

ನಬಾರ್ಡ್‌ನ ಮಾರ್ಗದರ್ಶನದಂತೆ ೫ ವರ್ಷಗಳ ಸಂಚಿತ ಕಾಲಾವಧಿ ಮಿತಿಯು ಪರಿಷ್ಕೃತ ಕಿಸಾನ್ ಕಾರ್ಡ್ ಯೋಜನೆಯನ್ನು ವರದಿಯ ವರ್ಷದಲ್ಲಿ ಬ್ಯಾಂಕು ಅನುಷ್ಠಾನಗೊಳಿಸಿದೆ. ಈ ಯೋಜನೆಯಡಿ ಎಲ್ಲ ಅರ್ಹ ರೈತರನ್ನು ತರಲಾಗಿದೆ.

ವರದಿಯ ವರ್ಷದಲ್ಲಿ ಬ್ಯಾಂಕು ೨೦೦೦೦೦ ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಿಸುವ ಗುರಿಗೆ ಪ್ರತಿಯಾಗಿ ೧೭೧೬೭೧ (ಹೊಸ ಮತ್ತು ನವೀಕರಣ ಸೇರಿ) ಕಿಸಾನ್ ಕ್ರೆಡಿಟ್ ಕಾರ್ಡ್ ನೀಡುವ ಮೂಲಕ ರೂ.೧೯೫೧.೬೨ ಕೋಟಿಗಳನ್ನು ವಿತರಿಸಿತು.

ಅಧ್ಯಾಯ ೪

ಕೃಷಿ ಕಾರ್ಮಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಪಾತ್ರ- (ಕ್ಷೇತ್ರಕಾರ್ಯಾಧಾರಿತ ಮಾಹಿತಿ ವಿಶ್ಲೇಷಣೆ)

ಅಧ್ಯಾಯ ೪

ಕೃಷಿ ಕಾರ್ಮಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಪಾತ್ರ – ಕ್ಷೇತ್ರಕಾರ್ಯಾಧಾರಿತ ಮಾಹಿತಿ ವಿಶ್ಲೇಷಣೆ

ಪೀಠಿಕೆ: ಕರ್ನಾಟಕ ರಾಜ್ಯದಲ್ಲಿ ಕಳೆದ ೫೦ ವರ್ಷಗಳಲ್ಲಿ ತನ್ನ ವ್ಯಾಪಕತೆಯಲ್ಲಿ ಹಾಗೂ ಸಾಧನೆಯಲ್ಲಿ ಬ್ಯಾಂಕಿಂಗ್ ಕ್ಷೇತ್ರವು ಗಣನೀಯ ಪ್ರಗತಿ ಸಾಧಿಸಿದೆ. ನವ ಕರ್ನಾಟಕದ ಉದಯಕಾಲದಲ್ಲಿ ಬಹಳ ಚಿಕ್ಕದಾಗಿದ್ದ ಬ್ಯಾಂಕಿಂಗ್ ಕ್ಷೇತ್ರವು ಬೃಹದಾಕಾರದಲ್ಲಿ ಬೆಳೆದಿದೆ. ದೇಶದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನವನ್ನೂ ಗಳಿಸಿದೆ. ರಾಜ್ಯದ ಆರ್ಥಿಕ ಪ್ರಗತಿಗೆ ತನ್ನ ಕೊಡುಗೆಯನ್ನೂ ನೀಡುತ್ತಾ ಹಲವಾರು ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಅದು ಸಫಲವಾಗಿದೆ. ರಾಜ್ಯದಲ್ಲಿ ಹುಟ್ಟಿ ಬೆಳೆದ ಬ್ಯಾಂಕುಗಳ ಪಾತ್ರವೂ ಇದರಲ್ಲಿ ಮಹತ್ವದ್ದಾಗಿದೆ. ಮೂಡಬಿದಿರೆಯ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಹೇಗೆ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದರ ವಿಸ್ತ್ರತವಾದ ಅಧ್ಯಯನ ಮಾಡಲು ಮತ್ತು ಬ್ಯಾಂಕಿನ ಕೃಷಿ ಚಟುವಟಿಕೆಯ ಮೇಲೆ ಯಾವ ರೀತಿ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ವಿಶ್ಲೇಷಿಸುವ ಉದ್ದೇಶದಿಂದ ಈ ಅಧ್ಯಯನವನ್ನು ನಡೆಸಲಾಗಿದೆ ಮತ್ತು ಈ ಅಧ್ಯಯನದಲ್ಲಿ ಬ್ಯಾಂಕಿನ ಫಲಾನುಭವಿಗಳ ಮಾಹಿತಿಯನ್ನು ಪ್ರಶ್ನಾವಳಿಗಳ ಮೂಲಕ ಕ್ಷೇತ್ರ ಕಾರ್ಯದ ಮುಖಾಂತರ ಸಂಗ್ರಹಿಸಿ ಅವುಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಲಾಗಿದೆ.

ಗ್ರಾಮೀಣ ಬ್ಯಾಂಕುಗಳು ಸಣ್ಣ ಕೃಷಿಕರಿಗೆ, ಅತಿ ಸಣ್ಣ ಕೃಷಿಕರಿಗೆ ಮತ್ತು ದೊಡ್ಡ ಕೃಷಿಕರಿಗೆ, ಕುಶಲಕರ್ಮಿಗಳಿಗೆ, ಸ್ವಉದ್ಯೋಗಿಗಳಿಗೆ ತಮ್ಮ ವ್ಯವಹಾರವನ್ನು ಸುಲಲಿತವಾಗಿ ನಡೆಸುವಲ್ಲಿ ನೆರವಾಗುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಖಾತೆದಾರರು ಬ್ಯಾಂಕಿನ ಸೇವೆಯಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಗ್ರಾಮೀಣ ಬ್ಯಾಂಕುಗಳು ಗ್ರಾಮೀಣ ಜನರ, ರೈತರ ಸಾರ್ವಜನಿಕರ ಆರ್ಥಿಕ ಮತ್ತು ಸಾಮಾಜಿಕ ಏಳಿಗೆಗಾಗಿ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಸತತ ಪ್ರಯತ್ನ ಪಡುತ್ತಿವೆ.

ಅಧ್ಯಯನಕ್ಕೆ ಆಯ್ದುಕೊಂಡ ಬ್ಯಾಂಕು ಒಂದೇ ಆಗಿದ್ದರೂ ಅದರ ವ್ಯವಹಾರದ ವ್ಯಾಪ್ತಿ. ಕೃಷಿಕ ಖಾತೆದಾರರ ಸಂಖ್ಯೆಯಲ್ಲಿನ ಪ್ರಬಲತೆ, ಚಟುವಟಿಕೆಗಳನ್ನು ಗಮನಿಸಿದಾಗ ಈ ಬ್ಯಾಂಕಿನಲ್ಲಿ ಸಾಕಷ್ಟು

ಅಧ್ಯಯನಕ್ಕೆ ಯೋಗ್ಯವಾದ ವಿಷಯಗಳಿರುವುದು ಸ್ಪಷ್ಟವಾಗುತ್ತದೆ. ಕ್ಷೇತ್ರಕಾರ್ಯದಲ್ಲಿ ಶೇ. ೫೦ ರಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಿ ಪ್ರಶ್ನಾವಳಿಗಳ ಮೂಲಕ ಅವರ ಸಂದರ್ಶನವನ್ನು ನಡೆಸಿ ಸಂಗ್ರಹಿಸಲಾಗಿದೆ.

ಮೂಡಬಿದಿರೆಯ ಕೆಲವು ಪ್ರದೇಶಕ್ಕೆ ಸೇರಿದ ಕರ್ನಾಟಕ ವಿಕಾಸ ಬ್ಯಾಂಕಿನ ಫಲಾನುಭವಿ ಕೃಷಿಕರಿಂದ ಪ್ರಶ್ನಾವಳಿ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಯಿತು. ಗ್ರಾಮೀಣ ಕೃಷಿಕರ ಸಮಸ್ಯೆ ಮತ್ತು ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಲಾದ ಮಾಹಿತಿಯನ್ನು ಈ ಕೆಳಗಿನ ಶೀರ್ಷಿಕೆಗಳಡಿಯಲ್ಲಿ ಕೋಷ್ಟಕಗಳ ಮೂಲಕ ಅಭಿವ್ಯಕ್ತಗೊಳಿಸಲಾಗಿದೆ.

೧. ಕೌಟುಂಬಿಕ ಹಿನ್ನೆಲೆ – ಪ್ರಶ್ನಾವಳಿಗೆ ಉತ್ತರಿಸಿದವರ ವಯಸ್ಸು, ಉದ್ಯೋಗ, ವಾರ್ಷಿಕ ಆದಾಯ ಹಾಗೂ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಸಾಮಾನ್ಯ ವಿವರಗಳನ್ನೊಳಗೊಂಡ ಕೋಷ್ಟಕಗಳು.
೨. ಫಲಾನುಭವಿಗಳ ಕೃಷಿ ವೃತ್ತಿಗೆ ಸಂಬಂಧಿಸಿದ ವಿವರಗಳು.
೩. ಫಲಾನುಭವಿಗಳು ಅವಲಂಬಿಸಿದ ಬ್ಯಾಂಕಿನ ಸೇವೆಯ ವಿವರಗಳು.
೪. ಇತರ ವಿವರಗಳು.

೪.೧ ಫಲಾನುಭವಿಗಳ / ಪ್ರಶ್ನಾವಳಿಗೆ ಉತ್ತರಿಸಿದವರಿಗೆ ಸಂಬಂಧಿಸಿದ ಪ್ರಾಥಮಿಕ ಮಾಹಿತಿ:

ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಪ್ರಶ್ನಾವಳಿಗೆ ಉತ್ತರಿಸಿದವರ ಕೌಟುಂಬಿಕ ಹಿನ್ನೆಲೆಯ ಪರಿಚಯ ಮಾಡಿಕೊಳ್ಳುವ ಪರಿಪಾಠವಿದೆ ಅದರಂತೆ ಪ್ರಸ್ತುತ ಅಧ್ಯಯನದಲ್ಲಿಯೂ ಪ್ರಶ್ನಾವಳಿಯ ಆರಂಭದಲ್ಲಿ ಮಾಹಿತಿದಾರರ ಹೆಸರು, ವಯಸ್ಸು, ಉದ್ಯೋಗ, ವಾಸಸ್ಥಳ, ಆದಾಯ ಹಾಗೂ ವಿದ್ಯಾರ್ಹತೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾತ್ರವಲ್ಲದೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮೂಡಬಿದಿರೆ ಪರಿಸರದ ಕೆಲವು ಗ್ರಾಮಗಳಲ್ಲಿ ಆಯ್ದ ೧೦೦ ಮಂದಿ ರೈತರಿಗೆ ಪ್ರಶ್ನಾವಳಿಯನ್ನು ಹಂಚಲಾಯಿತು. ಅವರಲ್ಲಿ ಕೇವಲ ೫೦ ಮಂದಿ ಮಾತ್ರ ಉತ್ತರಿಸಿದ್ದಾರೆ. ಈ ಪ್ರಶ್ನಾವಳಿಗೆ ಉತ್ತರಿಸಿದವರಲ್ಲಿ ಈ ಕೆಳಕಂಡ ವಯೋಮಾನ ಗುಂಪುಗಳಿಗೆ ಸೇರಿದವರಿದ್ದಾರೆ.

೪.೧.೧. ಮಾಹಿತಿದಾರರ ವಯೋಮಾನದ ವರ್ಗೀಕರಣ:

ಕ್ರಮ ಸಂಖ್ಯೆ	ವಯೋಮಾನ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	೧೮ ರಿಂದ ೨೫	೪	೮
೨	೨೬ ರಿಂದ ೩೫	೧೦	೨೦
೩	೨೬ ರಿಂದ ೫೦	೨೮	೫೬
೪	೫೫ ರಿಂದ ಮೇಲ್ಪಟ್ಟು	೮	೧೬
	ಒಟ್ಟು:	**೫೦**	**೧೦೦**

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೧.೧ ರ ಪ್ರಕಾರ ಒಟ್ಟು ೫೦ ಫಲಾನುಭವಿಗಳಲ್ಲಿ ಶೇಕಡಾ ೮ ರಷ್ಟು ಫಲಾನುಭವಿಗಳು ೧೮ ವರ್ಷದಿಂದ ೨೫ ವರ್ಷ ವಯಸ್ಸಿನವರಾಗಿರುತ್ತಾರೆ. ಹಾಗೆಯೇ ಶೇಕಡಾ ೨೦ ರಷ್ಟು ಜನರು ೨೬ ರಿಂದ ೩೫ ವರ್ಷ ವಯಸ್ಸಿನವರಾಗಿರುತ್ತಾರೆ. ಶೇಕಡಾ ೫೬ ರಷ್ಟು ಜನರು ೩೬ ರಿಂದ ೫೦ ವರ್ಷ ವಯಸ್ಸಿನವರಾಗಿರುತ್ತಾರೆ ಮತ್ತು ಶೇಕಡಾ ೧೬ ರಷ್ಟು ಜನರು ೫೦ ವರ್ಷಕ್ಕಿಂತ ಮೇಲ್ಪಟ್ಟವರಾಗಿರುತ್ತಾರೆ ಎಂದು ತಿಳಿಸುತ್ತದೆ. ೩೬ ರಿಂದ ೫೦ ಒಳಗಿನ ವಯಸ್ಸಿನವರೇ ಹೆಚ್ಚಿನ ಸಂಖ್ಯೆಯಲ್ಲಿ ಕ್ಷೇತ್ರಕಾರ್ಯದಲ್ಲಿ ಸಂಶೋಧಕರಿಗೆ ಲಭಿಸಿರುತ್ತಾರೆ.

ಈ ಪ್ರದೇಶದಲ್ಲಿ ಕೃಷಿಯನ್ನು ಮುಂದುವರಿಸಿಕೊಂಡು ಹೋಗುವವರ ಸಂಖ್ಯೆ ಕಡಿಮೆಯಾಗಿರುವುದು ಮಾತ್ರವಲ್ಲದ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಯುವಕರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ಹೆಚ್ಚಿನ ಕೃಷಿಕರು ೩೬ ರಿಂದ ೫೦ ಪ್ರಾಯದವರು ಅವರು ಕೃಷಿ ಕ್ಷೇತ್ರದ ಬದಲಾವಣೆಗಳಿಗೆ ಒಗ್ಗಿಕೊಂಡು ವೃತ್ತಿಯನ್ನೇ ಜೀವಾಳವಾಗಿಸಿಕೊಂಡವರು ಎಂಬುದೂ ಇಲ್ಲಿ ಗಮನಾರ್ಹವಾದುದು. ಅದಕ್ಕೆ ಮುಖ್ಯ ಕಾರಣ ಸೃಷ್ಟಿಯು ಒಂದು ಅನಿಶ್ಚಿತತೆಯಿಂದ ಕೂಡಿರುವ ವೃತ್ತಿಯಾಗಿದ್ದು ಕೆಲವೊಮ್ಮೆ ಆದಾಯವೂ ನಿರೀಕ್ಷಿತ ರೀತಿಯಲ್ಲಿ ಇರುವುದಿಲ್ಲ. ಮಾತ್ರವಲ್ಲದೆ ಇತ್ತೀಚಿನ ವಿದ್ಯಮಾನದಲ್ಲಿ ಯುವ ಜನತೆ ಹೆಚ್ಚಾಗಿ ನಗರಪ್ರದೇಶಕ್ಕೆ ಆಕರ್ಷಿತರಾಗಿ ಅಲ್ಲಿ ತಮ್ಮ ವೃತ್ತಿಯನ್ನು

ಕಂಡುಕೊಳ್ಳಬಯಸುತ್ತಾರೆ. ಒಟ್ಟಿನಲ್ಲಿ ಯುವ ಪೀಳಿಗೆಗೆ ಕೃಷಿಯಲ್ಲಿ ಆಸಕ್ತಿ ಕಡಿಮೆಯಾಗಿದೆ ಎನ್ನಬಹುದು. ಅದೆಷ್ಟೊ ಹೊಸ ತಂತ್ರಜ್ಞಾನ, ತರಭೇತಿ, ಕೃಷಿ ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದಿದ್ದರೂ ಯುವ ಜನತೆ ಅದರತ್ತ ಆಕರ್ಷಿತರಾಗಿರುವ ಪ್ರಮಾಣ ಕಡಿಮೆ ಎಂಬುದನ್ನು ಗಮನಿಸಬಹುದು.

ಹೆಚ್ಚಿನ ಕೃಷಿಕರು ೩೬-೫೦ ವರ್ಷ ಪ್ರಾಯದವರು, ಅವರು ಕೃಷಿ ಕ್ಷೇತ್ರದ ಬದಲಾವಣೆಗಳಿಗೆ ಒಗ್ಗಿಕೊಂಡು ವ್ಲತ್ತಿಯನ್ನೇ ಜೀವಾಳವಾಗಿಸಿಕೊಂಡವರು ಎನ್ನಬಹುದು. ಇದಕ್ಕೆ ಕಾರಣ ಅವರಿಗೆ ಬೇರೆ ಯಾವುದೇ ಅವಕಾಶಗಳಿಲ್ಲದಿರುವುದು ಮತ್ತು ಅವರಲ್ಲಿ ಕೃಷಿಯ ಕಡೆಗೆ ಇರುವ ಒಲವು ಎಂಬುದು ತಿಳಿದು ಬರುತ್ತದೆ. ಕೃಷಿಯಲ್ಲಿ ಇನ್ನೂ ನೂತನ ಅಭಿವೃದ್ಧಿಯನ್ನು ಕೈಗೊಳ್ಳುವುದರಿಂದ ಮತ್ತು ಎಲ್ಲರಲ್ಲೂ ಅದರ ಮಹತ್ವದ ಅರಿವು ಮೂಡಿಸಿ ಕೃಷಿಯನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾಗಿರುವುದು ಅನಿವಾರ್ಯವಾಗಿದೆ. ಈ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಿವಿಧ ಮಟ್ಟದ ವಿದ್ಯಾರ್ಹತೆಯನ್ನು ಹೊಂದಿರುವ ಮಾಹಿತಿದಾರರನ್ನು ಅಧ್ಯಯನಕ್ಕೊಳಪಡಿಸಿರುವುದು ಕೋಷ್ಟಕ ೪.೧.೨ ರಲ್ಲಿ ಅಭಿವ್ಯಕ್ತಗೊಂಡಿದೆ.

೪.೧.೨ ಸದಸ್ಯರ ವಿದ್ಯಾರ್ಹತೆಯ ವಿವರ

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಅಶಿಕ್ಷಿತರು	೭	೧೪
೨	ಪ್ರಾಥಮಿಕ ಶಿಕ್ಷಣ	೧೦	೨೦
೩	ಪ್ರೌಢಶಿಕ್ಷಣ	೨೮	೫೬
೪	ಪದವಿ	೫	೧೦
೫	ಸ್ನಾತಕೋತ್ತರ ಪದವಿ	-	-
೫	ಸ್ನಾತಕೋತ್ತರ ಪದವಿ	-	-
	ಒಟ್ಟು:	**೫೦**	**೧೦೦**

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಈ ಮೇಲಿನ ದತ್ತಾಂಶದ ಪ್ರಕಾರ ಮಾಹಿತಿದಾರರಲ್ಲಿ ಶೇ೧೬ ರಷ್ಟು ಜನರು ಅಶಿಕ್ಷಿತರಾಗಿರುವರು. ಶೇ.೨೦ ರಷ್ಟು ಜನರು ಪ್ರಾಥಮಿಕ ಶಿಕ್ಷಣ ಪಡೆದವರಾಗಿರುತ್ತಾರೆ. ಶೇ ೫೬ ರಷ್ಟು ಜನರು ಪ್ರೌಢ ಶಿಕ್ಷಣ ಪಡೆದವರಾಗಿರುತ್ತಾರೆ ಹಾಗೂ ಕೇವಲ ಶೇಕಡಾ ೧೦ ರಷ್ಟು ಜನರು ಪದವೀಧರರಾಗಿದ್ದಾರೆ.

ಕೆಲವು ಸಂದರ್ಭಗಳಲ್ಲಿ ಮನುಷ್ಯನ ಮನೋಪ್ರವೃತ್ತಿಯನ್ನು ಅಳೆಯಲು ವಿದ್ಯಾರ್ಹತೆಯು ಮಾನದಂಡವಾಗಿರುವುದು. ಅವರು ಯಾವ ರೀತಿ ತಮಗೆ ದೊರಕಿದ ಹಣಕಾಸನ್ನು ಸದ್ಬಳಕೆ ಮಾಡುವರು ಎಂಬುದಕ್ಕೆ ಅವರಲ್ಲಿ ಇರುವ ಜ್ಞಾನವು ಪೂರಕವಾಗುವುದು ಮತ್ತು ಮನುಷ್ಯನನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಸಬಲರಾಗಿಸಲು ಶಿಕ್ಷಣವು ಬಹಳ ಮುಖ್ಯ. ಮಾಹಿತಿದಾರರಲ್ಲಿ ಶೇಕಡಾ ೫೬ ರಷ್ಟು ಜನರು ಪೌಢಶಿಕ್ಷಣ ಪಡೆದವರಾಗಿದ್ದು ಸಮಾಜದ ಆಗುಹೋಗುಗಳನ್ನು ಅರಿತಿರುವವರು ಎಂಬುದು ಅವರ ಮಾತುಕತೆಯಲ್ಲಿ ತಿಳಿದು ಬರುತ್ತದೆ.

ಮೇಲಿನ ಅಂಕಿ ಅಂಶಗಳಿಂದ ಕೃಷಿಕ ಮಾಹಿತಿದಾರರಲ್ಲಿ ಶಿಕ್ಷಿತರ ಪ್ರಮಾಣ ಕಡಿಮೆ ಇರುವುದು ಕಂಡು ಬರುತ್ತದೆ. ಅದಕ್ಕೆ ಕಾರಣ ಕೃಷಿಯನ್ನು ವೃತ್ತಿಯಾಗಿಸಿಕೊಳ್ಳಲು ಮತ್ತು ಅದರಲ್ಲಿ ಪರಿಣತಿಯನ್ನು ಪಡೆಯಲು ಅಕ್ಷರ ಜ್ಞಾನದ ಅವಶ್ಯಕತೆಯಿಲ್ಲ ಎಂಬ ಧೋರಣೆ ಹಾಗೂ ಗ್ರಾಮೀಣ ಪ್ರದೇಶದ ಜನರಲ್ಲಿ ಬಡತನ ಪಿಡುಗೂ ಒಂದು ಬಹುದೊಡ್ಡ ಕಾರಣವಾಗಿದೆ. ಕೆಲವರ ಅಭಿಪ್ರಾಯದ ಪ್ರಕಾರ ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗದಿರಲು ಕಾರಣ ಕಾರ್ಮಿಕರ ಅಭಾವ. ಸರಿಯಾದ ಸಮಯಕ್ಕೆ ಕೆಲಸಕ್ಕೆ ಜನರು ಸಿಗದೇ ಇರುವುದು ನಮ್ಮ ಮನೆಯ ಮಕ್ಕಳು ಶಿಕ್ಷಣ ವಂಚಿತರಾಗಿ ಕೃಷಿಯಲ್ಲಿ ತೊಡಗಿಕೊಳ್ಳಲು ಪರೋಕ್ಷ ಕಾರಣವಾಗಿದೆ. ಅದರಲ್ಲೂ ಪದವಿ ಮತ್ತು ಸ್ನಾತಕೋತ್ತರ ಪದವೀಧರರ ಪ್ರಮಾಣ ಕಡಿಮೆಯಾಗಿರುವುದಕ್ಕೆ ಕಾರಣ ಅವರು ತಮ್ಮ ಉನ್ನತ ವಿದ್ಯಾಭ್ಯಾಸದ ನಂತರ ಅದಕ್ಕೆ ಸೂಕ್ತವಾಗುವ ಉನ್ನತ ಹುದ್ದೆಯನ್ನು ಹುಡುಕೊಳ್ಳುವುದಾಗಿದೆ. ಅವರು ಕೃಷಿಯಲ್ಲಿ ತೊಡಗಿಕೊಳ್ಳಲು ಹಿಂಜರಿಯುತ್ತಾರೆ, ಅದಕ್ಕೆ ಇತರ ಕಾರಣಗಳನ್ನು ಪಟ್ಟಿ ಮಾಡಬಹುದು. ಉದಾಹರಣೆಗೆ, ಅವರಲ್ಲಿರುವ ಹಿಂಜರಿಕೆ, ಸ್ಥಾನಮಾನದ ಬಗ್ಗೆ ಒಲವು, ಅನಿಶ್ಚಿತ ಆದಾಯ ಇತ್ಯಾದಿ.

೪.೧.೩: ವೈವಾಹಿಕ ಸ್ಥಾನಮಾನದ ವಿವರ:

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ವಿವಾಹಿತರು	೪೨	೮೪
೨	ಅವಿವಾಹಿತರು	೮	೧೬
	ಒಟ್ಟು:	೫೦	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮೇಲಿನ ದತ್ತಾಂಶದ ಪ್ರಕಾರ ಮಾಹಿತಿದಾರರಲ್ಲಿ ಶೇಕಡಾ ೮೬ ರಷ್ಟು ಜನರು ವಿವಾಹಿತರು ಹಾಗೂ ಶೇಕಡಾ ೧೪ ರಷ್ಟು ಜನರು ಮಾಹಿತಿದಾರರು ಅವಿವಾಹಿತರಾಗಿದ್ದಾರೆ. ವಿವಾಹಿತರು ಹೆಚ್ಚಿನ ಸಂಖ್ಯೆಯಲ್ಲಿ ಬ್ಯಾಂಕಿನ ಫಲಾನುಭವಿಗಳಾಗಿದ್ದಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಿವಾಹಿತರು ಹೆಚ್ಚಿನ ಪ್ರಮಾಣದಲ್ಲಿ ಸಂದರ್ಶನಕ್ಕೆ ಒಳಗಾಗಿದ್ದಾರೆ.

೪.೧.೪ : ಕೌಟುಂಬಿಕ ಹಿನ್ನೆಲೆ:

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಅವಿಭಕ್ತ	೩೦	೬೦
೨	ವಿಭಕ್ತ	೨೦	೪೦
	ಒಟ್ಟು:	೫೦	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಈ ಮೇಲಿನ ದತ್ತಾಂಶದ ಪ್ರಕರ ದತ್ತಾಂಶದ ಪ್ರಕಾರ ಶೇಕಡಾ ೬೦ ರಷ್ಟು ಜನರು ಅವಿಭಕ್ತ ಕುಟುಂಬಕ್ಕೆ ಸೇರಿದವರೂ ಶೇಕಡಾ ೪೦ ರಷ್ಟು ಜನರು ವಿಭಕ್ತ ಕುಟುಂಬಕ್ಕೆ ಸೇರಿದವರೂ ಆಗಿದ್ದಾರೆ. ಇದನ್ನು ಗಮನಿಸಿದಾಗ ಕೃಷಿಕ ಕುಟುಂಬಗಳಲ್ಲಿ ಸ್ವಲ್ಪ ಮಟ್ಟಿಗೆ ಅವಿಭಕ್ತ ಕುಟುಂಬದ ಪ್ರಮಾಣ ಹೆಚ್ಚಿದೆಯೆಂದು ತಿಳಿದುಬರುತ್ತದೆ. ಆದರೂ ಮುಂದೆ ವಿಭಕ್ತ ಕುಟುಂಬಗಳ ಸಂಖ್ಯೆಯೂ ಹೆಚ್ಚುವುದರಲ್ಲಿ

ಸಂಶಯವಿಲ್ಲ. ಅದರ ಪ್ರಮಾಣ ಏರಿಕೆಯಾದಂತೆ ದೊಡ್ಡ ಭೂ ಹಿಡುವಳಿಗಳು ಪಾಲಾಗಿ ಸಣ್ಣ ಹಿಡುವಳಿಯಾಗಿ ಪರಿವರ್ತನೆಯಾಗುವುದೂ ಖಚಿತ. ವಿಭಕ್ತ ಕುಟುಂಬಗಳ ಸಂಖ್ಯೆಯಲ್ಲಿ ಹೆಚ್ಚಳವಾಗಲು ಮುಖ್ಯ ಕಾರಣ ಜನರು ಕೂಡಿ ಬಾಳಲು ಇಷ್ಟಪಡದೇ ಇರುವುದು ಮತ್ತು ಸ್ವತಂತ್ರವಾಗಿ ಬದುಕಲು ಇಷ್ಟಪಡುವುದಾಗಿದೆ.

೪.೧.೫: ವಾರ್ಷಿಕ ಆದಾಯದ ವಿವರ:

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	೧೦೦೦೦–೬೦೦೦೦೦	೮	೧೬
೨	೬೦೦೦೦–೧೦೦೦೦೦	೧೪	೨೮
೩	೧೦೦೦೦೦–೨೦೦೦೦೦	೧೬	೩೨
೪	೨೦೦೦೦೦ ಕ್ಕಿಂತ ಹೆಚ್ಚು	೧೨	೨೪
	ಒಟ್ಟು:	**೫೦**	**೧೦೦**

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಈ ಮೇಲಿನ ದತ್ತಾಂಶದ ಪ್ರಕಾರ, ಮಾಹಿತಿದಾರರಲ್ಲಿ ಶೇಕಡಾ ೧೬ ರಷ್ಟು ಜನರು ರೂ.೧೦೦೦೦ ದಿಂದ ರೂ.೬೦೦೦೦೦ ಆದಾಯವನ್ನು ಪಡೆಯುವವರಾಗಿದ್ದು, ಶೇಕಡಾ ೨೮ ರಷ್ಟು ಜನರು ರೂ.೬೦೦೦೦ ದಿಂದ ೧೦೦೦೦೦ ಆದಾಯವನ್ನು ಪಡೆಯುವವರಾಗಿದ್ದು ಶೇಕಡಾ ೩೨ ರಷ್ಟು ಜನರು ರೂ.೧೦೦೦೦೦ ದಿಂದ ೨೦೦೦೦೦ ದ ಆದಾಯವನ್ನು ಪಡೆಯುವವರಾಗಿದ್ದು ಹಾಗೂ ಶೇಕಡಾ ೨೪ ರಷ್ಟು ಜನರು ೨ ಲಕ್ಷಕ್ಕಿಂತ ಹೆಚ್ಚಿನ ಆದಾಯವನ್ನು ಪಡೆಯುವವರಾಗಿದ್ದಾರೆ.

೪.೧.೬ : ಮಾಹಿತಿದಾರರ ಲಿಂಗದ ವಿವರ:

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಪುರುಷರು	೩೯	೭೮
೨	ಮಹಿಳೆಯರು	೧೧	೨೨
	ಒಟ್ಟು:	**೫೦**	**೧೦೦**

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮೇಲಿನ ದತ್ತಾಂಶದ ಪ್ರಕಾರ ಶೇಕಡಾ ೭೮ ರಷ್ಟು ಮಾಹಿತಿದಾರರು ಪುರುಷರು ಹಾಗೂ ಶೇಕಡಾ ೨೨ ರಷ್ಟು ಮಾಹಿತಿದಾರರು ಮಹಿಳೆಯರಾಗಿರುವರು ಈ ಅಂಕಿ ಅಂಶಗಳನ್ನು ಗಮನಿಸಿದಾಗ, ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಹಣಕಾಸಿನ ಅವಶ್ಯಕತೆಗಾಗಿ ಬ್ಯಾಂಕನ್ನು ಅವಲಂಬಿತರಾಗಿರುವುದು ಸ್ಪಷ್ಟವಾಗುತ್ತದೆ. ಕೃಷಿ ಕೆಲಸಕ್ಕೆ ಹೆಚ್ಚಿನ ಸಾಮರ್ಥ್ಯ, ಕಠಿಣ ಪರಿಶ್ರಮದ ಅಗತ್ಯವಿದೆ. ಆದುದರಿಂದ ಪುರುಷರು, ಮಹಿಳೆಯರಿಗೆ ಹೋಲಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕೆಲಸದಲ್ಲಿ ತೊಡಗಿಕೊಳ್ಳುವರು ಎಂಬುದು ತಿಳಿದು ಬರುತ್ತದೆ. ಮಾತ್ರವಲ್ಲದೆ ಮಹಿಳೆಯರಿಗೆ ಮನೆವಾರ್ತೆ ನೋಡಿಕೊಳ್ಳುವುದು, ಮಕ್ಕಳ ಲಾಲನೆ ಪಾಲನೆ ಇತ್ಯಾದಿ ಕೆಲಸಗಳಿರುವುದರಿಂದ ಕೃಷಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅಸಮರ್ಥರಾಗುತ್ತಾರೆ ಎಂಬುದು ತಿಳಿದು ಬರುತ್ತದೆ.

೧.೨ ಕೃಷಿಕ ಫಲಾನುಭವಿಗಳ ವೃತ್ತಿಗೆ ಸಂಬಂಧಿಸಿದ ವಿವರಗಳು:

ಮಾಹಿತಿದಾರರು ಕೈಗೆತ್ತಿಕೊಂಡ ಮೂಲಕಸಬು ಕೃಷಿಗೆ ಸಂಬಂಧಿಸಿದ ವಿವರವನ್ನು ಪಡೆಯುವುದರಿಂದ ಅವರ ಈಗಿನ ಸ್ಥಿತಿಗತಿ, ಜಮೀನಿನ ವಿವರ, ಬೇಸಾಯ ಕ್ರಮ ಇತ್ಯಾದಿ ಪ್ರಮುಖ ವಿಷಯಗಳ ಕುರಿತು ಮಾಹಿತಿ ಸಂಗ್ರಹಿಸಬಹುದಾಗಿದೆ.

ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸುವಾಗ ಮಾಹಿತಿದಾರರಲ್ಲಿ ನಿಮ್ಮ ಹಿಡುವಳಿಯ ಮೂಲ ಯಾವುದು? ಎಂದು ಕೇಳಿದಾಗ ೫೦ ಮಂದಿಯಲ್ಲಿ ಶೇಕಡಾ ೫೨ ರಷ್ಟು ಮಾಹಿತಿದಾರರು ತಮ್ಮ ಭೂಹಿಡುವಳಿಯನ್ನು ಪಿತ್ರಾರ್ಜಿತವಾಗಿ ಪಡೆದವರಾಗಿದ್ದಾರೆ, ಶೇಕಡ ೨೪ ರಷ್ಟು ಮಾಹಿತಿದಾರರು

ಭೂಮಸೂದೆಯಿಂದ ದೊರೆತಿರುವುದಾಗಿ ಉತ್ತರಿಸಿದ್ದಾರೆ, ಶೇಕಡಾ ೧೬ ರಷ್ಟು ಮಾಹಿತಿದಾರರು ಕ್ರಯಕ್ಕೆ ಪಡೆದುಕೊಂಡವರಾಗಿದ್ದಾರೆ, ಮತ್ತು ಶೇಕಡಾ ೮ ರಷ್ಟು ಮಾಹಿತಿದಾರರು ಇತರೆ ಮೂಲದಿಂದ ಪಡೆದಿದ್ದಾರೆ. ಕೋಷ್ಟಕ ೪.೨.೧ ಮೇಲೆ ನೀಡಿದ ಮಾಹಿತಿಯನ್ನು ಪುಷ್ಟೀಕರಿಸುತ್ತದೆ.

೪.೨.೧ : ಹಿಡುವಳಿಯ ಮೂಲದ ವಿವರ:

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಪಿತ್ರಾರ್ಜಿತ	೨೬	೫೨
೨	ಭೂಮಸೂದೆಯಿಂದ ದೊರೆತದ್ದು	೧೨	೨೪
೩	ಕ್ರಯಕ್ಕೆ ಪಡೆದುಕೊಂಡದ್ದು	೮	೧೬
೪	ಇತರೆ	೪	೮
	ಒಟ್ಟು:	**೫೦**	**೧೦೦**

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮೇಲಿನ ದತ್ತಾಂಶದ ಪ್ರಕಾರ ಶೇಕಡಾ ೫೨ ರಷ್ಟು ಜನರು ತಮ್ಮ ಕೃಷಿಭೂಮಿಯನ್ನು ಪಿತ್ರಾರ್ಜಿತವಾಗಿ ಪಡೆದಿದ್ದಾರೆ ಅಂದರೆ ತಮ್ಮ ಹಿರಿಯರಿಂದ ಕಾನೂನು ಪ್ರಕಾರವಾಗಿ ಆ ಭೂಮಿಗೆ ಹಕ್ಕಿನ ವಾರಸುದಾರರಾಗಿ ಭೂಮಿಯನ್ನು ಪಡೆದವರು.

ಶೇಕಡಾ ೨೪ ರಷ್ಟು ಜನರು ಭೂ ಮಸೂದೆಯಿಂದ ದೊರೆತುದಾಗಿ ತಿಳಿಸಿದ್ದಾರೆ. ೧೯೫೪ ರಲ್ಲಿ ಭೂಮಸೂದೆ ಕಾಯಿದೆಯು ಜಾರಿಗೆ ಬಂತು ಅದರ ಪ್ರಕಾರ ಉಳುವವನೇ ಹೊಲದೊಡೆಯ ಎಂಬ ನಿಯಮ ಅನ್ವಯವಾಯಿತು. ಆ ನಿಯಮದಂತೆ ಕೆಲವು ಕೃಷಿಕರು ತಾವು ಉಳುತ್ತಿದ್ದ ಹೊಲವನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಳ್ಳುವಂತಾಯಿತು. ಶೇಕಡಾ ೧೬ ರಷ್ಟು ಜನರು ಮಾತ್ರ ತಮ್ಮ ಭೂಹಿಡುವಳಿಯನ್ನು ಕ್ರಯಕ್ಕೆ ಪಡೆದುಕೊಂಡುದುದಾಗಿ ತಿಳಿಸಿದ್ದಾರೆ. ಭೂಮಿಯ ದರ ದಿನೇ ಹೆಚ್ಚುತ್ತಿದ್ದು ಬಡ ರೈತರು ಕೊಂಡುಕೊಳ್ಳುವಲ್ಲಿ ಅಸಮರ್ಥರಾಗುತ್ತಿದ್ದಾರೆ. ಹಾಗೂ ಶೇಕಡ ೮ ರಷ್ಟು ಜನರು ತಮ್ಮ ಭೂಮಿಯನ್ನು ಇತರ ಮೂಲದಿಂದ ಪಡೆದುದಾಗಿ ತಿಳಿಸಿದ್ದಾರೆ.

ಮಾಹಿತಿದಾರರ ಹಿಡುವಳಿ ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ ಸಣ್ಣ ಹಿಡುವಳಿ, ಮಧ್ಯಮ ಹಿಡುವಳಿ ಮತ್ತು ದೊಡ್ಡ ಹಿಡುವಳಿ ಹೀಗೆ ಹಿಡುವಳಿಯ ಗಾತ್ರವನ್ನು ವರ್ಗೀಕರಿಸಬಹುದು.

೪.೨.೨ : ಮಾಹಿತಿದಾರರ ಜಮೀನಿನ ವಿವರ:

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಸಣ್ಣ ಹಿಡುವಳಿದಾರ	೮	೧೬
೨	ಮಧ್ಯಮ ಹಿಡುವಳಿದಾರ	೩೩	೬೬
೩	ದೊಡ್ಡ ಹಿಡುವಳಿದಾರ	೯	೧೮
	ಒಟ್ಟು:	**೫೦**	**೧೦೦**

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮೇಲಿನ ದತ್ತಾಂಶದ ಪ್ರಕಾರ ಮಾಹಿತಿದಾರರಲ್ಲಿ ಶೇಕಡಾ ೧೬ ರಷ್ಟು ಜನರು ಸಣ್ಣ ಹಿಡುವಳಿದಾರರು. ಶೇಕಡಾ ೧೬ ರಷ್ಟು ಜನರು ೬೬ ರಷ್ಟು ಜನರು ಮಧ್ಯದ ಹಿಡುವಳಿದಾರರು ಹಾಗೂ ಶೇಕಡಾ ೧೮ರಷ್ಟು ಜನರು ದೊಡ್ಡ ಹಿಡುವಳಿದಾರರಾಗಿರುವರು. ಸಣ್ಣ ಹಿಡುವಳಿದಾರಲು ಎಂದರೆ, ಒಂದು ಎಕ್ರೆಗಿಂತ ಕಡಿಮೆ ಕೃಷಿ ಭೂಮಿಯನ್ನು ಹೊಂದಿದವರು, ಮಧ್ಯಮ ಹಿಡುವಳಿದಾರರು ಎಂದರೆ, ಒಂದರಿಂದ ೨ ಎಕ್ರೆ ಕೃಷಿ ಭೂಮಿಯನ್ನು ಹೊಂದಿದವರು, ಅದೇ ರೀತಿ ದೊಡ್ಡ ಹಿಡುವಳಿದಾರರು ಎಂದರೆ ಎರಡು ಎಕ್ರೆಗಿಂತ ಹೆಚ್ಚಿನ ಕೃಷಿ ಭೂಮಿಯನ್ನು ಹೊಂದಿದವರು.

ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ದೊಡ್ಡ ಹಿಡುವಳಿದಾರರ ಪ್ರಮಾಣವು ಕಡಿಮೆಯಾಗಿದೆ. ಇದಕ್ಕೆ ಮುಖ್ಯ ಕಾರಣ ಹೆಚ್ಚುತ್ತಿರುವ ವಿಭಕ್ತ ಕುಟುಂಬಗಳ ಸಂಖ್ಯೆ ಎಂಬುದೂ ಗಮನಾರ್ಹವಾದುದು. ಅವಿಭಕ್ತ ಕುಟುಂಬಗಳು ನಾಶ ಆಗುತ್ತಿದ್ದ ಹಾಗೆ ಈ ಕುಟುಂಬದ ಆಸ್ತಿ–ಪಾಸ್ತಿ ಪಾಲಾಗಿ ಹೋಗುವುದು ಸಾಮಾನ್ಯ. ಹೀಗೆ "ಪಾಲು" ಎಂಬ ಹೆಸರಲ್ಲಿ ಕೃಷಿ ಭೂಮಿಯು ಛಿದ್ರಗೊಳ್ಳುವುದು ವಿಪರ್ಯಾಸ. ಮಧ್ಯಮ ಹಡುವಳಿಯನ್ನು ಹೊಂದಿದ ಜನರು ಹೆಚ್ಚಿನ ಪ್ರಮಾಣದಲ್ಲಿ

ಬ್ಯಾಂಕಿನ ಫಲಾನುಭವಿಗಳಾಗಿದ್ದಾರೆ. ಸಣ್ಣ ಹಿಡುವಳಿದಾರರೂ ಹಣಕಾಸಿನ ಅವಶ್ಯಕತೆಗಾಗಿ ಬ್ಯಾಂಕಿನ ಫಲಾನುಭವಿಗಳಾಗಿದ್ದಾರೆ.

೪.೩.೩: ಮಾಹಿತಿದಾರರು ಬೆಳೆಯುವ ಬೆಳೆ ವಿಧಾನದ ವಿವರ

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಆಹಾರ ಬೆಳೆ	೧೬	೩೨
೨	ವಾಣಿಜ್ಯ ಬೆಳೆ	೧೦	೨೦
೩	ಆಹಾರ ಮತ್ತುವಾಣಿಜ್ಯ ಬೆಳೆ	೨೪	೪೮
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮೇಲಿನ ದತ್ತಾಂಶದ ಪ್ರಕಾರ ಮಾಹಿತಿದಾರರಲ್ಲಿ ಶೇಕಡಾ ೪೨ರಷ್ಟು ಜನರು ಆಹಾರ ಬೆಳೆಯನ್ನು ಬೆಳಯುವವರಾಗಿದ್ದು ಶೇಕಡಾ ೫೮ರಷ್ಟು ಜನರು ವಾಣಿಜ್ಯ ಬೆಳೆಯನ್ನು ಬೆಳೆಯುವವರಾಗಿರುವರು ಹಾಗೂ ವಾಣಿಜ್ಯ ಬೆಳೆ ಎರಡನ್ನೂ ಬೆಳೆಯುವವರಾಗಿರುವರು. ಮೇಲಿನ ಅಂಕಿಅಂಶಗಳ ಪ್ರಕಾರ ಇತ್ತೀಚಿನ ಬೆಳವಣಿಗೆಯನ್ನು ಗಮನಿಸಿದಾಗ ಹೆಚ್ಚಿನ ಕೃಷಿಕರು ವಾಣಿಜ್ಯ ಬೆಳೆಯನ್ನು ಬೆಳೆಯುವತ್ತ ಹೆಚ್ಚು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಅದಕ್ಕೆ ಮುಖ್ಯ ಕಾರಣ, ವಾಣಿಜ್ಯ ಬೆಳೆಯಿಂದ ಹೆಚ್ಚಿನ ಉತ್ಪಾದನೆ ಹಾಗೂ ಲಾಭವನ್ನು ಪಡೆಯಬಹುದು ಎಂಬ ಧೋರಣೆ.

೪.೨.೪: ಮಾಹಿತದಾರರು ಪಡೆದ ಸಾಲದ ವಿವರ:

ಫಲಾನುಭವಿಗಳು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನಿಂದ ಪಡೆದುಕೊಂಡ ಸಾಲದ ಪ್ರಕಾರ ಬ್ಯಾಂಕು ಸದಸ್ಯರಿಗೆ ಮೂರು ಪ್ರಕಾರದ ಸಾಲವನ್ನು ಒದಗಿಸುತ್ತದೆ. ಉದಾ: ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ ಮತ್ತು ದೀರ್ಘಾವಧಿ ಸಾಲ

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಅಲ್ಪಾವಧಿ	೧೬	೩೨
೨	ಮಧ್ಯಾವಧಿ ಸಾಲ	೩೦	೬೦
೩	ದೀರ್ಘಾವಧಿ ಸಾಲ	೪	೮
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಮೇಲಿನ ಕೋಷ್ಟಕದ ಪ್ರಕಾರ ಒಟ್ಟು ಮಾಹಿತಿದಾರರಲ್ಲಿ ಶೇಕಡಾ ೩೨ರಷ್ಟು ಜನರು ಅಲ್ಪಾವಧಿ ಶೇಕಡಾ ೬೦ರಷ್ಟು ಜನರು ದೀರ್ಘಾವಧಿ ಸಾಲವನ್ನು ಪಡೆದಿರುವುದು ಕಂಡು ಬರುತ್ತದೆ.

ಮೇಲಿನ ಅಂಕಿ ಅಂಶಗಳಿಂದ (ಅಲ್ಪಾವಧಿ) ಮಧ್ಯಾವಧಿ ಸಾಲವನ್ನು ಪಡೆದವರ ಸಂಖ್ಯೆ ಹೆಚ್ಚಿದೆಯೆಂದು ತಿಳಿಯುತ್ತದೆ.

(೧) ಅಲ್ಪಾವಧಿ ಸಾಲ: ಅವಧಿ ಹನ್ನೆರಡರಿಂದ ಹದಿನೈದು ತಿಂಗಳುಗಳು, ಸಾಗುವಳಿ ವೆಚ್ಚ, ಬಿತ್ತನೆ ಬೀಜ, ಗೊಬ್ಬರ, ಪಶು ಆಹಾರ ಖರೀದಿ, ಆಹಾರ ಖರೀದಿ – ಮುಂತಾದವುಗಳಿಗೆ ಅಲ್ಪಾವಧಿ ಸಾಲ ಅಗತ್ಯ ಬೆಳೆ ಕುಯ್ಲು ಆದ ಕೂಡಲೇ ಸಾಲ ಮರು ಪಾವತಿಸಲಾಗುತ್ತದೆ.

(೨) ದೀರ್ಘಾವಧಿ ಸಾಲ: ಇದರೆ ಹದಿನೈದು ತಿಂಗಳುಗಳಿಂದ ಐದು ವರ್ಷಗಳವರೆಗೆ, ಸಣ್ಣ ಪುಟ್ಟ ಅಭಿವೃದ್ಧಿ ಕಾರ್ಯಗಳಿಗೆ ಈ ಸಾಲ ಬಳಕೆಯಾಗುತ್ತದೆ. ಜಾನುವಾರು, ಖರೀದಿ ಕೃಷಿ ಸಾಮಾಗ್ರಿ, ಖರೀದಿ, ಕೆರೆ–ಬಾವಿ ದುರಸ್ತಿ ಮುಂತಾದವುಗಳಿಗೆ ಮಧ್ಯಾವಧಿ ಸಾಲ ಅಗತ್ಯ.

(೩) ದೀರ್ಘಾವಧಿ ಸಾಲ : ಅವಧಿ ಐದು ವರ್ಷಗಳಿಂದ ಇಪ್ಪತ್ತು ವರ್ಷಗಳು. ಕೃಷಿ ಜಮೀನಿನಲ್ಲಿ ಶಾಶ್ವತ ಸುಧಾರಣೆಗಳನ್ನು ಮಾಡುವುದು ಉದ್ದೇಶ. ಕೆರೆ–ಬಾವಿ ತೋಡುವುದು, ಪಂಪುಸೆಟ್ಟು, ಸ್ಪ್ರಿಂಕ್ಲರ್,

ಟಿಲ್ಲರ್, ಟ್ರ್ಯಾಕ್ಟರ್, ಹಾರ್ವೆಸ್ಟರ್, ಹೊಸ ಜಮೀನು ಖರೀದಿ, ಹಳೆ ಸಾಲ ಸಂದಾಯಕ್ಕೆ ದೀರ್ಘಾವಧಿ ಸಾಲ ಅಗತ್ಯ.

ಮಧ್ಯಾವಧಿ ಸಾಲಕ್ಕೆ ಹೆಚ್ಚಿನ ಬೇಡಿಕೆಯಿರಲು ಕೆಲವು ಕಾರಣಗಳಿವೆ. ಮುಖ್ಯವಾಗಿ ರೈತರು ಒಂದಕ್ಕಿಂತ ಹೆಚ್ಚಿನ ಹಣಕಾಸಿನ ಸಂಸ್ಥೆಯನ್ನು ಅವಲಂಬಿಸಿರುವುದು, ಒಮ್ಮೆಲೆ ಹೆಚ್ಚು ಸಾಲದ ಹೊರಯನ್ನು ಹೊರಲು ಇಷ್ಟಪಡದೇ ಇರುವಂತಹುದು ಮತ್ತು ಅವರ ಅವಶ್ಯಕತೆ, ಬೇಡಿಕೆಗಳನ್ನು ಮಧ್ಯಾವಧಿ ಸಾಲದಿಂದ ಪೂರೈಸಲು ಸಾಧ್ಯವಾಗುವುದು. ದೀರ್ಘಾವಧಿ ಸಾಲದ ಪ್ರಮಾಣ ಉಳಿದೆರಡು ಪ್ರಕಾರಗಳಿಗಿಂತ ಕಡಿಮೆಯಾಗಿವೆ. ಹೆಚ್ಚಿನ ಹಣಕಾಸಿನ ಅವಶ್ಯಕತೆಯಿರುವವರು ಮಾತ್ರ ದೀರ್ಘಾವಧಿ ಸಾಲದ ಮೊರೆ ಹೋಗಿರುವುದು ಇದರಿಂದ ತಿಳಿದು ಬರುತ್ತದೆ.

೪.೨.೫: ಸಾಲ ಪಡೆದಿರುವ ಉದ್ದೇಶ:

ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಲ್ಪಟ್ಟ ಫಲಾನುಭವಿಗಳು ಬೇರೆ ಬೇರೆ ಉದ್ದೇಶಗಳಿಗಾಗಿ ಸಾಲವನ್ನು ಪಡೆದಿರುವುದು ತಿಳಿದುಬರುತ್ತದೆ. ಅದರ ವಿವರ ಇಂತಿವೆ.

ಕ್ರಮ ಸಂಖ್ಯೆ	**ವಿವರ**	**ಸಂಖ್ಯೆ**	**ಶೇಕಡವಾರು ಪ್ರಮಾಣ**
೧	ಬೆಳೆ ನಿರ್ವಹಣೆ	೨೦	೪೦
೨	ಧಾನ್ಯ ಖರೀದಿ	೫	೧೦
೩	ಕೃಷಿ ಸಲಕರಣೆ ಖರೀದಿ	೧೫	೩೦
೪	ಭೂಮಿ ಖರೀದಿ	೪	೮
೫	ಇತರೆ	೬	೧೨
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಮೇಲಿನ ದತ್ತಾಂಶದ ಪ್ರಕಾರ ಶೇಕಡಾ ೪೦ರಷ್ಟು ಮಾಹಿತಿದಾರರು ಬೆಳೆಯ ನಿರ್ವಹಣೆಯ ಉದ್ದೇಶಕ್ಕಾಗಿ ಸಾಲವನ್ನು ಪಡೆದಿದ್ದಾರೆ. ಶೇಕಡಾ ೧೦ರಷ್ಟು ಮಂದಿ ಕೃಷಿ ಸಲಕರಣೆ ಖರೀದಿ ಶೇಕಡಾ ೮ರಷ್ಟು ಜನರು ಭೂಮಿ ಖರೀದಿ ಹಾಗೂ ಶೇಕಡಾ ೧೨ ರಷ್ಟು ಜನರು ಇನ್ನಿತರ ಉದ್ದೇಶಕ್ಕಾಗಿ ಸಾಲವನ್ನು ಪಡೆದಿದ್ದಾರೆ.

ಈ ಅಂಕಿ ಅಂಶಗಳಿಂದ ತಿಳಿದು ಬರುವುದೇನೆಂದರೆ ಹೆಚ್ಚಿನ ಫಲಾನುಭವಿಗಳು ಬೆಳೆಯ ನಿರ್ವಹಣೆಯ ಉದ್ದೇಶಕ್ಕಾಗಿ ಗ್ರಾಮೀಣ ವಿಕಾಸ ಬ್ಯಾಂಕನ್ನು ಅವಲಂಬಿಸಿದ್ದಾರೆ. ರೈತರು ಸಾಮಾನ್ಯವಾಗಿ ಬೇರೆ ಬೇರೆ ಉದ್ದೇಶಗಳಿಗೆ ಸಾಲವನ್ನು ಪಡೆಯುತ್ತಾರೆ. ಬೆಳೆ ನಿರ್ವಹಣೆ ಎಂದರೆ ಬೀಜವನ್ನು ಬಿತ್ತಿ ಅದರಿಂದ ಒಳ್ಳೆಯ ಫಸಲನ್ನು ಪಡೆಯುವ ತದನಂತರದಲ್ಲಿ ಅದನ್ನು ಸಂರಕ್ಷಿಸಿಡುವ ಹಂತದವರೆಗಿನ ಒಂದು ಪ್ರಕ್ರಿಯೆ. ಬೆಳೆಯನ್ನು ಜೋಪಾನ ಮಾಡಿಕೊಳ್ಳಬೇಕಾದುದು ಪ್ರತಿಯೊಬ್ಬ ರೈತನ ಜವಾಬ್ದಾರಿಯಾಗಿದೆ. ಅದಕ್ಕಾಗಿ ಅವನು ಸಾಕಷ್ಟು ಕಾಯಬೇಕಾಗುತ್ತದೆ. ಹೀಗಾಗಿ ರೈತರು ಆ ವೆಚ್ಚ ಭರಿಸುವ ಉದ್ದೇಶದಿಂದ ಹಣಕಾಸಿಗಾಗಿ ಬ್ಯಾಂಕನ್ನು ಅವಲಂಬಿಸಬೇಕಾಗುತ್ತದೆ. ಧಾನ್ಯ ಖರೀದಿ, ಕೃಷಿ ಸಲಕರಣೆ ಖರೀದಿ, ಭೂಮಿ ಖರೀದಿ ಈ ಉದ್ದೇಶಗಳಿಗೂ ಸಾಲ ಸೌಲಭ್ಯವನ್ನು ಪಡೆಯುತ್ತಾರೆ. ಭೂಮಿ ಖರೀದಿಗಾಗಿ ಬ್ಯಾಂಕನ್ನು ಅವಲಂಬಿಸಿದವರ ಪ್ರಮಾಣ ಕಡಿಮೆಯಾಗಿರುವುದು, ಇದಕ್ಕೆ ಕಾರಣ ಮಾಹಿತಿದಾರರಲ್ಲಿ ಹೆಚ್ಚಿನವರು ಮೊದಲೇ ಭೂಮಿಯನ್ನು ಹೊಂದಿದವರು ಎಂಬುದೂ ಗಮನಾರ್ಹವಾದುದು, ಅಂತೆಯೇ ಕೃಷಿಕರು ಇತರ ಉದ್ದೇಶಗಳಿಗಾಗಿಯೂ ಕೃಷಿ ಸಾಲವನ್ನು ಪಡೆಯುತ್ತಾರೆ. ಉದಾಹರಣೆಗೆ, ಉತ್ಪನ್ನಗಳ ಮಾರಾಟಕ್ಕಾಗಿ ಸಾಗಾಟ ವೆಚ್ಚವನ್ನು ನಿಭಾಯಿಸಲು ಕಾರ್ಮಿಕರ ವೇತನ ಪಾವತಿ ಇತ್ಯಾದಿ.

ರೈತರು ಬೀಜವನ್ನು ಬಿತ್ತಿ ಫಲವನ್ನು ಪಡೆಯುವ ಪ್ರಕ್ರಿಯೆಯಲ್ಲಿ ಒಂದಲ್ಲ ಒಂದು ಸಮಸ್ಯೆಯನ್ನು ಎದುರಿಸುತ್ತಾರೆ. ಸಾಮಾನ್ಯವಾಗಿ ಅವರು ಎದುರಿಸುವ ಸಮಸ್ಯೆಗಳನ್ನು ಈ ರೀತಿ ಪಟ್ಟಿ ಮಾಡಬಹುದು.

೪.೨.೬: ರೈತರು ಎದುರಿಸುವ ಸಮಸ್ಯೆಗಳ ವಿವರ

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಭೂ ಹಿಡುವಳಿಯ ಗಾತ್ರ	೧೦	೨೦
೨	ಹಣಕಾಸಿನ ಕೊರತೆ	೧೨	೨೪
೩	ಕಾರ್ಮಿಕರ ಕೊರತೆ	೯	೧೮
೪	ಮಾರುಕಟ್ಟೆ ವ್ಯವಸ್ಥೆ	೮	೧೬
೫	ಕೃಷಿ ಜ್ಞಾನದ ಕೊರತೆ	೬	೧೨
೬	ಇತರೆ	೫	೧೦
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಮೇಲಿನ ದತ್ತಾಂಶದ ಪ್ರಕಾರ ಮಾಹಿತಿದಾರರಲ್ಲಿ ಶೇಕಡಾ ೨೦ರಷ್ಟು ಜನರು ಭೂಹಿಡುವಳಿಯ ಗಾತ್ರದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಶೇಕಡಾ ೨೪ರಷ್ಟು ಜನರು ಹಣಕಾಸಿನ ಕೊರತೆಯು ಅವರನ್ನು ಕಾಡುವುದಾಗಿ ತಿಳಿಸಿದ್ದಾರೆ. ಶೇಕಡಾ ೧೮ರಷ್ಟು ಜನರು ಕಾರ್ಮಿಕರು ಸರಿಯಾದ ಸಮಯಕ್ಕೆ ಲಭ್ಯವಿರುವುದಿಲ್ಲವಾಗಿ ಬೇಸರಿಸಿಕೊಳ್ಳುತ್ತಾರೆ. ಅಂತೆಯೇ ಶೇಕಡಾ ೧೬ರಷ್ಟು ಜನರು ಮಾರುಕಟ್ಟೆ ವ್ಯವಸ್ಥೆಯನ್ನು ದೂರುತ್ತಾರೆ. ಮತ್ತು ಶೇಕಡಾ ೧೨ರಷ್ಟು ಜನರು ಕೃಷಿ ಜ್ಞಾನದ ಕೊರತೆಯಿರುವುದಾಗಿ ತಿಳಿಸುತ್ತಾರೆ. ಹಾಗೂ ಶೇಕಡಾ ೧೦ರಷ್ಟು ಜನರು ಇತರೆ ಕಾರಣವನ್ನು ನೀಡುತ್ತಾರೆ. ಭೂಹಿಡುವಳಿಯು ಛಿದ್ರ ಛಿದ್ರವಾದಂತೆ ಹೋದಾಗ ಅದು ಒಂದು ಸಮಸ್ಯೆಯಂತೆ ತಲೆದೋರುತ್ತದೆ. ಗಾತ್ರ ಸಣ್ಣದಾಗುತ್ತಾ ಹೋದಂತೆ, ಕೃಷಿಗೆ ಯೋಗ್ಯವಾಗಿರುವುದಿಲ್ಲ. ಅದರಿಂದಾಗಿ ರೈತರು ಕೆಲವು ಸಮಸ್ಯೆಗಳನ್ನು ಎದುರಿಸಬೇಕಾದಿತು. ಅಂತೆಯೇ ಲೇವಾದೇವಿದಾರರಿಂದ ಪಡೆದ ಸಾಲವನ್ನೇ ತೀರಿಸಲು ಅಸಮರ್ಥರಾಗಿ ಅದನ್ನು ಪಾವತಿಸಲು ಮತ್ತೆ ಮತ್ತೆ ಬೇರೆ ಮೂಲಗಳಿಂದ ಸಾಲ ಪಡೆದುಕೊಳ್ಳಬೇಕಾಗುತ್ತದೆ. ಹೀಗೆ

ಅವರು ಜೀವನದುದ್ದಕ್ಕೂ ಹಣಕಾಸಿನ ಸಮಸ್ಯೆಯನ್ನು ಎದುರಿಸುತ್ತಾರೆ. ಕಾರ್ಮಿಕರ ಅಭಾವವೂ ಒಂದು ಬಹುದೊಡ್ಡ ಸವಾಲಾಗಿದೆ. ಉತ್ಪನ್ನಗಳ ಮಾರುಕಟ್ಟೆಯ ವ್ಯವಸ್ಥೆಯೂ ಕೆಲವೊಮ್ಮೆ ರೈತರಿಗೆ ಕಗ್ಗಂಟಾಗಿದೆ. ಕೆಲವು ರೈತರಿಗೆ ನೂತನ ಕೃಷಿ ತಂತ್ರಜ್ಞಾನದ ಬಗ್ಗೆ ಅರಿವು ಕಡಿಮೆ ಇರುವುದರಿಂದ ಅವರು ಅದರ ಸದ್ಬಳಕೆ ಮತ್ತು ಹೆಚ್ಚಿನ ಉತ್ಪನ್ನವನ್ನು ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ.

೪.೨.೭: ಕೃಷಿಗೆ ಬಳಸುವ ವಿಧಾನದ ಬಗ್ಗೆ ವಿವರ:

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಹೊಸ ಪದ್ಧತಿ	೩೫	೭೦
೨	ಹಳೆಯ ಪದ್ಧತಿ	೧೫	೨೦
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಮೇಲಿನ ದತ್ತಾಂಶದ ಪ್ರಕಾರ, ಮಾಹಿತಿದಾರರಲ್ಲಿ ಶೇಕಡಾ ೭೦ರಷ್ಟು ಜನರು ಹೊಸ ಪದ್ಧತಿಯನ್ನು ಬಳಸುವವರಾಗಿದ್ದಾರೆ. ಈ ಅಂಕಿ ಅಂಶಗಳಿಂದ ತಿಳಿದು ಬರುವುದೇನೆಂದರೆ ಹೆಚ್ಚಿನ ಫಲಾನುಭವಿಗಳು ಕೃಷಿಯಲ್ಲಿ ಹೊಸ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಮತ್ತು ಅದರಿಂದ ಹೆಚ್ಚಿನ ಪ್ರಯೋಜನವನ್ನೂ ಪಡೆದಿದ್ದಾರೆ. ವೈಜ್ಞಾನಿಕ ಯಂತ್ರೋಪಕರಣಗಳ ಬಳಕೆ, ಹೈಬ್ರಿಡ್ ತಳಿಗಳ ಬಳಕೆ, ಹೊಸ ಕೃಷಿ ವಿಧಾನಗಳ ಅಳವಡಿಕೆ ಇತ್ಯಾದಿಗಳಿಂದ ಕೃಷಿಯಲ್ಲಿ ಸಾಕಷ್ಟು ಬದಲಾವಣೆಯನ್ನು ತರಲಾಯಿತು. ಮತ್ತು ಅದಕ್ಕೆ ಬ್ಯಾಂಕು ನೀಡುವ ಹಣಕಾಸಿನ ವ್ಯವಸ್ಥೆಯು ಪೂರಕವಾಯಿತು ಎಂಬುದು ಫಲಾನುಭವಿಗಳ ಅಭಿಪ್ರಾಯ. ಅದೇ ರೀತಿ ಕೆಲವು ರೈತರು ಇನ್ನೂ ಕೂಡ ಹಳೆಯ ಪದ್ಧತಿಯನ್ನೇ ಬಳಸಿಕೊಂಡು ಕೃಷಿಯನ್ನು ನಡೆಸುತ್ತಿದ್ದಾರೆ. ಅವರಿಗೆ ಹೊಸ ಬೇಸಾಯ ಕ್ರಮದ ಬಗ್ಗೆ ಸರಿಯಾದ ಅರಿವು ಇಲ್ಲದಿರುವುದು ಮತ್ತು ಹಣಕಾಸಿನ ಸಮಸ್ಯೆಯೇ ಕಾರಣವಾಗಿದೆ ಎಂದು ಹೇಳಬಹುದು.

೪.೨.೮: ಮಾಹಿತಿದಾರರು ಅನುಸರಿಸುತ್ತಿರುವ ಬೇಸಾಯ ವಿವರ:

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಹೊಸ ಪದ್ಧತಿ	೪೧	೮೨
೨	ಹಳೆಯ ಪದ್ಧತಿ	೯	೧೮
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಈ ಮೇಲಿನ ದತ್ತಾಂಶದ ಪ್ರಕಾರ ಮಾಹಿತಿದಾರರಲ್ಲಿ ಶೇಕಡಾ ೮೨ರಷ್ಟು ಜನರು ಹೊಸ ಪದ್ಧತಿಯನ್ನು ಬಳಸುವುದಾಗಿ ತಿಳಿಸಿದ್ದು ಹೊಸ ತಂತ್ರಜ್ಞಾನ, ಯಂತ್ರೋಪಕರಣಗಳ ಸದ್ಬಳಕೆ ಕೃಷಿಯ ಉನ್ನತೀಕರಣಕ್ಕಾಗಿ ಪರಿಚಯಿಸಲ್ಪಟ್ಟಿರುವ ಹೊಸ ತಂತ್ರಜ್ಞಾನ, ಯಂತ್ರೋಪಕರಣಗಳ ಸದ್ಬಳಕೆ, ಟ್ರಾಕ್ಟರ್, ಟಿಲ್ಲರ್, ಹೈಬ್ರಿಡ್ ಬೀಜಗಳ ಪ್ರಯೋಜನವನ್ನು ಪಡೆದು ಉತ್ಪಾದನೆಯಲ್ಲೂ ಹೆಚ್ಚಳವನ್ನು ಕಾಣುತ್ತಿರುವುದಾಗಿ ತಿಳಿಸಿದರು. ಅದೇ ರೀತಿ ಶೇಕಡಾ ೧೮ರಷ್ಟು ಜನರು ಮಾತ್ರ ಹಳೆಯ ಪದ್ಧತಿಯನ್ನು ಅನುಸರಿಸುತ್ತಿದ್ದು ಭವಿಷ್ಯದಲ್ಲಿ ಹೊಸ ಪದ್ಧತಿಯತ್ತ ಒಲವು ತೋರುವಂತೆ ಅಭಿಪ್ರಾಯಪಟ್ಟರು.

೪.೩ ಬ್ಯಾಂಕಿನ ಸೇವೆಯ ವಿವರ

ಬ್ಯಾಂಕಿನ ಸೇವೆಯು ಉತ್ತಮವಾಗಿದ್ದಲ್ಲಿ ಹೆಚ್ಚು ಹೆಚ್ಚು ಗ್ರಾಹಕರನ್ನು ತನ್ನೆಡೆಗೆ ಆಕರ್ಷಿಸುವಲ್ಲಿ ಸಫಲವಾಗಬಹುದು ಮತ್ತು ಅವರ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವನ್ನು ವಹಿಸುವಲ್ಲಿ ಇದೂ ಒಂದು ಅತೀ ಮುಖ್ಯ ಪ್ರಭಾವೀ ಅಂಶವಾಗಿದೆ.

೪.೩.೧: ಠೇವಣಿ ಸ್ವರೂಪ/ಪ್ರಕಾರದ ವಿವರ:

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನಲ್ಲಿ ೪ ರೀತಿಯ ಠೇವಣಿ ಸಂಚಯನದ ಸೌಲಭ್ಯವಿದೆ. ಉಳಿತಾಯ ಖಾತೆ, ಚಾಲ್ತಿ ಖಾತೆ, ನಿರಖು ಠೇವಣಿ ಹಾಗೂ ಮಾಸಿಕ ಠೇವಣಿ, ಇವು ಸಾರ್ವಜನಿಕರಲ್ಲಿ ಉಳಿತಾಯ ಮನೋಬಾವನೆ ಮತ್ತು ಭದ್ರತೆಯನ್ನು ಮೂಡಿಸುತ್ತದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಫಲಾನುಭವಿಗಳನ್ನು ಸಂದರ್ಶಿಸಿದಾಗ ತಾವು ಉಳಿತಾಯ ಮಾಡಿದ ಹಣವನ್ನು ಯಾವ ರೀತಿಯ ಠೇವಣಿಯಲ್ಲಿ ಇಡಲು ಬಯಸುತ್ತಾರೆ ಎಂದು ಕೇಳಲಾಯಿತು. ಅದರ ಪ್ರಕಾರ ದೊರಕಿದ ಮಾಹಿತಿ ಇಂತಿವೆ.

ಠೇವಣಿ ಸ್ವರೂಪ/ ಪ್ರಕಾರದ ವಿವರ

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಉಳಿತಾಯ ಖಾತೆ	೩೯	೭೮
೨	ಚಾಲ್ತಿ ಖಾತೆ	೪	೮
೩	ನಿರಖು ಠೇವಣಿ	೫	೧೦
೪	ಮಾಸಿಕ ಠೇವಣಿ	೨	೪
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಈ ಮೇಲಿನ ದತ್ತಾಂಶದ ಮೇಲೆ ಕಂಡುಬರುವ ವಿಷಯವೇನೆಂದರೆ ಶೇಕಡಾ ೭೮ರಷ್ಟು ಜನರು ತಮ್ಮ ಹಣವನ್ನು ಉಳಿತಾಯ ಖಾತೆಯಲ್ಲಿ ಇಡಲು ಬಯಸುತ್ತಾರೆ. ಶೇಕಡಾ ೮ರಷ್ಟು ಜನರು ಚಾಲ್ತಿಖಾತೆಯಲ್ಲಿ ಇಡಲು ಬಯಸುತ್ತಾರೆ. ಶೇಕಡಾ ೧೦ರಷ್ಟು ಜನರು ನಿರಖು ಠೇವಣಿಯಲ್ಲಿ ಇಡಲು ಬಯಸುತ್ತಾರೆ. ಹಾಗೂ ಶೇಕಡಾ ೪ ರಷ್ಟು ಜನರು ಮಾಸಿಕ ಠೇವಣಿಯಲ್ಲಿಡಲು ಬಯಸುತ್ತಾರೆ. ಮೇಲಿನ ಅಂಕಿಅಂಶಗಳಿಂದ ಕೃಷಿಕ ಮಾಹಿತಿದಾರರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉಳಿತಾಯ ಖಾತೆಯಲ್ಲಿ ತಮ್ಮ ಹೆಚ್ಚುವರಿ ಹಣವನ್ನು ಇಡಲು ಬಯಸುತ್ತಾರೆ.

೪.೩.೨: ಬ್ಯಾಂಕು ನಿಡುವ ಸಾಲ ಸೌಲಭ್ಯದ ವಿವರ

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಹೌದು	೪೭	೯೪
೨	ಇಲ್ಲ	೩	೬
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಈ ಮೇಲಿನ ದತ್ತಾಂಶದ ಪ್ರಕಾರ ೯೪ರಷ್ಟು ಮಾಹಿತಿದಾರರು ಬ್ಯಾಂಕು ಸಕಾಲಕ್ಕೆ ಸಾಲ ಸೌಲಭ್ಯವನ್ನು ಒದಗಿಸಿಕೊಡುವುದಾಗಿ ತಿಳಿಸಿದ್ದಾರೆ. ಹಾಗೂ ಕೇವಲ ಶೇಕಡಾ ೬ ರಷ್ಟು ಜನರು ಮಾತ್ರ ಸಕಾಲದಲ್ಲಿ ಸಾಲ ಸೌಲಭ್ಯ ಸಿಗುತ್ತಿಲ್ಲ ಎಂದು ಉತ್ತರಿಸಿದ್ದಾರೆ. ಈ ಅಂಕಿಅಂಶಗಳಿಂದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು ಜನರಿಗೆ ಕ್ಲಪ್ತ ಸಮಯದಲ್ಲಿ ಸಾಲ ಸೌಲಭ್ಯವನ್ನು ಒದಗಿಸುತ್ತದೆ ಎಂಬುದು ತಿಳಿದು ಬರುತ್ತದೆ.

ಈ ಅಂಕಿ ಅಂಶಗಳಿಂದ ಹೆಚ್ಚಿನ ರೈತರು, ಬ್ಯಾಂಕು ಸಕಾಲಕ್ಕೆ ಸಾಲ ಒದಗಿಸುವುದಾಗಿ ತಿಳಿಸಿರುವರು, ಅದಕ್ಕೆ ಕಾರಣ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು ತ್ವರಿತಗತಿಯಲ್ಲಿ ಸಾಲ ವಿತರಣೆಯು ಪ್ರಕ್ರಿಯೆಯನ್ನು ಮುಗಿಸಿ ಹಣವು ಆದಷ್ಟು ಬೇಗನೆ ರೈತರ ಕೈಸೇರುವಲ್ಲಿ ಸತತ ಪ್ರಯತ್ನ ನಡೆಸುತ್ತಿವೆ. ಆದುದರಿಂದ ಹೆಚ್ಚಿನ ರೈತರು ಇದರಿಂದ ಸಾಕಷ್ಟು ಪ್ರಯೋಜನವನ್ನು ಪಡೆದಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಇಂದಿನ ಕಂಪ್ಯೂಟರೀಕೃತ ಯುಗದಲ್ಲಿ ಆದಷ್ಟು ತ್ವರಿತಗತಿಯಲ್ಲಿ ಕೆಲಸ ಕಾರ್ಯವು ನಿರ್ವಹಿಸುವುದನ್ನು ಎಲ್ಲರೂ ನಿರೀಕ್ಷಿಸುತ್ತಾರೆ.

೪.೩.೩: ಬ್ಯಾಂಕಿನ ಸೇವೆಯಲ್ಲಿರುವ ದಕ್ಷತೆಯ ಬಗ್ಗೆ ಮಾಹಿತಿ.

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಅತ್ಯುತ್ತಮ	೪೫	೯೦
೨	ಉತ್ತಮ	೫	೧೦
೩	ತೃಪ್ತಿಕರ	–	–
೪	ತೃಪ್ತಿಕರವಲ್ಲ	–	–
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಈ ಮೇಲಿನ ದತ್ತಾಂಶದ ಪ್ರಕಾರ ಶೇಕಡಾ ೯೦ರಷ್ಟು ಜನರು ಉತ್ತಮವಾಗಿದೆ ಎಂಬುದು ತಿಳಿಸಿದ್ದಾರೆ. ಈ ಅಂಕಿ ಅಂಶಗಳಿಂದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಸೇವೆಯು ಅತ್ಯುತ್ತಮವಾಗಿದೆ ಎಂದು ಸ್ಪಷ್ಟವಾಗುತ್ತದೆ. ಹೆಚ್ಚಿನ ಜನರು ಬ್ಯಾಂಕಿನ ಸೇವೆ ಅತ್ಯುತ್ತಮವಾಗಿದೆಯೆಂದು ಹಾಗೂ ಕೇವಲ ೧೦% ಜನರು ಉತ್ತಮವಾಗಿದೆ ಎಂದು ಪ್ರತಿಕ್ರಿಯೆ ನೀಡಿರುವುದೇ ಇದಕ್ಕೊಂದು ನಿದರ್ಶನ. ಬ್ಯಾಂಕು ಇನ್ನೂ ಉತ್ಕೃಷ್ಟ ರೀತಿಯ ಸೇವೆಯನ್ನು ನೀಡುವ ಸಲುವಾಗಿ ಹತ್ತು ಹಲವು ಯೋಜನೆಗಳನ್ನು ರಚಿಸಿ ಅದರ ಅನುಷ್ಠಾನಕ್ಕಾಗಿ ಸರಿಯಾದ ತಂತ್ರಗಾರಿಕೆಯನ್ನು ಅಳವಡಿಸುತ್ತಿದೆ.

೪.೩.೪: ಕೃಷಿ ಸಾಲಕ್ಕಾಗಿ ಮಾಹಿತಿದಾರರು ಅವಲಂಬಿಸಿದ ಮೂಲದ ವಿವರ

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಸಾಂಸ್ಥಿಕ ಮೂಲ	೧೫	೩೦
೨	ಸಾಂಸ್ಥಿಕೇತರ ಮೂಲ	೧೦	೨೦
೩	ಸಾಂಸ್ಥಿಕ ಮತ್ತು ಸಾಂಸ್ಥಿಕೇತರ ಮೂಲ	೨೫	೫೦
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಶೇಕಡಾ ೩೦ ಜನರು ಸಾಂಸ್ಥೀಕ ಮೂಲವನ್ನು ಶೇಕಡಾ ೨೦ ಜನರು ಸಾಂಸ್ಥಿಕೇತರ ಮೂಲವನ್ನೂ ಮತ್ತು ಶೇಕಡಾ ೫೦ರಷ್ಟು ಜನರು ಎರಡೂ ಮೂಲಗಳನ್ನೂ ಅವಲಂಬಿಸಿರುವು ತಿಳಿದು ಬರುತ್ತದೆ. ಈ ಮೆಲಿನ ಅಂಕಿ ಅಂಶಗಳಿಂದ ಗ್ರಾಹಕರು ಸಾಂಸ್ಥಿಕ ಮೂಲದ ಕಡೆಗೆ ಹೆಚ್ಚು ಒಲವನ್ನು ತೋರಿಸುತ್ತಿರುವುದು ಇತ್ತೀಚಿಗಿನ ಬೆಳವಣಿಗೆಯಾಗಿದೆ. ಬಹಳ ಹಿಂದೆ ಸಾಂಸ್ಥೀಕೇತರ ಮೂಲಗಳಾದ ದಲ್ಲಾಳಿಗಳು, ಹಣ ಲೇವಾದೇವಿದಾರರಿಂದ ಸಾಲವನ್ನು ಪಡೆಯುತ್ತಿದ್ದು ಅವೈಜ್ಞಾನಿಕ ರೀತಿಯಲ್ಲಿ ಹಣ ವಸೂಲಿ ಮಾಡುತ್ತಿದ್ದ ಕ್ರಮದಿಂದ ಜನರು ಹೈರಾಣಾಗಿದ್ದಾರೆ. ಆದರೂ ಅದರ ಕಪಿಮುಷ್ಠಿಯಿಂದ ಇನ್ನೂ ಅನೇಕ ಜನರು ಹೊರಕ್ಕೆ ಬರಲಾಗದೆ ಸಂಕಷ್ಟಕ್ಕೀಡಾಗಿದ್ದಾರೆ. ಕೆಲವರು ಸಾಂಸ್ಥಿಕೇತರ ಮೂಲದಿಂದ ಪಡೆದ ಸಾಲವನ್ನು ತೀರಿಸುವ ಉದ್ದೇಶದಿಂದ ಸಾಂಸ್ಥಿಕ ಮೂಲಗಳಿಂದ ಮತ್ತೆ ಸಾಲ ಪಡೆದ ಸಾಲದ ಹೊರೆಯನ್ನು ಹೆಚ್ಚಿಸಿಕೊಳ್ಳುತ್ತಿರುವುದೂ ವಿಷಾದನೀಯವಾಗಿದೆ.

೪.೩.೫: ಕೃಷಿಕರಿಗೆ ಗ್ರಾಮೀಣ ವಿಕಾಸ ಬ್ಯಾಂಕಿನ ಅವಶ್ಯಕತೆಯ ವಿವರ

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಅವಶ್ಯಕತೆಯಿದೆ	೫೦	೧೦೦
೨	ಅವಶ್ಯಕತೆಯಿಲ್ಲ	–	–
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಈ ಮೇಲಿನ ದತ್ತಾಂಶದ ಪ್ರಕಾರ ಕೃಷಿಕರಿಗೆ ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕಿನ ಅವಶ್ಯಕತೆಯಿದೆ ಎಂಬುದಾಗಿ ಸ್ಪಷ್ಟವಾಗುತ್ತದೆ. ಎಲ್ಲ ಮಾಹಿತಿದಾರರೂ ಈ ರೀತಿ ಅಭಿಪ್ರಾಯಪಟ್ಟಿದ್ದರಿಂದ ಬ್ಯಾಂಕು ಕೃಷಿಕರಿಗೆ ಹಣಕಾಸಿನ ನೆರವನ್ನು ಒದಗಿಸುವುವಲ್ಲಿ ಯಶಸ್ವಿಯಾಗಿದೆ ಎಂಬುದು ಖಚಿತವಾಗುತ್ತದೆ. ಮೇಲಿನ ಅಂಕಿ ಅಂಶಗಳಿಂದ ಎಲ್ಲಾ ಫಲಾನುಭವಿಗಳ ಅಭಿಪ್ರಾಯದಂತೆ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಅವಶ್ಯಕತೆಯಿದೆ ಎಂಬುದು ಸ್ಪಷ್ಟವಾಗುತ್ತದೆ. ಎಲ್ಲ ಮಾಹಿತಿದಾರರೂ ಬ್ಯಾಂಕಿನ ಸೇವೆಯಿಂದ ತಮ್ಮ ಹಣದ ಅಗತ್ಯತೆಯನ್ನು ಪೂರೈಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ. ಫಲಾನುಭವಿಗಳಿಗೆ ಬ್ಯಾಂಕಿನ ಸೇವೆಯಿಂದ ತೃಪ್ತಿ ಉಂಟಾಗಿದೆ ಎಂಬುದನ್ನು ಕೋಷ್ಟಕ ೪.೩.೬ ರಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.

೪.೩.೬: ಮಾಹಿತಿದಾರರಿಗೆ ಬ್ಯಾಂಕಿನ ಸೇವೆಯಹಿಂದ ಇರುವ ತೃಪ್ತಿಯ ಬಗ್ಗೆ ವಿವರ

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಅತಿ ಹೆಚ್ಚು ತೃಪ್ತಿ	೩೭	೭೪
೨	ಹೆಚ್ಚು ತೃಪ್ತಿ	೦೮	೧೬
೩	ಸಾಧಾರಣ ತೃಪ್ತಿ	೦೫	೧೦
೪	ತೃಪ್ತಿ ಇಲ್ಲ	–	–
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಮೇಲಿನ ದತ್ತಾಂಶದ ಪ್ರಕಾರ ಮಾಹಿತಿದಾರರಲ್ಲಿ ಶೇಕಡಾ ೭೪ರಷ್ಟು ಜನರು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಸೇವೆಯಿಂದ ತಮಗೆ ಅತಿ ಹೆಚ್ಚು ತೃಪ್ತಿಯಿರುವುದಾಗಿ ತಿಳಿಸಿದ್ದಾರೆ. ಶೇಕಡಾ ೧೬ರಷ್ಟು ಜನರು ಹೆಚ್ಚು ತೃಪ್ತಿಯಿರುವುದಾಗಿಯೂ ಹಾಗೂ ಕೇವಲ ಶೇಕಡಾ ೧೦ರಷ್ಟು ಜನರು ತಮಗೆ ಸಾದಾರಣ ತೃಪ್ತಿಯಿರುವುದಾಗಿ ತಿಳಿಸಿದ್ದಾರೆ. ಮೇಲಿನ ಅಂಕಿ ಅಂಶಗಳಿಂದ ತಿಳಿದು ಬರುವುದೇನೆಂದರೆ, ಹೆಚ್ಚಿನ ಮಾಹಿತಿದಾರರಿಗೆ ಬ್ಯಾಂಕಿನ ಸೇವೆಯಿಂದ ಅತೀ ಹೆಚ್ಚು ತೃಪ್ತಿಯಿದೆ. ಇದಕ್ಕೆ ಕಾರಣ ಬ್ಯಾಂಕು ಒದಗಿಸುವ ಉತ್ಕೃಷ್ಟ ಸೇವೆಗಳು ಮತ್ತು ಕ್ಲಪ್ತ ಸಮಯದಲ್ಲಿ ಜನರ ಕೈಗೆಟುಕುವಂತೆ ಮಾಡುವುದಾಗಿದೆ. ಕೆಲವರಿಗೆ ಮಾತ್ರ ಸಾಧಾರಣ ತೃಪ್ತಿಯಿದೆ ಎಂದು ತಿಳಿದು ಬಂದಿದೆ. ಬ್ಯಾಂಕು ಇನ್ನಷ್ಟು ಸುಧಾರಣೆಗಳನ್ನು ತಂದು ಸೇವೆಯನ್ನು ಸಂಪೂರ್ಣವಾಗಿ ಗ್ರಾಹಕ ಕೇಂದ್ರಿಕೃತ ಗೊಳಿಸಿದಲ್ಲಿ ಫಲಾನುಭವಿಗಳೆಲ್ಲರಲ್ಲೂ ಹೆಚ್ಚಿನ ತೃಪ್ತಿಯನ್ನು ಕಾಣಬಹುದು ಎಂಬದು ಗಮನಾರ್ಹವಾದುದು.

೪.೩.೭: ಕ.ವಿ.ಗ್ರಾ ಬ್ಯಾಂಕನ್ನು ಅವಲಂಬಿಸಲು ಕಾರಣ:

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಸರಳ ವಿಧಾನ	೨೦	೪೦
೨	ಕ್ಲಪ್ತ ಸಮಯದಲ್ಲಿ ಸಾಲ	೧೯	೩೮
೩	ಅನುಕೂಲಕರ ಪಾವತಿ	೧೧	೨೨
೪	ಇತರೆ	–	–
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಮೇಲಿನ ದತ್ತಾಂಶದ ಪ್ರಕಾರ ಶೇಕಡಾ ೪೦ರಷ್ಟು ಜನರು ಹೇಳುವ ಪ್ರಕಾರ ಬ್ಯಾಂಕು ಸರಳ ವಿಧಾನಗಳಲ್ಲಿ ಸಾಲ ಸೌಲಭ್ಯವನ್ನು ಒದಗಿಸುವುದು ಅವರು ಬ್ಯಾಂಕನ್ನು ಅವಲಂಬಿತರಾಗಲು ಕಾರಣ. ಶೇಕಡಾ ೩೮ರಷ್ಟು ಜನರು ಕ್ಲಪ್ತ ಸಮಯದಲ್ಲಿ ಹಣಕಾಸಿನ ಪೂರೈಕೆಯಾಗುವುದೇ ತಾವು ಬ್ಯಾಂಕನ್ನು ಅವಲಂಬಿಸಲು ಪ್ರೇರಣೆಯಾಗಿದೆ ಎಂದು ತಿಳಿಸಿದರು. ಹಾಗೂ ಶೇಕಡಾ ೨೨ರಷ್ಟು ಜನರು ತಾವು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕನ್ನು ಅವಲಂಬಿಸಿಸಲು ಕಾರಣ ಕಡಿಮೆ ಬಡ್ಡಿದರ ಹಾಗೂ ಅನುಕೂಲಕರ ಪಾವತಿ ವಿಧಾನ ಎಂದು ತಿಳಿಸಿದರು. ಮೇಲಿನ ದತ್ತಾಂಶದ ಪ್ರಕಾರ ಬ್ಯಾಂಕು ಅಳವಡಿಸಿಕೊಂಡಿರುವ ಸರಳ ವಿಧಾನವು ಗ್ರಾಹಕರು ಬ್ಯಾಂಕನ್ನು ಅವಲಂಬಿಸಿಕೊಳ್ಳಲು ಕಾರಣವಾಗಿದೆ. ತ್ವರಿತಗತಿಯಲ್ಲಿ ಸಾಲ ವಿತರಣೆಯ ಪ್ರಕ್ರಿಯೆಯನ್ನು ನಿರ್ವಹಿಸಲು ಬ್ಯಾಂಕು ಸಾಧ್ಯವಾದಷ್ಟು ಪ್ರಯತ್ನಿಸುತ್ತಿದೆ. ಸಾಲಕ್ಕಾಗಿ ಮನವಿ ಸಲ್ಲಿಸುವ ಸಂದರ್ಭದಲ್ಲಿ ಗ್ರಾಹಕರು ಅನುಸರಿಸಬೇಕಾದ ವಿಧಾನಗಳು ಅತ್ಯಂತ ಸರಳವಾಗಿದೆ. ಅದೇ ರೀತಿ ಕ್ಲಪ್ತ ಸಮಯದಲ್ಲಿ ಸಾಲದ ಪಾವತಿಯೂ ರೈತರ ಬ್ಯಾಂಕನ್ನು ಅವಲಂಬಿಸಲು ಪ್ರಮುಖ ಕಾರಣವಾಗಿದೆ. ಅನುಕೂಲಕರ ಪಾವತಿಯು ಮತ್ತೊಂದು ಮುಖ್ಯ ಕಾರಣವಾಗಿದೆ.

೪.೩.೮: ಮಾಹಿತಿದಾರರ ಆದಾಯದಲ್ಲಿ ಉಂಟಾದ ಹೆಚ್ಚಳದ ವಿವರ

ಕ್ರಮ ಸಂಖ್ಯೆ	ವಿವರ	ಸಂಖ್ಯೆ	ಶೇಕಡವಾರು ಪ್ರಮಾಣ
೧	ಹೌದು	೫೦	೧೦೦
೨	ಇಲ್ಲ	–	–
	ಒಟ್ಟು	೫೦	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ.

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಫಲಾನುಭವಿಗಳಲ್ಲಿ ತಮ್ಮ ಆದಾಯದಲ್ಲಿ ಹಚ್ಚಳವುಂಟಾಗಿದೆಯೇ ಎಂದು ಕೇಳಿದಾಗ ಎಲ್ಲಾ ಮಾಹಿತಿದಾರರೂ ತಮ್ಮ ಆದಾಯದಲ್ಲಿ ಹೆಚ್ಚಳವುಂಟಾಗಿದೆ ಎಂದು ತಿಳಿಸಿದರು.

ಈ ಅಂಕಿ ಅಂಶಗಳಿಂದ ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯದಿಂದ ಫಲಾನುಭವಿಗಳು ಪ್ರಯೋಜನವನ್ನು ಪಡೆದಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಎಲ್ಲ ಮಾಹಿತಿದಾರರು ಹಣಕಾಸಿನ ಸೌಲಭ್ಯವನ್ನು ಪಡೆದು ಸದ್ಬಳಕೆ ಮಾಡುವುದರಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯಬಹುದು ಎಂಬುದು ಕೃಷಿಕ ಫಲಾನುಭವಿಗಳ ಅಭಿಪ್ರಾಯ.

೫. ಇತರ ಮಾಹಿತಿ

ಮಾಹಿತಿದಾರರಲ್ಲಿ ಕೃಷಿಕ ಸಾಲ ಮಾತ್ರವಲ್ಲದೆ ಬೇರೆ ರೀತಿಯ ಸಾಲ ಪಡೆದಿದ್ದೀರಾ? ಎಂದು ಕೇಳಿದಾಗ ಶೇಕಡಾ ೪೬ರಷ್ಟು ಜನರು ಹೌದು ಎಂದೂ, ಶೇಕಡಾ ೬೪ರಷ್ಟು ಜನರು ಇಲ್ಲ ಎಂದೂ ಉತ್ತರಿಸಿದ್ದಾರೆ. ಪ್ರತಿಪಾದಕರು ಕೃಷಿ ಸಾಲದ ಜತೆಗೆ ಗೃಹ ಸಾಲ, ವಾಹನ ಸಾಲ ಹಾಗೂ ಬಂಗಾರದ ಮೇಲೆ ಸಾಲವನ್ನು ಪಡೆದಿರುವುದಾಗಿ ತಿಳಿಸಿದ್ದಾರೆ. ಮಾಹಿತಿದಾರರಲ್ಲಿ ಕೃಷಿಯಲ್ಲಿ ಉನ್ನತಿಯನ್ನು ಗಳಿಸಲು ಅವಕಾಶಗಳಿವೆಯೇ? ಎಂದು ಕೇಳಿದಾಗ ಹೆಚ್ಚಿನ ಮಾಹಿತಿದಾರರು ಹೌದು ಎಂದು ಉತ್ತರಿಸಿದ್ದಾರೆ. ಪ್ರಸಕ್ತ ವಿದ್ಯಮಾನದಲ್ಲಿ ಹೊಸ ತಂತ್ರಜ್ಞಾನ ಮತ್ತು ಸಾಂಸ್ಥಿಕ ಸಂಸ್ಥೆಗಳು ಕೊಡಮಾಡುವ

ಹಣಕಾಸಿನ ಸೌಲಭ್ಯವನ್ನು ಸದ್ಬಳಕೆ ಮಾಡುವುದರಿಂದ ಕೃಷಿಯಲ್ಲಿ ಪ್ರಗತಿ ಸಾಧಿಸಬಹುದು ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

ಕೃಷಿ ಸಾಲ ಸೌಲಭ್ಯವನ್ನು ಒದಗಿಸಿ ರೈತರ ಕ್ಷೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಬಗ್ಗೆ ಇನ್ನಷ್ಟು ವಿವರವಾಗಿ ತಿಳಿಯುವ ಉದ್ದೇಶದಿಂದ ಫಲಾನುಭವಿಗಳ ಜತೆಗೆ ಅನೌಪಚಾರಿಕ ಮಾತುಕತೆಯನ್ನು ನಡೆಸಲಾಯಿತು. ಅವರು ಕೊಟ್ಟಂತಹ ಹೆಚ್ಚುವರಿ ಮಾಹಿತಿ ಇಂತಿವೆ.

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಕಾರ್ಯವೈಖರಿ ಇನ್ನಷ್ಟು ಪರಿಣಾಮಕಾರಿಯಾಗಲು ಫಲಾನುಭವಿಗಳು ನೀಡಿದ ಸಲಹೆಗಳು:

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿದಾರರಲ್ಲಿ ಕೃಷಿಬ್ಯಾಂಕಿನ ಚಟುವಟಿಕೆಗಳು ಇನ್ನಷ್ಟು ಪರಣಾಮಕಾರಿಯಾಗಲು ಸಲಹೆಗಳೇನಾದರೂ ಇವೆಯೇ ಎಂದು ಕೇಳಿದಾಗ ಅವರು ಈ ಕೆಳಗಿನ ಅಭಿಪ್ರಾಯ ನೀಡಿದರು.

೧. ಕರ್ನಾಟಕ ವಿಕಾಸ ಬ್ಯಾಂಕು ತಾವು ಹಮ್ಮಿಕೊಂಡಿರುವ ಯೋಜನೆಗಳ ಬಗ್ಗೆ ನಿರ್ಧಿಷ್ಟ ಮಾನದಂಡಗಳನ್ನಿರಿಸಿ ಅನುಷ್ಠಾನಕ್ಕೆ ತರುವಂತಾಗಬೇಕು ಮತ್ತು ಅವು ಎಲ್ಲರಿಗೂ ತಿಳಿಯುವಂತಾಗಬೇಕು.
೨. ಹೆಚ್ಚಿನ ಗ್ರಾಮೀಣ ಜನರು ಅನಕ್ಷರಸ್ಥರಾಗಿರುವ ಕಾರಣ ಹಳ್ಳಿಗಳ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರಿಗೆ ಮನವರಿಕೆ ಮಾಡಿಕೊಡುವುದು ಉತ್ತಮ.
೩. ಕೃಷಿಕರ ಮಕ್ಕಳಿಗೆ ಕಡಿಮೆ ಬಡ್ಡಿ ದರದಲ್ಲಿ ಶೈಕ್ಷಣಿಕ ಸಾಲವನ್ನು ಒದಗಿಸಿ ಅವರನ್ನು ಉತ್ತಮ ಶಿಕ್ಷಣ ಗಳಿಸುವಲ್ಲಿ ಪ್ರೇರೇಪಿಸಬೇಕು.
೪. ಸಕಾಲಿಕ ಹಾಗೂ ಸಮರ್ಪಕವಾಗಿ ಸಾಲ ಮರುಪಾವತಿ ಮಾಡಿದವರಿಗೆ ಸೂಕ್ತ ಪ್ರೋತ್ಸಾಹ ನೀಡುವ ಯೋಜನೆಯನ್ನು ಅಳವಡಿಸಿಕೊಳ್ಳಬೇಕು.
೫. ಸಬ್ಸಿಡಿ ಸಹಿತ ಸಾಲದ ಬಗ್ಗೆ ಮಾಹಿತಿಯನ್ನು ನೀಡಬೇಕು.

ಅಧ್ಯಾಯ–೫

ಅಧ್ಯಯನದ ಫಲಿತ, ಸಾರಾಂಶ ಮತ್ತು ಉಪಸಂಹಾರ

ಅಧ್ಯಾಯ ೫

ಅಧ್ಯಯನದ ಫಲಿತಗಳು

ಅಧ್ಯಯನದ ಕೊನೆಯ ಅಧ್ಯಾಯವಾಗಿರುವ ಈ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು ನೀಡಲಾಗಿದೆ. ಅಧ್ಯಯನದ ಫಲಿತಾಂಶ, ಸಲಹೆ, ಸೂಚನೆಗಳು, ನೀತಿ ನಿರೂಪಣೆಯ ಮಹತ್ವ ಇನ್ನಷ್ಟು ಸಂಶೋಧನಾ ಸಾಧ್ಯತೆಗಳು ಮತ್ತು ಸಂಕ್ಷಿಪ್ತ ಉಪಸಂಹಾರವನ್ನು ನೀಡಲಾಗಿದೆ.

<u>ಸಾರಾಂಶ:</u> ಗ್ರಾಮೀಣಾಭಿವೃದ್ಧಿಯು ಒಂದು ಬಹುದೊಡ್ಡ ಸವಾಲಾಗಿದೆ. ಸರ್ಕಾರ ಅನೇಕ ರೀತಿಯ ಯೋಜನೆಗಳನ್ನು ಜಾರಿಗೆ ತರುತ್ತಿದ್ದು ಅವುಗಳ ಈ ಸಂಸ್ಥೆಗಳ ಮೂಲಕ ಸಾಕಾರಗೊಳಿಸುವ ಉದ್ದೇಶವನ್ನಿಟ್ಟುಕೊಂಡಿದೆ. ಆದುದರಿಂದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಗ್ರಾಮೀಣ ಜನರ ವಿಕಾಸದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಪಾತ್ರ – ಎಂಬ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯಲ್ಲಿ ಕೈಗೊಂಡ ಅಧ್ಯಯನವಾಗಿದ್ದು, ೪ ಪ್ರಮುಖ ಉದ್ದೇಶಗಳನ್ನು ಒಳಗೊಂಡಿದೆ. ಮೊದಲನೆಯದಾಗಿ, ಕ.ವಿ.ಗ್ರಾ ಬ್ಯಾಂಕಿನ ಕೃಷಿ ಸಾಲ ಯೋಜನೆಯನ್ನು ವಿಶ್ಲೇಷಿಸುವುದು. ಎರಡನೆಯದಾಗಿ, ಸಹ್ಯ ಅಭಿವೃದ್ಧಿಯಲ್ಲಿ ಕೃಷಿ ಸಾಲದ ಪಾತ್ರವನ್ನು ಪರಿಶೀಲಿಸುವುದು. ಮೂರನೆಯದಾಗಿ ಕೃಷಿಕರ ಹಣಕಾಸು ನಿರ್ವಹಣೆಯಲ್ಲಿ ಗ್ರಾಮೀಣ ವಿಕಾಸ ಬ್ಯಾಂಕು ಹೇಗೆ ಸಹಕಾರಿಯಾಗಿದೆ ಎಂಬುದನ್ನು ವಿಶ್ಲೇಷಿಸುವುದು. ನಾಲ್ಕನೆಯದಾಗಿ ಅಧ್ಯಯನ ಕ್ಷೇತ್ರದಲ್ಲಿ ಗ್ರಾಮೀಣ ಬ್ಯಾಂಕಿನಿಂದ ಆಗಿರುವ ಸಾಧನೆ ಮತ್ತು ಆಗಬೇಕಾದ ಕಾರ್ಯಕ್ರಮಗಳ ನೀತಿರೂಪಣೆ ಮತ್ತು ರೂಪು ರೇಷೆಯನ್ನು ಗುರುತಿಸುವುದು.

ಮೂಡಬಿದಿರೆಯ ಬ್ಯಾಂಕಿನ ಫಲಾನುಭವಿಗಳಲ್ಲಿ ಆಯ್ದ ೧೦೦ ಫಲಾನುಭವಿಗಳಿಂದ ಮಾಹಿತಿ ಸಂಗ್ರಹಿಸುವ ಉದ್ದೇಶವಿತ್ತು. ಆದರೆ ಕೇವಲ ೫೦ ಫಲಾನುಭವಿಗಳು ಮಾತ್ರ ಪ್ರತಿಕ್ರಿಯಿಸಿದ್ದಾರೆ. ಹಾಗಾಗಿ ಆ ೫೦ ಫಲಾನುಭವಿಗಳಿಂದ ಪ್ರಶ್ನಾವಳಿ ಮತ್ತು ಸಂದರ್ಶನದ ಮೂಲಕ ವಿವರಗಳನ್ನು ಪಡೆಯಲಾಯಿತು. ಒಟ್ಟು ೫೦ ಫಲಾನುಭವಿಗಳು ಬ್ಯಾಂಕಿನ ಕಾರ್ಯನಿರ್ವಹಣೆಯ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಕ್ಷೇತ್ರಕಾರ್ಯದ ಮೊದಲು ಬ್ಯಾಂಕಿನ ಕಾರ್ಯ ನಿರ್ವಹಣೆ ಮತ್ತು ಫಲಾನುಭವಿಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೆಲವು ಊಹೆಗಳಿದ್ದವು ಗ್ರಾಮೀಣ ಬ್ಯಾಂಕುಗಳು ಕೃಷಿಕರ ಆರ್ಥಿಕ–ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತವೆ ಎಂದು ಭಾವಿಸಲಾಗಿತ್ತು. ಅದರಂತೆ ಅತೀ ಹೆಚ್ಚಿನ ಫಲಾನುಭವಿಗಳು ಬ್ಯಾಂಕಿನ ಪ್ರಯೋಜನವನ್ನು ಪಡೆದು ಆರ್ಥಿಕ ಮತ್ತು

ಸಾಮಾಜಿಕವಾಗಿ ಸದೃಢರಾಗುತ್ತಿರುವುದು ಕಂಡು ಬಂದಿದೆ. ಎರಡನೆಯದಾಗಿ ಗ್ರಾಮೀಣ ಬ್ಯಾಂಕುಗಳ ಸಾಲದ ಯೋಜನೆಗಳು ಕೃಷಿಕರಿಗೆ ಬೇರೆ ಬ್ಯಾಂಕುಗಳಿಗಿಂತ ಅನುಕೂಲಕರವಾಗಿದೆ ಎಂದು ಭಾವಿಸಲಾಗಿತ್ತು. ಅದರಂತೆ ಫಲಾನುಭವಿಗಳು ನೀಡಿದ ಮಾಹಿತಿಯನ್ನು ಗಮನಿಸಿದಾಗ ಗ್ರಾಮೀಣ ಬ್ಯಾಂಕನ್ನು ಅವಲಂಬಿಸಲು ಬ್ಯಾಂಕು ಇತರ ಹಣಕಾಸಿನ ಸಂಸ್ಥೆಗಳಿಗಿಂತ ಅವರಿಗೆ ಅನುಕೂಲಕರವಾದ ರೀತಿಯಲ್ಲಿ ಕಾರ್ಯ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದು ಎಂಬುದೂ ಸ್ಪಷ್ಟವಾಗುತ್ತದೆ.

ಅಧ್ಯಯನದ ಫಲಿತಾಂಶಗಳು:

ಗ್ರಾಮೀಣ ಜನರ ಅದರಲ್ಲೂ ಕೃಷಿಕರ ಸಂಕಷ್ಟಗಳು ಇಂದಿನ ನಾಗರಿಕ ಸಮಾಜ ಮತ್ತು ಸರಕಾರದ ಮುಂದಿರುವ ಬಹುದೊಡ್ಡ ಸವಾಲಾಗಿದೆ. ಈ ನಿಟ್ಟಿನಲ್ಲಿ ಅವರನ್ನು ಆರ್ಥಿಕ, ಸಾಮಾಜಿಕ, ನೈತಿಕ ಮತ್ತು ರಾಜಕೀಯವಾಗಿ ಸದೃಢರನ್ನಾಗಿ ಮಾಡಲು ಪ್ರಬಲ ತಂತ್ರಗಾರಿಕೆಗಳ ಅಳವಡಿಕೆ ಸೂಕ್ತವಾದುದು. ಗ್ರಾಮೀಣ ಬ್ಯಾಂಕುಗಳು ವಿಶೇಷವಾಗಿ ಗ್ರಾಮೀಣ ಜನರ ಹಣಕಾಸಿನ ಅವಶ್ಯಕತೆಗಳನ್ನು ನೀಗಿಸಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಮಹೋನ್ನತ ಉದ್ದೇಶವನ್ನಿಟ್ಟುಕೊಂಡು ಅತ್ಯಂತ ದಕ್ಷವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಈ ವಸ್ತು ಸ್ಥಿತಿಯಲ್ಲಿ ಕೈಗೊಂಡ ನಮ್ಮ ಅಧ್ಯಯನವು ಗ್ರಂಥಗಳು, ಲೇಖನಗಳು, ವಾರ್ಷಿಕ ವರದಿಗಳು, ಅಂತರ್ಜಾಲ ವ್ಯವಸ್ಥೆ ಮತ್ತು ಪೂರ್ವಾಧ್ಯಯನದ ಪರಾಮರ್ಶೆ ಹಾಗೂ ಅದರ ಆಧಾರದಲ್ಲಿ ಮಾಡಲಾದ ವಿಶ್ಲೇಷಣೆ ಮತ್ತು ಕ್ಷೇತ್ರಕಾರ್ಯಧಾರಿತ ಅಧ್ಯಯನವನ್ನು ಒಳಗೊಂಡಿರುತ್ತದೆ. ಆಯ್ದ ಅಧ್ಯಯನದ ವ್ಯಾಪ್ತಿ ಸೀಮಿತವಾಗಿದ್ದರೂ ಅಲ್ಲಿ ಒಳಗೊಂಡಿರಬೇಕಾದ ವಿಷಯಗಳು ಯಾವುದೆನ್ನುವುದು ಸ್ಪಷ್ಟವಿದ್ದ ಕಾರಣ ಕೆಲವು ನಿರ್ಧಿಷ್ಟವಾದ ಮತ್ತು ನಿಖರವಾದ ಅಧ್ಯಯನ ಫಲಿತಾಂಶಗಳನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಯಿತು.

ನಮ್ಮ ಅಧ್ಯಯನದಲ್ಲಿ ಕಂಡು ಬಂದ ವಿಷಯಗಳು ಈ ಕೆಳಗಿನಂತಿವೆ.

ಆಯ್ದ ೫೦ ಫಲಾನುಭವಿಗಳಲ್ಲಿ ಶೇಕಡಾ ೮ ರಷ್ಟು ಫಲಾನುಭವಿಗಳು ೧೮ ರಿಂದ ೨೫ ವರ್ಷ ವಯಸ್ಸಿನ ಒಳಗಿನವರಾಗಿದ್ದಾರೆ. ಶೇಕಡಾ ೨೦ ರಷ್ಟು ಜನರು ೨೬ ರಿಂದ ೩೫ ವರ್ಷ ವಯಸ್ಸಿನವರಾಗಿದ್ದಾರೆ. ಶೇಕಡಾ ೫೬ ರಷ್ಟು ಜನರು ೩೬ ರಿಂದ ೫೦ ವರ್ಷ ವಯಸ್ಸಿನವರಾಗಿದ್ದಾರೆ. ಶೇಕಡಾ ೧೬ ರಷ್ಟು ಜನರು ೫೦ಕ್ಕಿಂತ ಹೆಚ್ಚಿನ ವಯಸ್ಸಿನವರಾಗಿದ್ದಾರೆ.

ಶೇಕಡಾ ೧೪ ರಷ್ಟು ಫಲಾನುಭವಿಗಳಲ್ಲಿ ಅಶಿಕ್ಷಿತರೂ, ಶೇಕಡಾ ೨೦ ರಷ್ಟು ಪ್ರಾಥಮಿಕ ಶಿಕ್ಷಣ ಹೊಂದಿದವರೂ, ಶೇಕಡಾ ೫೬ ರಷ್ಟು ಜನರು ಪ್ರೌಢಶಿಕ್ಷಣ ಪಡೆದವರೂ ಹಾಗೂ ಶೇಕಡಾ ೧೦ ರಷ್ಟು ಜನರು ಪದವೀಧರರೂ ಆಗಿರುವರು ಮತ್ತು ಸ್ನಾತಕೋತ್ತರ ಪದವಿ ಪಡೆದವರ ಸಂಖ್ಯೆ ಶೂನ್ಯವಾಗಿದೆ.

ಶೇಕಡಾ ೮೬ ರಷ್ಟು ಮಾಹಿತಿದಾರರು ವಿವಾಹಿತರೂ, ಶೇಕಡಾ ೧೪ ರಷ್ಟು ಜನರ ಅವಿವಾಹಿತರೂ ಆಗಿರುವರು. ಶೇಕಡಾ ೭೬ ಜನರು ಅವಿಭಕ್ತ ಕುಟುಂಬಸ್ಥರೂ ಹಾಗೂ ಶೇ ೧೨ ರಷ್ಟು ಜನರು ವಿಭಕ್ತ ಕುಟುಂಬದವರೂ ಆಗಿರುವರು. ಶೇಕಡಾ ೫೨ ಜನರು ಹಿಡುವಳಿಯನ್ನು ಪಿತ್ರಾರ್ಜಿತವಾಗಿ ಪಡೆದುಕೊಂಡವರಾಗಿದ್ದಾರೆ. ಶೇಕಡಾ ೨೪ ರಷ್ಟು ಜನರು ಕ್ರಯಕ್ಕೆ ಪಡೆದುಕೊಂಡವರಾಗಿದ್ದಾರೆ. ಮತ್ತು ಶೇ ೮ ರಷ್ಟು ಜನರು ಇತರ ಮೂಲದಿಂದ ಪಡೆದಿದ್ದಾರೆ. ಶೇಕಡಾ ೧೬ ರಷ್ಟು ಜನರು ೧೦೦೦೦ – ೬೦೦೦೦ ಆದಾಯವನ್ನು ಪಡೆಯುವವರಾಗಿದ್ದು ಶೇಕಡಾ ೨೮ – ೬೦೦೦೦ – ೧೦೦೦೦೦, ಶೇಕಡಾ ೩೨ – ೧೦೦೦೦೦ – ೨೦೦೦೦೦, ಶೇ ೨೪ – ೨ ಲಕ್ಷಕ್ಕಿಂತ ಹೆಚ್ಚಿನ ಆದಾಯವನ್ನು ಪಡೆಯುವವರಾಗಿದ್ದಾರೆ.

ಮಾಹಿತಿದಾರರಲ್ಲಿ ಶೇ ೧೬ ರಷ್ಟು ಜನರು ಸಣ್ಣ ಹಿಡುವಳಿದಾರರು ಶೇ ೬೬ ರಷ್ಟು ಜನರು ಮಧ್ಯಮ ಹಿಡುವಳಿದಾರರು ಹಾಗೂ ಶೇಕಡಾ ೧೮ ರಷ್ಟು ದೊಡ್ಡ ಹಿಡುವಳಿದಾರರು ಆಗಿರುವರು.

ಶೇಕಡಾ ೭೮ ರಷ್ಟು ಮಾಹಿತಿದಾರರು ಪುರುಷರು ಹಾಗೂ ಶೇಕಡಾ ೨೨ ರಷ್ಟು ಮಾಹಿತಿದಾರರು ಮಹಿಳೆಯರಾಗಿರುವರು.

ಬ್ಯಾಂಕಿನ ಫಲಾನುಭವಿಗಳಲ್ಲಿ ಶೇಕಡಾ ೪೨ ರಷ್ಟು ಜನರು ಆಹಾರ ಬೆಳೆಯನ್ನು ಬೆಳೆಯುವವರಾಗಿದ್ದು ಶೇ ೫೮ ರಷ್ಟು ಜನರು ವಾಣಿಜ್ಯ ಬೆಳೆಯನ್ನು ಹಾಗೂ ಶೇಕಡಾ ೫೦ ರಷ್ಟು ಜನರು ವಾಣಿಜ್ಯ ಹಾಗೂ ಆಹಾರ ಬೆಳೆ ಎರಡನ್ನೂ ಬೆಳೆಯುವವರಾಗಿದ್ದಾರೆ. ಶೇಕಡಾ ೬೦ – ಮಧ್ಯಾವಧಿ ಸಾಲ, ೩೨– ಅಲ್ಪಾವಧಿ ಸಾಲ ಹಾಗೂ ಶೇಕಡಾ ೮ ರಷ್ಟು ಜನರು ದೀರ್ಘಾವಧಿ ಸಾಲ ಎಂದು ತಿಳಿದು ಬಂದಿದೆ. ಶೇಕಡಾ ೪೦ ಬೆಳೆ ನಿರ್ವಹಣೆ ಉದ್ದೇಶಕ್ಕೆ ಸಾಲ ಪಡೆದಿದ್ದಾರೆ. ಶೇಕಡಾ ೧೦ – ಧಾನ್ಯ ಖರೀದಿಗೆ, ಶೇಕಡಾ ೩೦ ರಷ್ಟು ಜನರು ಕೃಷಿ ಸಲಕರಣೆ ಖರೀದಿ, ಶೇಕಡಾ ೮ ರಷ್ಟು ಜನರು ಭೂಮಿ ಖರೀದಿ ಹಾಗೂ ಶೇಕಡಾ ೧೨ – ಇನ್ನಿತರ ಉದ್ದೇಶಕ್ಕಾಗಿ, ಸಾಲ ಪಡೆದಿರುವರು ಎಂದು ತಿಳಿದು ಬಂದಿದೆ.

ಶೇಕಡಾ ೮೬ ರಷ್ಟು ಜನರು ತಮ್ಮ ಹಣ (ಉಳಿತಾಯ)ವನ್ನು ಉಳಿತಾಯ ಖಾತೆಯಲ್ಲಿ, ಶೇಕಡಾ ೪ – ಚಾಲ್ತಿ ಖಾತೆ, ಶೇಕಡಾ ೮ – ನಿರಖು ಠೇವಣಿ ಹಾಗೂ ಶೇಕಡಾ ೨ – ಮಾಸಿಕ ಠೇವಣಿ. ಶೇಕಡಾ ೨೦

– ಭೂಹಿಡುವಳಿ ಗಾತ್ರದ ಸಮಸ್ಯೆ ಎದುರಿಸುತ್ತಿದ್ದಾರೆ, ಶೇಕಡಾ ೩೬ – ಹಣಕಾಸಿನ ಕೊರತೆ, ಶೇಕಡಾ ೧೮ – ಕಾರ್ಮಿಕರ ಕೊರತೆ, ಶೇಕಡಾ ೧೬ – ಮಾರುಕಟ್ಟೆ ವ್ಯವಸ್ಥೆಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಶೇಕಡಾ ೭೦ ರಷ್ಟು ಜನರು – ಹೊಸಪದ್ಧತಿ, ಶೇ ೩೦ – ಹಳೆಯ ಪದ್ಧತಿ. ಶೇಕಡಾ ೯೮ ರಷ್ಟು ಜನರು ಬ್ಯಾಂಕು ಸರಿಯಾದ ಸಮಯಕ್ಕೆ ಸಾಲ ಒದಗಿಸುವುದಾಗಿ ಅಭಿಪ್ರಾಯಪಟ್ಟರು.

ಶೇಕಡಾ ೯೦ ರಷ್ಟು ಜನರು ಬ್ಯಾಂಕಿನ ಸೇವೆಯು ಉತ್ತಮವಾಗಿದೆ ಎಂದು ಅಭಿಪ್ರಾಯಪಟ್ಟರು. ಶೇಕಡಾ ೨೦ ಜನರು ಸಾಂಸ್ಥಿಕೇತರ, ೩೦ – ಸಾಂಸ್ಥಿಕ ಹಾಗೂ ಶೇ ೫೦ ರಷ್ಟು ಜನರು ಎರಡು ಮೂಲಗಳನ್ನು ಅವಲಂಬಿಸಿದ್ದಾರೆ ಎಂದು ತಿಳಿದು ಬಂದಿದೆ. ಕ್ಷೇತ್ರ ಕಾರ್ಯದಿಂದ ಶೇಕಡಾ (೧೦೦ ಜನರು) ಕ.ವಿ.ಗ್ರಾ ಬ್ಯಾಂಕಿನ ಅವಶ್ಯಕತೆಯಿದೆ ಎಂಬುದು ತಿಳಿದು ಬಂದಿದೆ. ಶೇಕಡಾ ೭೪ ಜನರು – ಬ್ಯಾಂಕಿನ ಸೇವೆಯಿಂದ ಅತಿ ಹೆಚ್ಚು ತೃಪ್ತಿ ಇದೆಯೆಂದು ಶೇಕಡಾ ೧೬ ರಷ್ಟು ಜನರಿಗೆ ಹೆಚ್ಚು ತೃಪ್ತಿ ಇದೆ ಎಂದರ್ಥ. ಶೇ ೧೦ ಜನರಿಗೆ ಸಾಧಾರಣ ತೃಪ್ತಿ ಇದೆಯೆಂದು ತಿಳಿದು ಬಂದಿದೆ.

- ಅಧ್ಯಯನಕ್ಕೆ ಆರಿಸಲ್ಪಟ್ಟ ಬ್ಯಾಂಕಿನಲ್ಲಿ ನಿರಂತರ ಮತ್ತು ಸಂತುಲಿತ ಪ್ರಗತಿ ದಾಖಲಾಗಿದೆ.
- ಗ್ರಾಹಕ ಸೇವೆಗೆ ಹೆಚ್ಚಿನ ಆದ್ಯತೆ, ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಪ್ರಯತ್ನ, ಕೃಷಿಕರಿಗೆ ಹೆಚ್ಚಿನ ಪ್ರೋತ್ಸಾಹ ಕಲ್ಪಿಸುವ ಪ್ರಮುಖ ಚಟುವಟಿಕೆಗಳನ್ನು ಬ್ಯಾಂಕು ಅತ್ಯಂತ ದಕ್ಷವಾಗಿ ಮತ್ತು ಸಮರ್ಪಕವಾಗಿ ನಿರ್ವಹಿಸುತ್ತಿದೆ.
- ಫಲಾನುಭವಿಗಳ ಜತೆಗಿನ ಒಡನಾಟ, ಮಾಹಿತಿ ನೀಡುವ ರೀತಿಯು ಉತ್ತಮವಾಗಿದೆ.
- ಬ್ಯಾಂಕಿನ ಫಲಪ್ರದ ಚಟುವಟಿಕೆಯಿಂದ ಕೃಷಿ ರಂಗದಲ್ಲಿ ಪ್ರಗತಿಯನ್ನು ಸಾಧಿಸುವುದರ ಜತೆಗೆ ಗ್ರಾಮೀಣಾಭಿವೃದ್ಧಿಗೂ ಪೂರಕವಾಗಿದೆ.
- ಮಾತ್ರವಲ್ಲದೆ ಪರೋಕ್ಷವಾಗಿ ಬ್ಯಾಂಕು ತನ್ನ (ಸಫಲತೆಯನ್ನು) ಪ್ರಗತಿಯನ್ನು ಕಾಣಲು ಯಶಸ್ವಿಯಾಗಿದೆ
- ಒಟ್ಟಿನಲ್ಲಿ ಬ್ಯಾಂಕಿನ ಫಲಾನುಭವಿಗಳೆಲ್ಲರೂ ತಮ್ಮ ಆದಾಯದಲ್ಲಿ ಪ್ರಗತಿಯನ್ನು ಕಾಣುವಲ್ಲಿ ಸಫಲರಾಗಿರುವರು ಎಂಬುದು ತಿಳಿದು ಬಂದಿದೆ.

ಸಲಹೆ ನೀತಿ ರೂಪಣೆ

ಪ್ರಗತಿಯೆಂಬುದು ನಿರ್ಧಿಷ್ಟವಾಗಿರದೆ, ಅನಿರ್ಧಿಷ್ಟವಾದ ಪ್ರಕ್ರಿಯೆ ಎಂಬುದನ್ನು ಮನಗಂಡು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಿದೆ ಎಂಬುದನ್ನು ಅರಿತುಕೊಳ್ಳಬೇಕು. ಯಾವುದೇ ಬ್ಯಾಂಕಿನ ದೀರ್ಘಕಾಲದ ಯಶಸ್ವಿಗೆ ಪೂರಕವಾಗಿರು ವಂತವು ಅದರ ಪ್ರಗತಿ ಮತ್ತು ಕಾಲಾಂತರದಲ್ಲಿ ಪ್ರಗತಿಯ ಪ್ರಮಾಣದಲ್ಲಿ ಹೆಚ್ಚಳ ಹಾಗೂ ಗಳಿಸಿದ ಪ್ರಗತಿ ಮತ್ತು ಒಳ್ಳೆಯ ಹೆಸರನ್ನು ಉಳಿಸಿಕೊಳ್ಳುವುದಾಗಿದೆ. ನಮ್ಮ ಅಧ್ಯಯನದ ಆಧಾರದಲ್ಲಿ ಕೆಳಗೆ ನೀಡಲಾದ ಕೆಲವು ಸಲಹೆ ಸೂಚನೆಗಳು ಮತ್ತು ಅದಕ್ಕೆ ಪೂರಕವಾದ ನೀತಿ ನಿರೂಪಣೆಗಳು ಈ ರೀತಿಯ ಪ್ರಗತಿಯ ಗಳಿಸುವಿಕೆಗೆ ಪೂರಕವಾಗಬಲ್ಲವು.

- ಬ್ಯಾಂಕಿನ ಶಾಖೆಗಳನ್ನು ಇನ್ನಷ್ಟು ವಿಸ್ತರಿಸಿಕೊಳ್ಳುವುದು.
- ಶಾಖಾ ಜಾಲದ ವಿಸ್ತರಣೆ ಮೂಲಕ ವಿಸ್ತೃತ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
- ವರ್ಷದ ನಿಗದಿತ ಅವಧಿಯಲ್ಲಿ ಠೇವಣಿ ಸಂಗ್ರಹ, ಸಂಪನ್ಮೂಲ ಸಂಚಯನದ ಪ್ರಯತ್ನಗಳನ್ನು ಮುಂದುವರಿಸಿ ಇನ್ನಷ್ಟು ತೀವ್ರಗೊಳಿಸುವ ಯೋಜನೆಗಳ ರೂಪೀಕರಣ ಅನುಷ್ಠಾನ.
- ಗ್ರಾಹಕರಿಗೆ ಅಗತ್ಯವಿದ್ದಲ್ಲಿ ಸೂಕ್ತ ತರಬೇತಿ ನೀಡುವುದು, ಉದಾಹರಣೆಗೆ ಪಡೆದ ಹಣಕಾಸಿನ ಸೌಲಭ್ಯವನ್ನು ಸದ್ಬಳಕೆ ಮಾಡುವಲ್ಲಿ ಬೇಕಾಗುವ ಮಾಹಿತಿ ನೀಡುವುದು.
- ಮುಖ್ಯವಾಗಿ ಗ್ರಾಮೀಣ ಬ್ಯಾಂಕುಗಳು ಇಘಿಥಿಘಿಜ ಸಮಸ್ಯೆಯನ್ನು ಎದುರಿಸುತ್ತಿವೆ. ಅದನ್ನು ನಿವಾರಿಸಲು ಸೂಕ್ತವಾಗುವ ಕ್ರಮಗಳನ್ನು ತೆಗೆದುಕೊಳ್ಳುವುದು.
- ನಿರಂತರ ಜನರ ಸಂಪರ್ಕ ಮತ್ತು ಬ್ಯಾಂಕಿನ ಕಾರ್ಯ ಚಟುವಟಿಕೆಗೆ ಯೋಜನೆಗಳ ಬಗ್ಗೆ ಗ್ರಾಮೀಣ ಜನರಲ್ಲಿ ಅರಿವನ್ನು ಮೂಡಿಸುವುದು.

ಭವಿಷ್ಯದ ಸಂಶೋಧನಾ ಸಾಧ್ಯತೆಗಳು

ಸಂಶೋಧನೆ ಎನ್ನುವುದು ನಿರಂತರವಾಗಿ ನಡೆದುಕೊಂಡು ಹೋಗುವಂತಹ ಅಭೂತಪೂರ್ವ ಪ್ರಕ್ರಿಯೆಯಾಗಿದೆ. ಸಂಶೋಧನಾ ಅಧ್ಯಯನವು ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಮುಂದೆ ನಡೆಸಬಹುದಾದ ಇನ್ನಷ್ಟು ಸಂಶೋಧನಾ ಸಾಧ್ಯತೆಗಳನ್ನು ಪೂರ್ವಭಾವಿಯಾಗಿ ತಿಳಿಸಿಕೊಡುವಂತಿರಬೇಕು. ಈ ಹಿನ್ನೆಲೆಯಲ್ಲಿ ನಮ್ಮ ಅಧ್ಯಯನಕ್ಕೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ತೆಗೆದುಕೊಳ್ಳಬಹುದಾದ ಇನ್ನಷ್ಟು ಅಧ್ಯಯನದ ಅವಕಾಶಕ್ಕೆ ಪ್ರಮುಖವಾದ ವಿಚಾರಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

- ಬ್ಯಾಂಕಿನ ಕಾರ್ಯವೈಖರಿಯ ಬಗ್ಗೆ ಇನ್ನಷ್ಟು ಆಳವಾದ ಮತ್ತು ಪರಿಣಾಮಕಾರಿಯಾದ ಅಧ್ಯಯನವನ್ನು ನಡೆಸಲು ಸಾಧ್ಯವಾಗುವುದು ಹೆಚ್ಚಿನ ಕಾಲಾವಧಿಯನ್ನು ಪಡೆದರೆ ಮಾತ್ರ ಸಾಧ್ಯವಾಗಬಹುದು ಆದುದರಿಂದ ಪ್ರಸ್ತುತ ವಿಷಯವನ್ನೂ ಅಧಿಕ ಸಮಯಾವಧಿಗೆ ಮೀಸಲಟ್ಟರೆ ಬ್ಯಾಂಕಿನ ಕಾರ್ಯಕ್ಷೇತ್ರದ ಬಗ್ಗೆ ಹೆಚ್ಚುವರಿ ಮಾಹಿತಿಯನ್ನು ತಿಳಿದುಕೊಳ್ಳಬಹುದು.
- ಕೃಷಿಕರಿಗೆ ಸೀಮಿತವಾಗಿರುವ ಸೌಲಭ್ಯದ ವಿಶ್ಲೇಷಣೆ ಜತೆಗೆ ಬ್ಯಾಂಕಿನ ಇತರ ಸೇವೆಯ ಅಧ್ಯಯನವನ್ನೂ ನಡೆಸಿದಲ್ಲಿ ಒಟ್ಟು ಅಭಿವೃದ್ಧಿಯ ಸ್ಥೂಲ ಚಿತ್ರಣವನ್ನು ಪಡೆದುಕೊಳ್ಳಲು ಸಾಧ್ಯವಾಗಬಹುದು.

ಉಪಸಂಹಾರ

ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಪಾತ್ರ ಒಂದು ಅಧ್ಯಯನ ಮೂಡಬಿದಿರೆ ಕ್ಷೇತ್ರವನ್ನು ಅನುಲಕ್ಷಿಸಿ ಎಂಬ ಈ ಅಧ್ಯಯನವು ಮೂಡಬಿದಿರೆ ವಲಯದ ಬ್ಯಾಂಕನ್ನು ಪ್ರತ್ಯಕ್ಷವಾಗಿ ಕಂಡು ಅಲ್ಲಿನ ಫಲಾನುಭವಿಗಳನ್ನು ಮತ್ತು ಬ್ಯಾಂಕಿನ ಸಿಬ್ಬಂದಿಗಳನ್ನು ಸಂಪರ್ಕಿಸಿ ಅವರಿಂದ ವಿಧಿಪೂರ್ವಕವಾಗಿ ಮಾಹಿತಿಯನ್ನು ಸಂಗ್ರಹಿಸಿ ಕೈಗೊಂಡ ಅಧ್ಯಯನವಾಗಿರುತ್ತದೆ. ಅನೇಕ ಇತಿ ಮಿತಿ, ಲೋಪದೋಷಗಳ ಹೊರತಾಗಿಯೂ ಇಲ್ಲಿ ನಡೆಸಿದ ಕ್ಷೇತ್ರಕಾರ್ಯ ಮತ್ತು ಪಡೆದ ಮಾಹಿತಿ ತನ್ನ ಪ್ರತ್ಯೇಕತೆಯನ್ನು, ಅನನ್ಯತೆಯನ್ನು ಉಳಿಸಿಕೊಳ್ಳುತ್ತದೆ. ರೈತರು ದೇಶದ ಆಸ್ತಿ. ಅವರ ಶ್ರೇಯೋಭಿವೃದ್ಧಿಯಿಂದ ದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಈ ನಿಟ್ಟಿನಲ್ಲಿ ಕೃಷಿಕರ ಮುನ್ನಡೆಗಾಗಿ ಪೂರಕವಾಗುವಂತಹ ವಾತಾವರಣ ನಿರ್ಮಾಣಗೊಳಿಸುವಲ್ಲಿ ಎಲ್ಲಾ ಪ್ರಯತ್ನಗಳು ನಡೆಯಬೇಕು. ಹಾಗಾದಲ್ಲಿ ಮಾತ್ರ ಸಮಾಜೋ ಆರ್ಥಿಕ ಅಭಿವೃದ್ಧಿಯ ಸಿದ್ಧಾಂತ ಗಳು ನೀತಿ–ರೂಪಣೆಗಳು ಸಾಕಾರಗೊಳ್ಳುವುದು.

ಅನುಬಂಧಗಳು

ಅನುಬಂಧ ೧ ಕೋಷ್ಟಕಗಳ ಪಟ್ಟಿ

ಕ್ರಮ ಸಂಖ್ಯೆ	ಕೋಷ್ಟಕ	ವಿಷಯ
೧	ಕೋಷ್ಟಕ ೨೧	ಜನಸಂಖ್ಯಾ ವಿವರ ೨೦೦೧ರ ಜನಗಣತಿ ಪ್ರಕಾರ
೨	ಕೋಷ್ಟಕ ೨೨	ಜನಸಂಖ್ಯಾ ವಿವರ ೨೦೧೧ರ ಜನಗಣತಿ ಪ್ರಕಾರ
೩.	ಕೋಷ್ಟಕ ೪.೧.೧	ಮಾಹಿತಿದಾರರ ವಯೋಮಾನ ವರ್ಗೀಕರಣ
೪	ಕೋಷ್ಟಕ ೪.೨.೧	ಸದಸ್ಯರ ವಿದ್ಯಾರ್ಹತೆಯ ವಿವರ
೫	ಕೋಷ್ಟಕ ೪.೩.೧.	ವೈವಾಹಿಕ ಸ್ಥಾನಮಾನದ ವಿರ
೬	ಕೋಷ್ಟಕ ೪.೪.೧.	ಕೌಟುಂಬಿಕ ಹಿನ್ನಲೆ
೭	ಕೋಷ್ಟಕ ೪.೫.೧.	ವಾರ್ಷಿಕ ಆದಾಯದ ವಿವರ
೮	ಕೋಷ್ಟಕ ೪.೬.೧.	ಮಾಹಿತಿದಾರರ ಲಿಂಗದ ವಿವರ
೯	ಕೋಷ್ಟಕ ೪.೧.೨.	ಹಿಡುವಳಿಯ ಮೂಲದ ವಿವರ
೧೦	ಕೋಷ್ಟಕ ೪.೨.೨.	ಮಾಹಿತಿದಾರರ ಜಮೀನಿನ ವಿವರ
೧೧.	ಕೋಷ್ಟಕ ೪.೩.೨.	ಮಾಹಿತಿದಾರರು ಬೆಳೆಯುವ ಬೆಳೆಯ ವಿಧಾನದ ವಿವರ
೧೨.	ಕೋಷ್ಟಕ ೪.೪.೨.	ಮಾಹಿತಿದಾರರು ಪಡೆದ ಸಾಲದ ವಿವರ
೧೩.	ಕೋಷ್ಟಕ ೪.೫.೨.	ಸಾಲ ಪಡೆದಿರುವ ಉದ್ದೇಶ
೧೪.	ಕೋಷ್ಟಕ ೪.೬.೨.	ರೈತರು ಎದುರಿಸುವ ಸಮಸ್ಯೆಗಳ ವಿವರ
೧೫.	ಕೋಷ್ಟಕ ೪.೭.೨.	ಕೃಷಿಗೆ ಬಳಸುವ ವಿಧಾನದ ಬಗ್ಗೆ ವಿರ
೧೬	ಕೋಷ್ಟಕ ೪.೮.೨.	ಮಾಹಿತಿದಾರರು ಅನುಸರಿಸುತ್ತಿರುವ ಬೇಸಾಯ

		ಕ್ರಮದ ವಿವರ
೧೭	**ಕೋಷ್ಟಕ ೪.೩.೧.**	ಠೇವಣಿ ಸ್ವರೂಪ/ಪ್ರಕಾರದ ವಿವರ
೧೮	**ಕೋಷ್ಟಕ ೪.೩.೨.**	ಬ್ಯಾಂಕು ನೀಡುವ ಸಾಲ ಸೌಲಭ್ಯದ ವಿವರ
೧೯	**ಕೋಷ್ಟಕ ೪.೩.೩.**	ಬ್ಯಾಂಕಿನ ಸೇವೆಯಲ್ಲಿರುವ ದಕ್ಷತೆಯ ಬಗ್ಗೆ ಮಾಹಿತಿ
೨೦	**ಕೋಷ್ಟಕ ೪.೩.೪.**	ಕೃಷಿ ಸಾಲಕ್ಕಾಗಿ ಮಾಹತಿದಾರರು ಅವಲಂಬಿಸಿದ ಮೂಲದ ವಿವರ
೨೧	**ಕೋಷ್ಟಕ ೪.೩.೫.**	ಕೃಷಿಕರಿಗೆ ಗ್ರಾಮೀಣ ವಿಕಾಸ ಬ್ಯಾಂಕಿನ ಅವಶ್ಯಕತೆಯ ವಿವರ
೨೨	**ಕೋಷ್ಟಕ ೪.೩.೬**	ಮಾಹಿತಿದಾರರಿಗೆ ಬ್ಯಾಂಕಿನ ಸೇವೆಯಿಂದ ಒರಿವ ತೃಪ್ತಿಯ ಬಗ್ಗೆ ವಿವರ
೨೩	**ಕೋಷ್ಟಕ ೪.೩.೭**	ಕರ್ನಾಟಕ ವಿಕಾಸ ಬ್ಯಾಂಕನ್ನು ಅವಲಂಭಿಸಲು ಕಾರಣ
೨೪	**ಕೋಷ್ಟಕ ೪.೩.೮**	ಮಾಹಿತಿದಾರರ ಆದಾಯದಲ್ಲಿ ಉಂಟಾದ ಹೆಚ್ಚಳದ ವಿವರ

ಅನುಬಂಧ ೨ – ಪ್ರಶ್ನಾವಳಿ

ಕೃಷಿಕರ ಆರ್ಥಿಕ ನಿರ್ವಹಣೆಯಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಪಾತ್ರ: ಮೂಡಬಿದಿರೆ ಕ್ಷೇತ್ರವನ್ನು ಅನುಲಕ್ಷಿಸಿ – ಒಂದು ಅಧ್ಯಯನ –

ಪೀಠಿಕೆ: ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶ ಕೃಷಿಕರ ಆರ್ಥಿಕ ಸ್ಥಿತಿಗತಿಯನ್ನು ಅರಿತುಕೊಳ್ಳುವುದು ಮತ್ತು ಕರ್ನಾಟಕ ವಿಕಾಸ ಬ್ಯಾಂಕು ಅವರಿಗೆ ಹೇಗೆ ನೆರವಾಗುತ್ತದೆ ಎಂಬುದನ್ನು ಪರಾಮರ್ಶೆ ಮಾಡುವುದು.

ಸೂಚನೆಗಳು:

ಈ ಪ್ರಶ್ನಾವಳಿಯಲ್ಲಿ ವಿವಿಧ ಪ್ರಕಾರದ ಪ್ರಶ್ನೆಗಳಿವೆ. ಕೆಲವು ಪ್ರಶ್ನೆಗಳಿಗೆ ಚುಟುಕಾಗಿ ಉತ್ತರಿಸಬಹುದು ಇನ್ನು ಕೆಲವು ಪ್ರಶ್ನೆಗಳಿಗೆ ಕೊಟ್ಟ ಉತ್ತರದಲ್ಲಿ ಸರಿಯಾದುದನ್ನು ಉತ್ತರಿಸಿದರಾಯಿತು.

- ❖ ಈ ಸಮೀಕ್ಷೆಯನ್ನು ಕೇವಲ ಅಧ್ಯಯನ ಉದ್ದೇಶಕ್ಕಾಗಿ ಮಾತ್ರ ಮಾಡಲಾಗುತ್ತಿದೆ.
- ❖ ನೀವು ವ್ಯಕ್ತ ಪಡಿಸಿರುವ ಅಭಿಪ್ರಾಯಗಳ ಗೌಪ್ಯತೆಯನ್ನು ಕಾಪಾಡಲಾಗುವುದು.
- ❖ ನಿಮ್ಮ ಇತರೆ ಉಪಯುಕ್ತ ಸಲಹೆ ಮತ್ತು ಪೂರಕ ಅಭಿಪ್ರಾಯವಿದ್ದಲ್ಲಿ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು. ನಿಮ್ಮ ಸಹಕಾರಕ್ಕೆ ಅನಂತ ಕೃತಜ್ಞತೆಗಳು.

ಭಾಗ – ೧– ಸಾಮಾನ್ಯ ಮಾಹಿತಿ:

೧. ಹೆಸರು:

೨. ವಿಳಾಸ:

೩. ಉದ್ಯೋಗ:

೪. ಶಿಕ್ಷಣ:

ಅ)ಅಶಿಕ್ಷಿತರು

ಆ)ಪ್ರಾಥಮಿಕ ಶಿಕ್ಷಣ

ಇ)ಪ್ರೌಢಶಿಕ್ಷಣ

ಈ)ಪದವಿ

ಉ)ಸ್ನಾತಕೋತ್ತರ ಪದವಿ

೫. ಲಿಂಗ: ಅ) ಪುರುಷ ಆ) ಸ್ತ್ರೀ

೬. ವೈವಾಹಿಕ ಸ್ಥಾನಮಾನ: ಅ)ವಿವಾಹಿತರು ಆ)ಅವಿವಾಹಿತರು

೭. ಕೌಟುಂಬಿಕ ಹಿನ್ನಲೆ: ಅ)ಅವಿಭಕ್ತ ಕುಟುಂಬ ಆ)ವಿಭಕ್ತ ಕುಟುಂಬ

೮. ಕುಟುಂಬದ ವಾರ್ಷಿಕ ಆದಾಯ:

೧. ೬೦೦೦ – ೧೦೦೦೦ ೨. ೧೧೦೦೦ – ೧೫೦೦೦

೩. ೧೬೦೦೦ – ೨೦೦೦೦ ೪. ೨೦೦೦೦ ಕ್ಕಿಂತ ಹೆಚ್ಚು

೯. ಒಟ್ಟು ಜಮೀನು ಎಷ್ಟು? ಅದರಲ್ಲಿ ಕೃಷಿ ಜಮೀನು ಎಷ್ಟು?

ಭಾಗ–೨ ಭೂ ಹಿಡುವಳಿ ಮತ್ತು ಬೆಳೆಗೆ ಸಂಬಂಧಿಸಿದ ವಿವರ

೧೦. ಬೆಳೆಯುವ ಬೆಳೆಗಳು ಯಾವುವು?

೧೧. ಮಾಹಿತಿದಾರರ ಭೂಹಿಡುವಳಿಯ ಗಾತ್ರ

ಅ) ಸಣ್ಣ ಹಿಡುವಳಿದಾರ (ಒಂದು ಎಕ್ರೆಗಿಂತ ಕಡಿಮೆ)

ಆ) ಮಧ್ಯಮ ಹಿಡುವಳಿದಾರ (ಒಂದರಿಂದ ಎರಡು ಎಕ್ರೆ)

ಇ) ದೊಡ್ಡ ಹಿಡುವಳಿದಾರ (ಎರಡು ಎಕ್ರೆಗಿಂತ ಜಾಸ್ತಿ)

೧೨. ದೊಡ್ಡ ಹಿಡುವಳಿದಾರ (ಎರಡು ಎಕ್ರೆಗಿಂತ ಜಾಸ್ತಿ)

ಅ) ಪಿತ್ರಾರ್ಜಿತ

ಆ) ಭೂಮಸೂದೆಯಿಂದ ಪಡೆದದ್ದು

ಇ) ಕ್ರಯಕ್ಕೆ ಪಡಕೊಂಡದ್ದು

೧೩. ಬೆಳೆಯ ವಿಧಾನ

ಅ) ಆಹಾರ ಬೆಳೆ

ಆ) ವಾಣಿಜ್ಯ ಬೆಳೆ

೧೪. ಯಾವ ಬೆಳೆ ವಿಧಾನಕ್ಕೆ ಹೆಚ್ಚು ಮಹತ್ವ ನೀಡುತ್ತೀರಿ?

ಅ) ಆಹಾರ ಬೆಳೆ

ಆ) ವಾಣಿಜ್ಯ ಬೆಳೆ

೧೫. ನೀವು ಯಾವ ರೀತಿಯ ಬೇಸಾಯ ಕ್ರಮ ಅನುಸರಿಸುತ್ತೀರಿ?

ಅ) ಹಳೆಯ ಪದ್ಧತಿ

ಆ) ಹೊಸ ಪದ್ಧತಿ

೧೬. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?

ಅ) ಭೂಹಿಡುವಳಿಯ ಗಾತ್ರ

ಆ) ಹಣಕಾಸಿನ ವ್ಯವಸ್ಥೆ

ಇ) ಕೈಗಾರಿಕೆಗಳು

ಈ) ಕಾರ್ಮಿಕರ ಕೊರತೆ

ಉ) ತಂತ್ರಜ್ಞಾನದ ಕೊರತೆ

ಊ) ಮಾರುಕಟ್ಟೆ ವ್ಯವಸ್ಥೆ

ಎ) ನೀರಾವರಿ ಸೌಲಭ್ಯ

ಏ) ಇತರ

ಭಾಗ–೩ ಸಾಲದ ವಿವರ

೧೭. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಕೃಷಿ ಸಾಲ ಯೋಜನೆಗಳಿಂದ ನಿಮಗೆ ತೃಪ್ತಿಯಿದೆಯೇ?

ಅ) ಅತಿ ಹೆಚ್ಚು ತೃಪ್ತಿಯಿದೆ

ಆ) ಹೆಚ್ಚು ತೃಪ್ತಿಯಿದೆ

ಇ) ಸಾಧಾರಣ ತೃಪ್ತಿಯಿದೆ

ಈ) ತೃಪ್ತಿಯಿಲ್ಲ.

೧೮, ನೀವು ಅವಲಂಬಿಸಿದ ಸಾಂಸ್ಥಿಕ ಮೂಲಗಳು ಯಾವುವು?

ಅ) ವಾಣಿಜ್ಯ ಬ್ಯಾಂಕುಗಳು

ಆ) ಸಹಕಾರಿ ಬ್ಯಾಂಕುಗಳು

ಇ) ಗ್ರಾಮೀಣ ವಿಕಾಸ ಬ್ಯಾಂಕುಗಳು

ಈ) ಇತರ

೧೯. ನೀವು ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕನ್ನು ಅವಲಂಬಿಸಲು ಕಾರಣ.

ಅ) ಸರಳ ವಿಧಾನಗಳು

ಆ) ಕ್ಲಪ್ತ ಸಮಯದಲ್ಲಿ ಸಾಲ ಸೌಲಭ್ಯ

ಇ) ಅನುಕೂಲಕರ ಮರು ಪಾವತಿ

ಈ) ಇತರ

೨೦. ನೀವು ಪಡೆದುಕೊಂಡ ಸಾಲದ ಮೊತ್ತ ಎಷ್ಟು?

ಅ) ೫೦,೦೦೦ ದಿಂದ ೨ ಲಕ್ಷ

ಆ) ೨ ರಿಂದ ೫ ಲಕ್ಷ

ಇ) ೫ ರಿಂದ ೧೦ ಲಕ್ಷ

ಈ) ೧೦ ಲಕ್ಷಕ್ಕಿಂತ ಹೆಚ್ಚು

೨೧. ಅದಕ್ಕೆ ಹೇರಲಾಗುವ ಬಡ್ಡಿ ದರ ಎಷ್ಟು?

೨೨. ನೀವು ಯಾವ ಉದ್ದೇಶಕ್ಕಾಗಿ ಸಾಲ ಪಡೆದಿದ್ದೀರಿ?

ಅ) ಭೂಮಿ ಖರೀದಿ

ಆ) ಬೆಳೆಯ ನಿರ್ವಹಣೆ

ಇ) ನೀರಾವರಿ ಉದ್ದೇಶ

ಈ) ಯಂತ್ರೋಪಕರಣಗಳ ಖರೀದಿ ಇತರ

೨೩. ಸಾಲ ಮರು ಪಾವತಿ ಮಾಡುವ ರೀತಿ ತಿಳಿಸಿ.

೨೪, ಗ್ರಾಮೀಣ ವಿಕಾಸ ಬ್ಯಾಂಕಿನ ಸಾಲ ಸೌಲಭ್ಯ ನಿಮ್ಮ ಹಣಕಾಸಿನ ಅವಶ್ಯಕತೆಯನ್ನು ಪೂರೈಸಿದೆಯೇ?

ಅ) ಹೌದು ಆ) ಇಲ್ಲ

೨೫. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು ಒದಗಿಸುವ ಯೋಜನೆಗಳಲ್ಲಿ ನಿಮಗೆ ತೃಪ್ತಿ ಇದೆಯೇ?

ಅ) ಹೌದು ಆ) ಇಲ್ಲ

೨೬. ಪಡೆದ ಸಾಲವನ್ನು ಸರಿಯಾಗಿ ವಿನಿಯೋಗಿಸುವಲ್ಲಿ ಬ್ಯಾಂಕು ಸಹಾಯಕವಾಗಿದೆಯೇ? ಇನ್ನಿತರ ಸೌಲಭ್ಯವನ್ನು ಒದಗಿಸುತ್ತದೆಯೇ? ಅಂದರೆ

ಅ) ಗ್ರಾಹಕ ಶಿಕ್ಷಣ

ಆ) ಉಪಕರಣಗಳ ಕೊಂಡುಕೊಳ್ಳುವಲ್ಲಿ ಸಹಾಯ

ಇ) ಬೆಳೆಯ ನಿರ್ವಹಣೆ

ಈ) ಮಾರುಕಟ್ಟೆ ವ್ಯವಸ್ಥೆ

೨೭. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಕೃಷಿಸಾಲ ಯೋಜನೆಯಿಂದ ನಿಮ್ಮ ಆದಾಯದಲ್ಲಿ ಹೆಚ್ಚಳವುಂಟಾಗಿದೆಯೇ?


ಅನುಬಂಧ–೩

ಕರ್ನಾಟಕದ ನಕ್ಷೆ



ಅನುಬಂಧ–೪

ದಕ್ಷಿಣ ಕನ್ನಡದ ನಕ್ಷೆ



ಪರಾಮರ್ಶನ ಗ್ರಂಥಗಳು:

೧. ಕೃಷ್ಣಮೂರ್ತಿ ಹೆಚ್.ಆರ್ (೨೦೧೧) "ಭಾರತದ ಆರ್ಥಿಕ ವ್ಯವಸ್ಥೆ" ಸ್ವಪ್ನ ಬುಕ್ ಹೌಸ್, ಬೆಂಗಳೂರು.

೨. ಚಂದ್ರಶೇಖರ ಟಿ.ಆರ್ (೨೦೦೬) ಕರ್ನಾಟಕ ಆರ್ಥಿಕ ಪಥ ಪ್ರಸಾರಾಂಗ : ಕನ್ನಡ ವಿಶ್ವವಿದ್ಯಾಲಯ್ ಹಂಪಿ (ಸಂಪಾದಕರು ಪ್ರೊ. ಹಿ.ಟಿ. ಬೋರಲಿಂಗಯ್ಯ) ೧೯೫೬–೨೦೦೬, ೨೦೦೭.

೩. ಕೃಷ್ಣಯ್ಯ ಗೌಡ ಹೆಚ್.ಆರ್. (೧೯೯೫), "ಬ್ಯಾಂಕೋದ್ಯಮ ಮತ್ತು ಹಣಕಾಸು, ಚೇತನ ಬುಕ್ ಹೌಸ್ ಮೈಸೂರು.

೪. ಚಂದ್ರ ಪೂಜಾರಿ ಎಂ. (೨೦೧೧), "ಸಂಶೋಧನೆ – ಏನು? ಏಕೆ? ಹೇಗೆ" ಪ್ರಸಾರಾಂಗ : ರನ್ನ ವಿಶ್ವವಿದ್ಯಾಲಯ ಹಂಪಿ.

೫. ಚಂದ್ರ ಪೂಜಾರಿ ಎಂ. (೨೦೧೧) : "ಸಮಾಜ ಸಂಶೋಧನೆ" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೬. ಶಿಶಿಲ ಪ್ರಭಾಕರ ಬಿ. (೨೦೦೨), ಭಾರತದ ಆರ್ಥಿಕಾಬಿವೃದ್ಧಿ, ಎಸ್.ಎಸ್. ಭಾವಿಕಟ್ಟೆ ಪ್ರಕಾಶನ ಗುಲ್‌ಬರ್ಗಾ.

೭. ಬೋರಾಲಿಂಗಯ್ಯ ಹಿ.ಟಿ. (ಸಂ) (೨೦೦೭) ಭಾರತದ ಆರ್ಥಿಕಾಬಿವೃದ್ಧಿ ಎಸ್.ಎಸ್. ಭಾವಿಕಟ್ಟೆ ಪ್ರಕಾಶನ ಗುಲ್‌ಬರ್ಗಾ.

೮. ಹನ್ಸ್. ವಿ. ಬಾಸಿಲ್(೨೦೦೩) : ಮೇಕಿಂಗ್ ಇಂಡಿಯನ್ ಅಗ್ರಿಕಲ್‌ಚರ್ ಇನ್‌ಕ್ಲೂಸಿವ್ – ಅಪೋರ್‌ಚೂನಿಟಿಸ್ ಅಂದ್ ಅಪ್ರೋಚಸ್.

೯. ಸಿದ್ದರಾಜು. ಐ.ಜಿ. ಮತ್ತು ರಮೇಶ್ (ಸಂ), ಇನ್‌ಕ್ಲೂಸಿವ್ ಅಗ್ರಿಕಲ್‌ಚರಲ್ ಡೆವೆಲಪ್‌ಮೆಂಟ್ – ನ್ಯೂ ಡೈಮೆನ್‌ಶನ್ಸ್ (ಪುಟಗಳು: ೩–೧೩), ಎಪಿಹೆಚ್ ಪಬ್ಲಿಕೇಷನ್ ಕಾರ್ಪೋರೇಷನ್, ನ್ಯೂಡೆಲ್ಲಿ.

೧೦. ಸಿಂಗ್. ಜೆ.ಪಿ (೧೯೮೫), ರೋಲ್ ಆಫ್ ಇಸ್ಟಿಟುಷನಲ್ ಫೈನಾನ್ಸಿಸ್ ಅಗ್ರಿಕಲ್ಚರ್ ಆಶಿಷ್ ಪಬ್ಲಿಶಿಂಗ್ ಹೌಸ್ ಪಂಜಾಬಿ ಭಾಗ್ ನ್ಯೂಡೆಲ್ಲಿ.

೧೧. ಚಕ್ರವರ್ತಿ ಎಂ.ಎಲ್. ಮತ್ತು ಸಿಂಗ್ ಜೆ.ಪಿ (೧೯೮೮), ರೂರಲ್ ಬ್ಯಾಂಕಿಂಗ್, ಆಶಿಷ್ ಪಬ್ಲಿಶಿಂಗ್ ಹೌಸ್ ನ್ಯೂಡೆಲ್ಲಿ.

೧೨. ವಾಸುದೇವನ್ ಘೋಷ್ (೧೯೮೬), ಅಗ್ರಿಕಲ್ಚರಲ್ ಎಕನಾಮಿಕ್ಸ್ ಅಂಡ್ ಪ್ರಾಬ್ಲಮ್ಸ್ ಇನ್ ಇಂಡಿಯಾ, ನಿವ್ ಹೈಟ್ಸ್.

೧೩. ಸಿ.ಆರ್. ಕೊಥಾರಿ (೧೯೯೧), ರೂರಲ್ ಡೆವಲಫ್‌ಮೆಂಟ್ ಅಡ್ಮಿನಿಸ್ಟ್ರೇಷನ್ ಅಂಡ್ ವೆಲ್ಫಾರ್, ಮನಕ್ ಪಬ್ಲಿಕೇಷನ್ಸ್.

೧೪. ಮೆಮೊರಿಯಾ, ಅಗ್ರಿಕಲ್ಚರಲ್ ಪ್ರಾಬ್ಲಮ್ಸ್ ಆಫ್ ಇಂಡಿಯಾ ಇಂಟರ್ ನ್ಯಾಷನಲ್ ಬುಕ್ ಹೌಸ್, ಡೆಲ್ಲಿ.

೧೫. ದೇಸಾಯಿ ನಿತಿನ್ (೧೯೮೧) : ಬ್ಯಾಕ್ವರ್ಡ್ ರೀಜನ್ಸ್ ಮತ್ತು ಡೆವಲಫ್‌ಮೆಂಟ್ ಪ್ಲಾನಿಂಗ್ ದಿ ಇಂಡಿಯನ್ ಎಕ್ಸ್ಪೀರಿಯನ್ಸ್ ಇನ್ ನಾಷನಲ್ ಡೆವಲಪ್‌ಮೆಂಟ್ ಅಂಡ್ ರೀಜನಲ್ ಪಾಲಿಸಿ.

೧೬. ಕರಮ್ ಪಾಲ್ ಮತ್ತು ಜಸ್ವೀರ್ ಸಿಂಗ್ (೨೦೦೬), ಎಫಿಸಿಯನ್ಸೀ ಆಫ್ ರೀಜನಲ್ ರೂರಲ್ ಬ್ಯಾಂಕ್ಸ್ ಇನ್ ಇಂಡಿಯಾ – ಎ. ಕನ್ವೆನ್ಷನಲ್ ಅನಾಲಿಸಿಸಿ, ಜೆಐಎಂಎಸ್‌ಎಮ್, ಇಂಡಿಯನ್ ಜರ್ನಲ್ ಕಾಮ್.

೧೭. ಕುಮಾರ್. ಬಿ.ಪಿ. (೧೯೯೫), ರೀಜನಲ್ ರೂರಲ್ ಬ್ಯಾಂಕ್ಸ್–ಆನ್ ಅನಾಲೈಸ್ ವಿತ್ ರೆಫರೆನ್ಸ್ ಟು ಎಫ್ ವಿಸಾ–ಅ–ವಿಸ್ ಇಂಡಿಯಾ ಕುರುಕ್ಷೇತ್ರ (ಎಕ್ಷೆ ಎಲ್ ಐಐಐ).

೧೮. ಶಿವಪ್ಪ ಎಚ್. (೨೦೦೫) ಅಗ್ರಿಕಲ್ಚರ್ ಕ್ರೆಡಿಟ್ ಯುಟಿಲೈಷೇಶನ್ ಪಾಟರ್ನ್ ಆಂಡ್ ಇಟ್ಸ್ ರೀಪೇಮೆಂಟ್ ಪರ್ಫಾರ್ಮೆನ್ಸ್ ಆಫ್ ಬಾರೋವರ್ಸ್–ಎ ಕೇಸ್ ಸ್ಟಡಿ ಆಫ್ ಚಿತ್ರದುರ್ಗ ಗ್ರಾಮೀಣ ಬ್ಯಾಂಕ್ ಇಂಡಿಯನ್ ಜರ್ನಲ್ ಆಫ್ ಅಗ್ರಿಕಲ್ಚರ್ ಇಕನಾಮಿಕ್ಸ್, ೬೦(೩).

೧೯. ಡಬ್ಲ್ಯುಡಬ್ಲ್ಯುಡಬ್ಲ್ಯು. ಗೂಗಲ್ ಕಾಮ್–ಡಿಸ್ಟ್ರಿಕ್ಟ್ ಪ್ರೊಫಯ್ಲ್ಸ್, ಹ್ಯಾಕ್ಸೆಸ್ಡ್ ಆನ್ ೨೬–೦೩–೨೦೧೪.

೨೦. ರೆಡ್ಡಿ ಎ.ಎ. (೨೦೦೬), "ಪ್ರೊಡಕ್ಟಿವಿಟಿ ಗ್ರೋತ್ ಇನ್ ಆರ್.ಆರ್. ಬಿಸ್" ಇಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲೀ.

ವೆಬ್ ಸೈಟುಗಳು

http:/india.govt.inGovt.of India

www.google.com

http:/www.karnatakagovt.in.govt.of karnataka